ಜನಪದ ಸೇವಕ


ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೮ ಏಪ್ರಿಲ್-೨೦೦೮ ಸಂಚಿಕೆ-೯



ಅಶಾಶ್ವತ ಆರ್ಥಿಕ ನೀತಿ ದೇಶಕ್ಕೆ ಆಪತ್ಕಾರಿ

ಜನಪದ ವಿಚಾರದಲ್ಲಿ

೧) ಅಶಾಶ್ವತ ಆರ್ಥಿಕ ನೀತಿ ದೇಶಕ್ಕೆ ಆಪತ್ಕಾರಿ

– *ಸುರೇಂದ್ರ ಕೌಲಗಿ* ಪುಟ – ೩

ಇಂದು ನಮ್ಮ ದೇಶದ ಆರ್ಥಿಕ ನೀತಿ, ಅಭಿವೃದ್ಧಿ ನೀತಿ ಇತ್ಯಾದಿಗಳೆಲ್ಲವು ಇತರ ದೇಶಗಳ ನೀತಿಗಳಿಂದ ಪ್ರಭಾವಿತಗೊಂಡಿದೆ. ಸ್ವಾತಂತ್ರ್ಯದ ಆರು ದಶಕಗಳ ನಂತರವೂ ನಮ್ಮ ದೇಶಕ್ಕೆ ತನ್ನದೇ ಆದ ಆರ್ಥಿಕ ನೀತಿ ಇಲ್ಲವೆಂಬುದು ೨೦೦೮–೦೯ ನೇ ಸಾಲಿನ ಬಜೆಟ್ ಸಿದ್ಧಪಡಿಸಿದೆ. ಈ ಬಗ್ಗೆ ಕೆಲವು ಟಿಪ್ಪಣಿಗಳು ಈ ಲೇಖನದಲ್ಲಿವೆ.

೨) ಗೃತ್ಸಮದ : ಜಗತ್ತು ಕಂಡ ಓರ್ವ ಮಹಾನ್ ಋಷಿ

– *ವಿನೋಬಾ* ಪುಟ – ೮

ಗೃತ್ಸಮದ ಮನುಷ್ಯನಿಗೆ ಆಹಾರ ಮತ್ತು ವಸತಿಯ ನಂತರ ಅಗತ್ಯವಾದ ಬಟ್ಟೆಯ ತಯಾರಿಕೆಯನ್ನು ಆಧ್ಯಾತ್ಮಿಕ ವಿಚಾರದ ಹಿನ್ನಲೆಯಲ್ಲಿ ಕಂಡು ಹಿಡಿದಂಥ ವೈದಿಕ ಋಷಿ. ಅವರ ಪರಿಚಯ ಈ ಲೇಖನದಲ್ಲಿದೆ.

೩) ಆಧ್ಯಾತ್ಮ ವಿಜ್ಞಾನಗಳ ಸಾಗಂತ್ಯದಿಂದ ವಿಶ್ವಶಾಂತಿ

– *ರಾಮಚಂದ್ರ ಪ್ರಭು* ಪುಟ –೧೩

ಆಧ್ಯಾತ್ಮಕ್ಕೆ ವಿಜ್ಞಾನದ ಒಳನೋಟ ಮತ್ತು ವಿಜ್ಞಾನಕ್ಕೆ ಆಧ್ಯಾತ್ಮದ ಸಂಸ್ಕಾರ ಇದ್ದರೆ ಇಂದಿನ ಜಗತ್ತು ಸುಖಮಯವಾದೀತು ಎಂಬ ಆಶಾಭಾವನೆಯನ್ನು ಹೊತ್ತಿದೆ ಈ ಲೇಖನ.

೪) ಅಸಹಕಾರ ಮತ್ತು ಗೃಹಸ್ಥ ಜೀವನದ ಬಗ್ಗೆ ಗಾಂಧಿ ಮತ್ತು ಟಾಗೋರ್

– *ಗುರುದಯಾಳ್ ಮಲ್ಲಿಕ್* ಪುಟ – ೧೮

ಅಸಹಕಾರವು ಪರಿಣಾಮಕಾರಿಯಾಗಬೇಕಾದರೆ ಮೊದಲು ಸಹಕಾರದ ಬಾಂಧವ್ಯದ ಬೆಸುಗೆ ಭದ್ರವಾಗಿರಬೇಕು. ಅನಂತರ ಮಾಡುವ ಅಸಹಕಾರ ತನ್ನ ಉದ್ದೇಶ್ಯವನ್ನು ಸಾಧಿಸಬಲ್ಲದು. ಅಂತೆಯೇ ಗೃಹಸ್ಥಜೀವನದ ಕ್ರಮವನ್ನು ಅನುಭವಿಸದ ವ್ಯಕ್ತಿಯ ಜೀವನ ಪರಿಪೂರ್ಣವಾಗಲಾರದು ಎಂಬ ಮೂಲಭೂತ ವಿಚಾರಗಳು ಈ ಲೇಖನದಲ್ಲಿ ಬಂದಿವೆ.

೫) ಮಾನವಿಯತೆಯ ವೈದ್ಯ ಡಾ॥ ವಿನಾಯಕ ಸೇನ್ ಪುಟ –೨೦

ಮಾನವ ಹಕ್ಕುಗಳು ಪವಿತ್ರ ಮತ್ತು ಅಗತ್ಯ ಎಂದು ಒಂದು ಕಡೆ ಹೇಳುತ್ತಿರುವಾಗಲೆ ಅವುಗಳ ರಕ್ಷಣೆಗಾಗಿ ಹೋರಾಟ ಮಾಡುವ ವ್ಯಕ್ತಿಗಳೆ ಆ ಹಕ್ಕುಗಳಿಂದ ವಂಚಿತರಾಗುವಂಥ ಉದಾಹರಣೆಗಳು ಅನೇಕ ಇವೆ. ಇತ್ತೀಚಿಗಿನ ಒಂದು ಜ್ವಲಂತ ಉದಾಹರಣೆಯನ್ನು ಈ ಲೇಖನದಲ್ಲಿ ದಾಖಲಿಸಲಾಗಿದೆ.

೬) ಪುಣೆ ಒಪ್ಪಂದ : ಎರಡು ದೊಡ್ಡ ಮನಸ್ಸುಗಳ ಬಂಧನ

–*ಅನಂತ ಕಲ್ಲೋಳ* ಪುಟ –೨೨

ಅಸ್ಪೃಶ್ಯತಾ ನಿವಾರಣಾ ವಿಚಾರವಾಗಿ ಅಂಬೇಡ್ಕರ್ ಮತ್ತು ಗಾಂಧಿ ಪರಸ್ಪರ ವಿಮುಖರಾಗಿ ನಿಂತಿದ್ದರೆಂಬುದು ಸಾಮಾನ್ಯ ತಿಳುವಳಿಕೆ. ಆದರೆ ಆಕಾಶದಿಂದ ಬಿದ್ದ ನೀರು ಸಮುದ್ರ ಸೇರುವಂತೆ ಇವರಿಬ್ಬರ ವಿಚಾರ ಅಸ್ಪೃಶ್ಯತಾ ನಿವಾರಣೆಯ ವಿಚಾರದ ಸಾಗರವನ್ನು ಸೇರಿದೆ ಎಂಬುದನ್ನು ಈ ಲೇಖನ ಪ್ರತಿಪಾದಿಸುತ್ತದೆ.

೭) ಆರ್ಥಿಕವಾಗಿ ಬೆಲೆಕಟ್ಟುವಿಕೆ ಒಂದೇ ಸಾಕೆ?

–*ಜೆ.ಸಿ..ಕುಮಾರಪ್ಪ* ಪುಟ –೨೬

೮) ಜನಪದ ನಿಲಯದ ಅಂತರಂಗದಲ್ಲಿ ... ೫೩ ಪುಟ –೩೧

ಜನಪದ ವಿಚಾರ
ತಿಂಗಳ ವೈಚಾರಿಕ ಡೈಜಸ್ಟ್

ಏಪ್ರಿಲ್ - ೨೦೦೮
ಸಂಪುಟ - ೮
ಸಂಚಿಕೆ - ೯

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

೦೮೨೩೬ ೩೧೯೩೪೪
e-mail - janapada@yahoo.com

ಅವಕಾಶ

ಓದಿದ ನಗೆ ಹನಿ
"ನಿನ್ನ ವಯಸ್ಸಿನಲಿ ಗಾಂಧಿ
ಆಫ್ರಿಕಾದಲ್ಲಿ ಲಾಯರ್ ಓದುತ್ತಿದ್ದರು
ನೀನೂ ಇದ್ದೀಯ----"
ಅಪ್ಪ ಗದರಿಸಿದ ಮಗನ ಮೇಲೆ ಕೆಕ್ಕರಿಸುತ್ತಾ,

"ನಿನ್ನ ವಯಸ್ಸಿನಷ್ಟರಲಿ
ಅವರಾಗಲೇ ಮಹಾತ್ಮರಾಗಿದ್ದರು;
ಆದರೆ ನೀನು---"
ತಣ್ಣಗೆ ನುಡಿದ ಮಗ ಪ್ರಪಾತಕ್ಕೆ ತಳ್ಳಿದಂತೆ.

ಹೌದು; ನಾನು ನಾನೇ
ಒಬ್ಬನ ಬದುಕು ಮತ್ತೊಬ್ಬನ ಪ್ರಕೃತಿಯಲ್ಲ.
ಅನುಕರಣೆ ಮಾತ್ರದಲ್ಲೇ
ಒಳಗಿನ ಮೊಳಕೆ ಚಿಗುರುವುದಿಲ್ಲ.

ಬೀಜಕ್ಕೆ ಬೇಕು; ಫಲವತ್ತಾದ ನೆಲ
ಬಲಿವವರೆಗೂ ರಕ್ಷಣೆಯ ಛಲ.
ಇಂಥ ಮರುಧರೆಯಲ್ಲಿ
ಹುಡುಕುವುದೆಂತು ತಂಪು ನೆಲವ
ಹಾಗೇನಾದರೂ ಸಿಕ್ಕಿ, ಚಿಗುರು ಕತ್ತೆತ್ತಿದರೆ
ದನ-ಕುರಿಗಳ ಹಾವಳಿ, ನೆಕ್ಯಾವು ಬುಡ ಸಹಿತ
ಆದರೂ ಒಳಗಿನ ಛಲ ಪುಟಿದರೆ
ಬೆಳೆಯಬಹುದು ಒಂದಿಷ್ಟು ಕುರುಚಲಾಗಿ ಮಾತ್ರ

ಸುತ್ತೆಲ್ಲಾ ಹಸನಾಗಿ
ಒಳಗಿನುಮ್ಮಸ್ಸಿಗೆ ಕುಮ್ಮಕ್ಕಿರದಿದ್ದರೆ
ಎಂಥ ಬೀಜದ ಕನಸೂ ಅರಳುವುದಿಲ್ಲ;
ಭ್ರಾಂತಿಯ ಬಡಬಡಿಕೆಗೆ ಅರ್ಥವಿಲ್ಲ.

- ಟಿ.ಎಂ. ಷಡಕ್ಷರಿ

ವಿಚಾರ ದೀಪ್ತಿ

ಗೆಲ್ಲುತ್ತಿರುವ ಹಣ ಸೋಲುತ್ತಿರುವ ಕನ್ನಡ

ನನ್ನ ಗೆಳೆಯರೊಬ್ಬರು ಹೇಳುತ್ತಿದ್ದರು. ಇತ್ತೀಚಿಗೆ ಅವರು ತಮ್ಮ ಸ್ವಂತ ಊರಿಗೆ ಹೋಗಿದ್ದರಂತೆ. ಅವರ ಹಳೆಯ ಗೆಳೆಯ ಒತ್ತಾಯ ಮಾಡಿ ಊಟಕ್ಕೆ ಆಮಂತ್ರಿಸಿದ. ಮನೆಯಲ್ಲಿ ಸ್ವೀಟ್ಸ್ ಮಾಡಿಸಿದ್ದೇನೆ ಎಂದು ಹೇಳಿದ. ಅವನು ಹೇಳಿದ ಸ್ವೀಟ್ಸ್ ಪಾಯಸ ಆಗಿತ್ತು. ಅವನಿಗೆ ಪಾಯಸ ಎಂದು ಹೇಳುವುದಕ್ಕೆ ಮುಜುಗರ. ಸ್ವೀಟ್ಸ್ ಅಂದರೆ ಅದಕ್ಕೊಂದು ಘನತೆ. ಈ ಸ್ವೀಟ್ಸ್ ಎನ್ನುವ ಸಾಮಾನ್ಯೀಕರಣದ ಒಂದು ಪದ. ನಮ್ಮ ಅನೇಕ ಥರಾವರಿಯ ಸಿಹಿ ತಿಂಡಿಗಳೆಲ್ಲವನ್ನೂ ಒಂದೇ ಏಟಿಗೇ ನುಂಗಿ ಹಾಕಿ ಬಿಟ್ಟಿದೆ. ಇದೊಂದು ಸಣ್ಣ ಉದಾಹರಣೆ ಅಷ್ಟೆ. ಈ ರೀತಿಯ ಇಂಗ್ಲಿಷ್ ಪದಗಳ ಸಾಮಾನ್ಯೀಕರಣಕ್ಕೆ ಸಿಕ್ಕಿ ನಮ್ಮ ಕನ್ನಡದ ನೂರಾರು ಪದಗಳು ಈಗಾಗಲೇ ನಲುಗಿಹೋಗಿವೆ. ಈ ಪ್ರಕ್ರಿಯೆಯಿಂದಾಗಿ ಕನ್ನಡ ಬಳಕೆಯ ವಲಯಗಳು ಸಂಕುಚಿತವಾಗುತ್ತಿವೆ.

ಕುತೂಹಲದ ವಿಷಯವೆಂದರೆ, ವಿದ್ಯುನ್ಮಾನ ಮಾಧ್ಯಮಗಳು ನಡೆಸುತ್ತಿರುವ ಭಾಷಾ ಮಿಶ್ರಣವನ್ನು ನಮ್ಮ ಮುದ್ರಣ ಮಾಧ್ಯಮಗಳು ಮಾಡುತ್ತಿಲ್ಲ ಎಂಬುದು. ಹಾಗೆ ನೋಡಿದರೆ, ವಿದ್ಯುನ್ಮಾನ ಮಾಧ್ಯಮಗಳು ಸಂಕುಚಿತಗೊಳಿಸುತ್ತಿರುವ ಕನ್ನಡ ಭಾಷಾ ಬಳಕೆಯ ವಲಯವನ್ನು ಮುದ್ರಣ ಮಾಧ್ಯಮಗಳು ಸಂರಕ್ಷಿಸುವ ಕೆಲಸ ಮಾಡುತ್ತಿವೆ. ಸಂರಕ್ಷಿಸುವುದಷ್ಟೇ ಅಲ್ಲ ವಿಸ್ತರಿಸುವ ಕೆಲಸವನ್ನೂ ಮಾಡುತ್ತಿವೆ. ಹೊಸ ಹೊಸ ತಂತ್ರಜ್ಞಾನದ ಪರಿಕಲ್ಪನೆಗಳಿಗೆ ಅವುಗಳೇ ಹೊಸ ಹೊಸ ಪದಗಳನ್ನು ಸೃಷ್ಟಿಸುತ್ತಿವೆ. ಸಾಮ್ಯರಚನೆಯ ಆಧಾರದ ಮೇಲೆ ಹೊಸ ಭಾಷಿಕ ರಚನೆಗಳನ್ನು ಸೃಷ್ಟಿಸುತ್ತಿವೆ. ಈ ಪ್ರಯತ್ನಗಳು ಕುತೂಹಲಕಾರಿಯಾಗಿದೆ. ಇಲ್ಲಿ ಗಮನಿಸಬೇಕಾದ ಒಂದು ಅಂಶ ಇದೆ. ಮಾತಿನಲ್ಲಿ ಅಷ್ಟೊಂದು ಇಂಗ್ಲಿಷ್ ಪದಗಳನ್ನು ಬಳಸುವ ಮಾತಿನ ಮಾಧ್ಯಮಗಳು ಮುದ್ರಣ ಮಾಧ್ಯಮಕ್ಕಿಂತ ಭಿನ್ನವಾಗಿಯೇ ಕಾಣುತ್ತವೆ. ಅಂದರೆ ಆಧುನಿಕ ಕನ್ನಡಿಗ ಮಾತಿನಲ್ಲಿ ಇಂಗ್ಲಿಷ್ ಭಾಷೆಯ ಮೋಹಕ್ಕೆ ನಿರೀಕ್ಷೆಗಿಂತ ಹೆಚ್ಚಾಗಿಯೇ ಆಕರ್ಷಿತನಾಗಿದ್ದಾನೆ. ತನ್ನ ವ್ಯಕ್ತಿತ್ವದ ಪ್ರದರ್ಶನಕ್ಕೆ 'ಆಂಗ್ಲ ಅಹಂ'ನ್ನು ಉದಾರವಾಗಿಯೇ ಬಳಸಿಕೊಳ್ಳುತ್ತಿದ್ದಾನೆ. ಅದೇ ಬರವಣಿಗೆಯ ಮಾಧ್ಯಮಗಳು ಕನ್ನಡಕ್ಕೆ ಹೆಚ್ಚಿನ ಒತ್ತುಕೊಡುವ ಮೂಲಕ ಕನ್ನಡದ ಸೊಗಸನ್ನು ಬದಲಾದ ಸನ್ನಿವೇಶಕ್ಕೆ ಒಗ್ಗಿಸಿಕೊಳ್ಳಲು ಪ್ರಯತ್ನಿಸುತ್ತಿವೆ.

– ಲಿಂಗದೇವರು ಹಳೇಮನೆ

* * *

ಅಶಾಶ್ವತ ಅರ್ಥ ನೀತಿ ದೇಶಕ್ಕೆ ಆಪತ್ಕಾರಿ

- ಸುರೇಂದ್ರ ಕೌಲಗಿ

ಚಿನ್ನದ ಪಾತ್ರೆಯಿಂದ ಸತ್ಯದ ಮುಖ ಮುಚ್ಚಿದೆ.

- ಈಶೋಪನಿಷತ್

ಕೇಂದ್ರ ಸರ್ಕಾರದ ಅರ್ಥ ಮಂತ್ರಿ ಪಿ. ಚಿದಂಬರಂರವರು ೨೦೦೮-೯ ನೇ ಸಾಲಿನ ಬಜೆಟ್ ಮಂಡಿಸಿದ್ದಾರೆ. ಆ ಬಜೆಟ್‌ನ ಮೂಲಕ ನಮ್ಮ ದೇಶದ ಮೂರು ಕೋಟಿ ರೈತರ ಬ್ಯಾಂಕ್ ಸಾಲವನ್ನು ಒಂದೇ ಏಟಿಗೆ ೬೦ ಸಾವಿರ ಕೋಟಿ ಮಂಜೂರು ಮಾಡುವುದರ ಮೂಲಕ ಮನ್ನಾ ಮಾಡಿ ಅಭೂತಪೂರ್ವವಾದ ಆರ್ಥಿಕ ಇತಿಹಾಸವನ್ನು ನಿರ್ಮಿಸಿದ್ದಾರೆ. ಈ ವಿಷಯವನ್ನು ತಿಳಿಯುತ್ತಿದ್ದಂತೆ ದೇಶವಾಸಿಯ ಬಹುಪಾಲು ಜನಕ್ಕೆ ಆಘಾತವಾಯಿತು, ಚಿಂತೆಯಾಯಿತು. ಸಾಲದ ಸುಳಿಯಲ್ಲಿ ಸಿಕ್ಕಿಹಾಕಿಕೊಂಡ ರೈತರ ಬಿಡುಗಡೆ ನಿಜವಾಗಿಯೂ ಆಯಿತೆ ಎಂಬ ಅನುಮಾನವೂ ಉಂಟಾಯಿತು. ತಾವು ಸಾಲದ ಶೂಲದಿಂದ ಬಿಡುಗಡೆಯಾದುದನ್ನು ತಿಳಿದು ದೇಶದ ಯಾವುದೇ ಭಾಗದಲ್ಲಿ ರೈತರು ಬಹಿರಂಗವಾಗಿ, ಸಾಮೂಹಿಕವಾಗಿ ತಮ್ಮ ಸಂತೋಷವನ್ನು ವ್ಯಕ್ತಮಾಡಿದ ನಿದರ್ಶನ ಕಾಣಲಿಲ್ಲ ಮತ್ತು ಕೇಳಿ ಬರಲಿಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ರೈತರು ಹೋರಾಟ ನಡೆಸಿ ಇಂಗ್ಲಿಷ್ ಸರ್ಕಾರದಿಂದ ಭೂಗಂದಾಯದ ವಜಾ ಆದಾಗ ವ್ಯಕ್ತ ಪಡಿಸಿದ್ದ ಸಂತೋಷ ಸ್ವತಂತ್ರ ಭಾರತದಲ್ಲಿ ನಮ್ಮದೇ ಸರ್ಕಾರ ಸಾಲವನ್ನು ಮನ್ನಾ ಮಾಡಿದಾಗ ವ್ಯಕ್ತವಾಗಲಿಲ್ಲ. ರೈತರಿಗೆ ಇರುವ ಭೀತಿ ಏನೆಂದರೆ ಈ ಸಾಲ ಮನ್ನಾ ಯೋಜನೆ ಅವರು ಹೊಸ ಸಾಲ ಮಾಡುವುದಕ್ಕೆ ಪ್ರಚೋದನೆ ಮತ್ತು ಪ್ರೇರಣೆ ಕೊಡುತ್ತದೆಂಬುದರ ಜೊತೆಗೆ ತಮ್ಮ ನೈತಿಕ ಮಟ್ಟ ಕುಸಿಯುತ್ತಿದೆಯಲ್ಲಾ ಎಂಬ ಕೊರಗು. ನಮ್ಮ ದೇಶದ ರೈತ ಎಂಥ ಕಷ್ಟದಲ್ಲಿದ್ದರೂ, ಬಡತನದಲ್ಲಿದ್ದರೂ ತೆಗೆದುಕೊಂಡ ಸಾಲವನ್ನು ಹಿಂದಿರುಗಿಸಬೇಕು, ಹಿಂದಿರುಗಿಸದಿದ್ದರೆ ಅದೊಂದು ಪಾಪ, ಶಾಪ ಎಂದು ಭಾವಿಸಿದ್ದ. ಅದನ್ನು ಕಾರ್ಯದ ಮೂಲಕ ಯಥಾಶಕ್ತಿ ಮಾಡುತ್ತಲೂ ಇದ್ದ. ಆ ಮೂಲಕ ತನ್ನ ಆತ್ಮ ಗೌರವವನ್ನು ಉಳಿಸಿಕೊಂಡಿದ್ದ. ಒಂದು ವೇಳೆ ಪಡೆದ ಸಾಲವನ್ನು ಹಿಂದಿರುಗಿಸಲಾಗದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದ. ಅವನಲ್ಲಿದ್ದ ಸ್ವಾಭಿಮಾನವೇ ಅವನನ್ನು ಆತ್ಮಹತ್ಯೆಯಂಥ ಭಯಂಕರವಾದ ಕ್ರಮ ಕೈಗೊಳ್ಳುವಂತೆ ಮಾಡುತ್ತಿತ್ತು. ಹಾಗೆ ನೋಡಿದರೆ ಚಿದಂಬರಂರವರ ಸಾಲ ಮನ್ನಾ ಯೋಜನೆ ಮೂಡಿ ಬಂದದ್ದು ರೈತರ ಸಾಲಕ್ಕೆ ನಿಜವಾದ ಕಾರಣಗಳೇನು ಎಂಬುದರ ವಿಶ್ಲೇಷಣೆಗಿಂತ ವಿದರ್ಭ, ಆಂಧ್ರಪ್ರದೇಶ, ಕರ್ನಾಟಕ, ಮತ್ತು ಇತರ ರಾಜ್ಯಗಳಲ್ಲಿ ಅವ್ಯಾಹತವಾಗಿ ನಡೆದು ಬಂದ ರೈತರ ಆತ್ಮಹತ್ಯೆಗಳ ಪೆಡಂಭೂತಗಳ ಪ್ರಚೋದನೆಯಿಂದ. ಚಿದಂಬರಂರವರ ಅರವತ್ತು ಸಾವಿರ ಕೋಟಿ ಸಾಲ ಮನ್ನಾ ಒಂದು ರೀತಿಯಲ್ಲಿ ಆತ್ಮಹತ್ಯೆ ಮಾಡಿಕೊಂಡ ಹತ್ತು ಲಕ್ಷ ರೈತರ ಮರಣೋತ್ತರ ಕಾರ್ಯಕ್ರಮಗಳಿಗೆ

ಮಂಜೂರಾಗಿದೆ ಎಂದು ಹೇಳಬಹುದು. ಏಕೆಂದರೆ ಸಾಲ ಮನ್ನಾದ ಯೋಜನೆಯಲ್ಲಿ ರೈತರ ಸಮಗ್ರ ಹಿತದ ಭಾವನೆಗಿಂತ ೨೦೦೯ ರಲ್ಲಿ ಬರುವ ಸಾರ್ವತ್ರಿಕ ಚುನಾವಣೆಯಲ್ಲಿ ಯು.ಪಿ.ಎ.ನಲ್ಲಿರುವ ಪಕ್ಷಗಳು ಗೆದ್ದು ಬಂದು ಪುನಃ ಅಧಿಕಾರ ಹಿಡಿಯುವ ಹುನ್ನಾರ ಇದೆಯೆಂದು ಸ್ಪಷ್ಟವಾಗಿ ಹೇಳಬಹುದು. ಇದು ರೈತರ ಸಾಲದ ಕ್ಷಮೆಯಲ್ಲ ಮತದಾರರಲ್ಲಿ ಮಾಡಿಕೊಂಡ ಕ್ಷಮಾಯಾಚನೆಯಾಗಿದೆ.

ಚಿದಂಬರಂರವರ ಬಜೆಟ್‌ನ್ನು ಸ್ಥೂಲವಾಗಿ ಪರಿಶೀಲಿಸಿದರೆ ಮತ್ತು ಆನಂತರದ ಆರ್ಥಿಕ ನೀತಿಗಳ ಪ್ರತಿಪಾದನೆಯನ್ನು ಪರಿಶೀಲಿಸಿದರೆ ಆದೊಂದು ಬಿರುಗಾಳಿಯಲ್ಲಿಯ ತರಗೆಲೆಯ ಬಜೆಟ್‌ನಂತೆ ಇದೆ. ಅದಕ್ಕೆ ಸ್ಥಿರವಾದ ಆಧಾರವಿಲ್ಲ. ಸಂಪನ್ಮೂಲಗಳ ಕ್ರೋಢಿಕರಣ ಸ್ಪಷ್ಟವಾಗಿಲ್ಲ. ಬಜೆಟ್ ಸಮಾಜದ ಎಲ್ಲ ವರ್ಗಗಳ ಅಂದರೆ ಶೋಷಿತರ ಮತ್ತು ಶೋಷಣೆ ಮಾಡುವ ವರ್ಗಗಳನ್ನು ಏಕಕಾಲಕ್ಕೆ ಓಲೈಸಿಕೊಳ್ಳುವ ಪ್ರಯತ್ನ ಮಾಡಿದೆ. ಬಜೆಟ್‌ನಲ್ಲಿ ಬಹು ಮುಖ್ಯವಾದ ಹಲವಾರು ಅಂಶಗಳು ಅಥವಾ ನೀತಿ ನಿರ್ಧಾರಕ ಅಂಶಗಳು ಪ್ರತಿಫಲಿತವಾಗಿಲ್ಲ.

೨೦೦೮-೯ ನೇ ಸಾಲಿನ ಬಜೆಟ್ ಸ್ವತಂತ್ರ ಭಾರತದ ೬೧ ನೇ ಬಜೆಟ್ ಆಗಿರಬಹುದು. ಈ ಹಿಂದಿನ ಯಾವ ಬಜೆಟ್‌ಗಳಿಗೂ ದೇಶದ ನಿಜವಾದ ಅಭಿವೃದ್ಧಿಯ ಕಲ್ಪನೆ ಇರದಂತೆಯೇ ಈ ಅಚ್ಚ ಹೊಸ ಬಜೆಟ್‌ಗೂ ಸುಸ್ಥಿರ ಮತ್ತು ಸಾವಯವಕವಾದ ಅಭಿವೃದ್ಧಿಯನ್ನು ಪ್ರಚೋದಿಸುವ ಕಲ್ಪನೆಯಿಲ್ಲ. ಬದಲಾಗಿ ದೇಶವನ್ನು ಆರ್ಥಿಕವಾಗಿ ಆಪತ್ಕಾರಿ ಪರಿಸ್ಥಿತಿಯತ್ತ ಕೊಂಡೊಯ್ಯುವ ಅಸುರಿ ಬಜೆಟ್ ಇದಾಗಿದೆ. ಈ ಬಜೆಟ್‌ನಲ್ಲಿಯ ಪ್ರಮುಖ ಆಪತ್ಕಾರಿ ಅಂಶಗಳು ಹೀಗಿವೆ:-

೧) ಸಾಲದ ಮನ್ನಾಕ್ಕೆ ಇಟ್ಟುಕೊಳ್ಳಲಾಗಿರುವ ಎರಡು ಹೆಕ್ಟೇರ್ ಪ್ರಮಾಣ ದೇಶದ ಬಹುಪಾಲು ಚಿಕ್ಕ ಹಿಡುವಳಿದಾರ ರೈತರನ್ನು ಸಾಲ ಮನ್ನಾದಿಂದ ಹೊರಗಿಟ್ಟಿದೆ.

೨) ದೇಶದ ರೈತರಲ್ಲಿ ಶೇಕಡಾ ೪೨.೩ ರಷ್ಟು ರೈತರು ಖಾಸಗಿ ವಲಯದ ಸಾಲಗಾರರಾಗಿದ್ದಾರೆ. ಇವರಿಗೆ ಸಾಲ ಮನ್ನಾದ ಪ್ರಯೋಜನವೇನೂ ಆಗಿಲ್ಲ. ೨೦೦೩ ನೇ ಇಸ್ವಿಯಲ್ಲಿಯೇ ಇವರ ಸಾಲ ೪೮,೦೦೦ ಕೋಟಿ ಇತ್ತು.

೩) ರೈತರು ಬೆಳೆಯುವ ಆಹಾರ ಪದಾರ್ಥಗಳಿಗೆ ಬೆಲೆ ಸ್ಥಿರತೆಯ ನಿಧಿಯ ಬಗ್ಗೆ ಯಾವ ಸುಳಿವೂ ಬಜೆಟ್‌ನಲ್ಲಿ ಇಲ್ಲ.

೪)ಮನ್ನಾ ಸಾಲದ ಮೊತ್ತದಲ್ಲಿ ೯,೨೧೦ ಕೋಟಿ ರೂಪಾಯಿ ಮಹಾರಾಷ್ಟ್ರಕ್ಕೆ ಸಲ್ಲುತ್ತದೆ. ಅಂದರೆ ಮನ್ನಾ ಸಾಲದ ಮೊತ್ತದ ಆರನೇ ಒಂದು ಭಾಗ. ಇನ್ನು ದೇಶದ ಉಳಿದ ರೈತರ ಸಂಕಷ್ಟದ ಪ್ರದೇಶಗಳಾದ ರಾಯಲಸೀಮಾ, ಬುಂದೇಲಖಂಡ್, ಕರ್ನಾಟಕದ ಗತಿ ಏನು ?

೨೦೦೮-೯ ನೇ ಸಾಲಿನ ಬಜೆಟ್ ರೈತರ ಮತ್ತು ವ್ಯವಸಾಯದ ಮತ್ತು ಗ್ರಾಮೀಣ ಪ್ರದೇಶದ ಹಿತವನ್ನು ಇಟ್ಟುಕೊಂಡು ರಚಿತವಾಗಿಲ್ಲ. ಈ ಬಜೆಟ್

ಬರಲಿರುವ ಮಹಾ ಚುನಾವಣೆಯನ್ನು ಗಮನದಲ್ಲಿರಿಸಿಕೊಂಡೇ ತಯಾರಾಗಿದೆಯೆಂಬುದು ಇಡೀ ದೇಶವೇ ಹೇಳುತ್ತಿದೆ. ಯಾವುದೇ ಕಾರಣದಿಂದ ಮುಂದಿನ ಒಂದೆರಡು ವರ್ಷಗಳಲ್ಲಿ ಕೃಷಿ ಉತ್ಪಾದನೆ ಹಾಗೂ ಮಾರುಕಟ್ಟೆಗಳ ಮಧ್ಯದಲ್ಲಿ ಸುಯೋಗ್ಯ ಸಮತೋಲನ ಉಂಟಾಗದಿದ್ದರೆ ರೈತರು ಪುನಃ ಆತ್ಮಹತ್ಯೆಗೆ ಇಳಿಯುವ ಸಾಧ್ಯತೆಯಿದೆ. ಇಂಥ ಅನಿರೀಕ್ಷಿತ ಪರಿಸ್ಥಿತಿಯಿಂದ ರೈತರನ್ನು ಕಾಪಾಡುವ ಯಾವ ಉಪಾಯವೂ ಬಜೆಟ್‌ನಲ್ಲಿ ಇಲ್ಲ.

ವರ್ಷದಿಂದ ವರ್ಷಕ್ಕೆ ಕೃಷಿ ಭೂಮಿ ಕಡಿಮೆ ಆಗುತ್ತಿದೆ.ಅಭಿವೃದ್ಧಿಯ ಹೆಸರಿನಲ್ಲಿ ನಿರ್ಮಾಣವಾಗುತ್ತಿರುವ ಕಟ್ಟಡಗಳು, ರಸ್ತೆಗಳು, ವಿಮಾನ ನಿಲ್ದಾಣಗಳು, ವಿಶ್ವ ವಿದ್ಯಾಲಯಗಳು, ರಕ್ಷಣಾ ಇಲಾಖೆಗಳು, ನಗರಗಳು, ವಿದ್ಯುತ್ ಸ್ಥಾವರಗಳು, ಎಸ್.ಇ.ಝಡ್‌ಗಳು ಇತ್ಯಾದಿಗಳು ಕೃಷಿ ಭೂಮಿಯನ್ನು ಅಗಾಧ ಪ್ರಮಾಣದಲ್ಲಿ ಕಬಳಿಸುತ್ತಿವೆ. ಸರ್ಕಾರವೇ ಕೃಷಿ ಭುಮಿಯು ಕ್ಷೀಣಗೊಳ್ಳುತ್ತಾ ಹೋಗುವುದಕ್ಕೆ ಪ್ರೋತ್ಸಾಹ ನೀಡುತ್ತಿದೆ. ಬೆಳೆಯುತ್ತಿರುವ ಜನಸಂಖ್ಯೆ, ಆ ಜನಸಂಖ್ಯೆಗೆ ಬೇಕಾಗುವ ಆಹಾರದ ಅನುಪಾತಕ್ಕೂ, ಕೃಷಿಗೆ ಒಳಪಟ್ಟಿರುವ ಭೂಮಿಗೂ ದೊಡ್ಡ ವ್ಯತ್ಯಾಸವುಂಟಾಗುತ್ತದೆ. ಕೃಷಿ ವಲಯದಲ್ಲಿ ಕೆಲಸ ಮಾಡುವವರ ಸಂಖ್ಯೆ ದಿನೇ ದಿನೇ ಕಡಿಮೆಯಾಗುತ್ತಿದೆ.

ಈಗ ಸರ್ಕಾರ ಅಕ್ಕಿ, ಗೋಧಿ, ಎಣ್ಣೆ ಮುಂತಾದ ದಿನವಹಿ ಜೀವನಾವಶ್ಯಕ ಪದಾರ್ಥಗಳನ್ನು ಆಮದು ಮಾಡುಕೊಳ್ಳುತ್ತಿದೆ.ಈ ಆಹಾರ ಪದಾರ್ಥಗಳನ್ನು ದೇಶದಲ್ಲಿಯೇ ಬೆಳೆಯಲು ಸಾಧ್ಯವಿರುವಾಗಲೂ ಅವುಗಳನ್ನು ಅಮದು ಮಾಡಿಕೊಳ್ಳ ಬೇಕಾದಂಥ ವಿಚಿತ್ರ ಸನ್ನಿವೇಶವನ್ನು, ಆರ್ಥಿಕ ವ್ಯವಸ್ಥೆಗೆ ಧಕ್ಕೆ ತರುವಂಥ ಪರಿಸ್ಥಿತಿಯನ್ನು ಮಾಡಿಕೊಳ್ಳಲಾಗಿದೆ. ಇಂಥ ವಿಷಯಗಳ ಬಗ್ಗೆ ಬಜೆಟ್‌ನಲ್ಲಿ ವಿಶೇಷವಾದ ಗಮನವಿಲ್ಲ.

ಇನ್ನು ಗ್ರಾಮಾಂತರ ಪ್ರದೇಶದಲ್ಲಿಯ ನಿರುದ್ಯೋಗವನ್ನೂ, ಬಡತನವನ್ನೂ ಇಲ್ಲದಂತೆ ಮಾಡಬೇಕೆಂಬ ಮಹತ್ವಾಕಾಂಕ್ಷಿ ಯೋಜನೆಯಾದ ಉದ್ಯೋಗ ಭರವಸೆ ಯೋಜನೆ ಕುಂಠಿತಗೊಳ್ಳುತ್ತಿದೆ. ಅನೇಕ ರಾಜ್ಯಗಳು ಈ ಯೋಜನೆಯನ್ನು ರದ್ದು ಪಡಿಸಲು ಒತ್ತಾಯಿಸುತ್ತಿವೆ. ಇದು ಗುತ್ತಿಗೆದಾರರ, ರಾಜಕೀಯ ಮುಖಂಡರ ಹಣ ಸಂಪಾದನೆಗೆ ಹುಲ್ಲುಗಾವಲಾದಂತಾಗಿದೆ.

ಚಿದಂಬರಂರವರಾಗಲೀ, ಮೊದಲಿನ ವಿತ್ತ ಮಂತ್ರಿಗಳಾಗಲೀ ಮಂಡಿಸುವ ಬಜೆಟ್ ಕೇವಲ ತಾತ್ಕಾಲಿಕ ಪ್ರಯೋಜನಗಳನ್ನಿಟ್ಟುಕೊಂಡು ಮಂಡಿಸಿರುವ ಬಜೆಟ್‌ಗಳಾಗಿರುತ್ತವೆ. ಮುಖ್ಯವಾಗಿ ಎಲ್ಲ ಬಜೆಟ್‌ಗಳೂ ಸಿದ್ಧಾಂತರಹಿತ, ಆದರ್ಶರಹಿತವಾಗಿರುತ್ತವೆ. ಕೇವಲ ರಾಜಕೀಯ ದೃಷ್ಟಿಯಿಂದ ಕೂಡಿರುತ್ತವೆ. ಮಂಡಿಸಲಾಗುವ ಪ್ರತಿಯೊಂದು ಬಜೆಟ್ಟೂ ದೇಶವನ್ನು ಹೆಚ್ಚು ಬಲಿಷ್ಠಗೊಳಿಸುವುದರ ಬದಲಾಗಿ ದುರ್ಬಲಗೊಳಿಸುತ್ತಾ ಹೋಗುತ್ತಿದೆ. ಪ್ರತಿವರ್ಷದ ಬಜೆಟ್ಟಿನಲ್ಲೂ ಸಿಂಹಪಾಲು ಹಣ ರಕ್ಷಣಾವೆಚ್ಚಕ್ಕೇ ಹೋಗುತ್ತದೆ. ರಕ್ಷಣೆಯ ವಿಷಯದಲ್ಲಿ ದೇಶವನ್ನು ಸುಭದ್ರಗೊಳಿಸಿದರೆ ಇಡೀ ದೇಶವನ್ನೇ ಬಲಪಡಿಸಿದಂತೆಂಬ ಭಾವನೆ ಇದೆ. ಈ ಭಾವನೆ ೨೦೦೮-೯ರ

ಬಜೆಟ್‌ನ ವಿವಿಧ ಕ್ಷೇತ್ರಗಳಿಗೆ ಮಂಜೂರಾಗಿರುವ ಹಣವನ್ನು ನೋಡಿದರೆ ಗೊತ್ತಾಗುತ್ತದೆ. ರಕ್ಷಣಾವೆಚ್ಚಕ್ಕೆ ಒಂದು ಲಕ್ಷ ಕೋಟಿ ಹಣವನ್ನು ಮೀಸಲಿಡಲಾಗಿದೆ. ಅಂದರೆ ದೇಶದ ಭದ್ರತೆ ಜನತೆಯ ಜೀವನದ ಭದ್ರತೆಗಿಂತ ಸೈನ್ಯ, ಯುದ್ಧ ಶಸ್ತ್ರಾಸ್ತ್ರ ಮುಂತಾದವುಗಳಲ್ಲಿ ಇದೆ ಎಂದು ಸರ್ಕಾರ ನಂಬಿದಂತಿದೆ. ಈ ರೀತಿಯ ಆಲೋಚನಾ ಕ್ರಮದ ಬಜೆಟ್ ಒಂದರ್ಥದಲ್ಲಿ ದೇಶದ ರಾಜಕೀಯ ಮತ್ತು ಸಾಮಾಜಿಕ ಜೀವನದ ಮೇಲೆ ದುಷ್ಪರಿಣಾಮ ಬೀರುತ್ತದೆ.

ನಮಗೆ ಇನ್ನು ಬೇಕಾಗಿರುವುದು ವಿಶೇಷವಾದ ರೀತಿಯಲ್ಲಿ ರಾಷ್ಟ್ರವನ್ನು ಕಟ್ಟುವ ಬಜೆಟ್. ದೇಶದಲ್ಲಿ ಶಾಂತಿ, ನೆಮ್ಮದಿ, ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಬರುವಂಥ ಬಜೆಟ್. ಕೇಂದ್ರ ಮತ್ತು ರಾಜ್ಯಗಳ ಬಜೆಟ್ ಮಂಡನೆಯಾಗುತ್ತಲೇ ಆಹಾರ ಪದಾರ್ಥಗಳ ಬೆಲೆ ಗಗನಕ್ಕೆ ಏರುತ್ತದೆ. ಹಣದುಬ್ಬರ ಹೆಚ್ಚಾಗುತ್ತದೆ, ಬಡವ-ಶ್ರೀಮಂತರ ಮಧ್ಯ ಅಂತರ ಹೆಚ್ಚಾಗುತ್ತದೆ; ಗ್ರಾಮಗಳು ದುರ್ಬಲವಾಗುತ್ತವೆ; ಐಶಾರಾಮಿ ಜೀವನ ಹೆಚ್ಚಾಗುತ್ತದೆ; ಶಿಕ್ಷಿತ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಗುತ್ತದೆ; ಭೂಮಿಯ ಬೆಲೆ ಅತಿಯಾಗಿ ಏರುತ್ತದೆ; ಪ್ರಜೆಗಳ ಕೈಯಲ್ಲಿ ಹಣದ ಚಲಾವಣೆ ಅತಿಯಾಗಿರುವಂತೆ ಕಂಡರೂ ಅವರ ಜೀವನದಲ್ಲಿ ಅಸಂತೋಷದ ಹೊಗೆ ಆಡುತ್ತಲೇ ಇರುತ್ತದೆ. ಇದೆಲ್ಲಕ್ಕಿಂತ ಹೆಚ್ಚಾಗಿ ಸಮಾಜದ ಒಂದು ವರ್ಗ ಇನ್ನೊಂದು ವರ್ಗಕ್ಕೆ ಮಿತ್ರನಾಗುವುದಕ್ಕೆ ಬದಲಾಗಿ ಶತ್ರುವಾಗುತ್ತದೆ. ಅಂದರೆ ಪರಾಪಹಾರವರ್ಗ ಸೃಷ್ಟಿಯಾಗುತ್ತದೆ. ನಮ್ಮ ದೇಶದ ಅರ್ಥವ್ಯವಸ್ಥೆ ಬಲಾಢ್ಯ ರಾಷ್ಟ್ರಗಳ ಅರ್ಥವ್ಯವಸ್ಥೆಯ ಚಕ್ರದ ಒಳಚಕ್ರವಾಗಿ ಸುತ್ತಬೇಕಾಗುತ್ತದೆ.

ನಮ್ಮ ದೇಶವು ಮುಖ್ಯವಾಗಿ ಆಮದಾಗುವ ಇಂಧನಗಳನ್ನೇ ಅವಲಂಬಿಸಿರುವುದರಿಂದ ಸ್ವತಂತ್ರವಾದ ಮತ್ತು ಸ್ಥಿರವಾದ ಅರ್ಥನೀತಿಯನ್ನು ಹೊಂದಲು ಸಾಧ್ಯವಾಗದೇ ಇರುವಂಥ ಪರಿಸ್ಥಿತಿಗೆ ನಮ್ಮ ದೇಶವನ್ನು ನಮ್ಮ ಬಜೆಟ್ ತಳ್ಳಿದೆ.

ಸ್ವಾತಂತ್ರ್ಯದ ಅರವತ್ತೈದು ವರ್ಷಗಳು ಕಳೆದ ಬಳಿಕವೂ ನಮ್ಮ ದೇಶದ ಬಜೆಟ್ ಅರ್ಥಹೀನವಾಗಿ, ಕೆಲಸಕ್ಕೆ ಬಾರದ್ದಾಗಿ ರಚಿತವಾಗುತ್ತಿರುವುದು ಭಾರತೀಯರ ದುರ್ದೈವ. ಈ ದುರ್ದೈವದ ನೋವನ್ನು ಹೆಚ್ಚು ಮಾಡುತ್ತಿರುವ ಇನ್ನೊಂದು ಪ್ರಮುಖ ಅಂಶವೇನೆಂದರೆ ದೇಶವು ತನ್ನ ಆಹಾರ, ರಕ್ಷಣೆ, ಶಿಕ್ಷಣ, ಇಂಧನ, ಉದ್ಯೋಗ, ಕೃಷಿ ಅಗತ್ಯ ಬೀಜ ಮುಂತಾದ ಎಲ್ಲಾ ಕ್ಷೇತ್ರಗಳಲ್ಲಿ ಸ್ವಾವಲಂಬಿತವಾಗದೆ ಪರಾವಲಂಬಿತವಾಗುತ್ತಿರುವುದು ಈಗ ನಮ್ಮನ್ನು ಅಶಾಶ್ವತ, ಕ್ಷಣಿಕ ಆರ್ಥಿಕ ನೀತಿ ಬಂಧಿಸಿದೆ. ಈ ಬಂಧನದಿಂದ ಬಿಡುಗಡೆಹೊಂದಿ ಶಾಶ್ವತ, ಸುಸ್ಥಿರ, ಸಜೀವ, ಸ್ವಾವಲಂಬಿತ, ಸ್ವಾಭಿಮಾನಿ, ಸ್ವಯಂಚಾಲಿತ ಅರ್ಥವ್ಯವಸ್ಥೆಯನ್ನು ಭಾರತೀಯರು ನಿರ್ಮಾಣ ಮಾಡಬೇಕಾಗಿದೆ. ಇಂಥ ಅರ್ಥ ವ್ಯವಸ್ಥೆಯನ್ನು ಸ್ಥಾಪಿಸಬೇಕಾದರೆ ನಿಧಾನವಾಗಿಯೇ ಆದರೂ ಸರಿಯೆ ದೃಢ ಸಂಕಲ್ಪದಿಂದ ಇಂದಿನ ಆರ್ಥಿಕ ರೀತಿ-ನೀತಿಗಳನ್ನು-ಜೀವನ ವಿಧಾನಗಳನ್ನು ವ್ಯಕ್ತಿ ನೆಲೆಯಲ್ಲಿ, ಗ್ರಾಮ ಹಂತದಲ್ಲಿ ಬದಲಾಯಿಸುತ್ತಾ ಹೋಗಬೇಕು.

* * *

ಸಂಗೀತ ಕಲಾವಿದರು – ೬

ಗಾಯಕಿ ಸುಗುಣಾಪುರುಷೋತ್ತಮನ್

ಸುಗುಣಾ ಪುರುಷೋತ್ತಮನ್‌ರವರು ಮುಸರಿ ಶಿಷ್ಯ ಪರಂಪರೆಯ ಓರ್ವ ಪ್ರಸಿದ್ಧ ಸಂಗೀತಜ್ಞೆ, ಅವರಿಗೆ ಈ ಕ್ಷೇತ್ರದಲ್ಲಿ ನಲವತ್ತು ವರ್ಷಗಳ ಅನುಭವವಿದೆ. ಇವರು ಕರ್ನಾಟಕ ಸಂಗೀತ ಪರಂಪರೆಯ ಮತ್ತು ಶುದ್ಧ ಶೈಲಿಯ ಅದ್ವಿತೀಯ ಗಾಯಕಿ.ಇವರು ಸ್ವರ್ಗೀಯ ಸೋಮನಗುಡಿ ಆರ್.ಶ್ರೀನಿವಾಸ್ ಅಯ್ಯರ್‌ರವರಿಂದ ಅನೇಕ ಸಂಗೀತ ರಚನೆಗಳ ಜ್ಞಾನವನ್ನು ಪಡೆದರು. ತಿನ್ನಿಯಮ್ ವೆಂಕಟರಾಮ್ ಅಯ್ಯರ್‌ರವರ ಮಾರ್ಗದರ್ಶನದಲ್ಲಿ ರಾಗಮ್, ತಾನಮ್, ಪಲ್ಲವಿಯಲ್ಲಿ ದಕ್ಷತೆಯನ್ನು ಸಂಪಾದಿಸಿಕೊಂಡರು. ದ್ವಿತಾಲ್ ಅವಧಾನದಲ್ಲಿ ಕುಶಲತೆಯನ್ನು ಹೊಂದಿದ್ದಾರೆ. ಈ ಕಾರಣಕ್ಕಾಗಿಯೆ ಇವರು ಅನೇಕ ಪ್ರತಿಷ್ಠಿತ ಸಂಸ್ಥೆಗಳಿಂದ ಗೌರವಿಸಲ್ಪಟ್ಟಿದ್ದಾರೆ. ಸುಗುಣಾ ಪುರುಷೋತ್ತನ್‌ರವರು ಕರ್ನಾಟಕ ಸಂಗೀತಕ್ಕೆ ಬಹು ಆಯಾಮಿ ಕಾಣಿಕೆ ಸಲ್ಲಿಸಿದ್ದಾರೆ. ಓರ್ವ ಸನ್ಮಾನಿತ ಮತ್ತು ಜನಪ್ರಿಯ ಕಲಾಕಾರರಾಗಿ ಯಶಸ್ವಿ ಗುರುವಾಗಿ, ಮತ್ತು ಉತ್ಕೃಷ್ಟ ಸಂಗೀತಗಾರರ ರೂಪದಲ್ಲಿ ಈ ಕಾಣಿಕೆಯನ್ನು ಸಲ್ಲಿಸಿದ್ದಾರೆ. ಇವರನ್ನು ಅನೇಕ ಪುರಸ್ಕಾರಗಳಿಂದ ಮತ್ತು ಉಪಾದಿಗಳಿಂದ ಸನ್ಮಾನಿಸಲಾಗಿದೆ.

ಸಂಗೀತ ಕಲಾವಿದರು – ೭

ಸಿತಾರ್ ವಾದಕಿ ಕೇಕ ಮುಖರ್ಜಿ

ಸಂಗೀತಜ್ಞ ಪರಿವಾರದಲ್ಲಿ ಜನ್ಮ ಪಡೆದ ಶ್ರೀಮತಿ ಕೇಕ ಮುಖರ್ಜಿಯವರು ಚಿಕ್ಕವಯಸ್ಸಿನಲ್ಲಿಯೆ ಸಂಗೀತದ ಜ್ಞಾನವನ್ನು ತಮ್ಮ ಚಿಕ್ಕಪ್ಪ ವಿಶ್ವನಾಥ ಚಟರ್ಜಿಯವರ ಮಾರ್ಗದರ್ಶನದಲ್ಲಿ ಪಡೆದರು. ಇದಾದ ನಂತರ ಇವರು ಮೈಹರ್ ಪರಂಪರೆಯ ಪ್ರೊ. ಇಂದ್ರನೀಲ್ ಭಟ್ಟಾಚಾರ್ಯಜೀಯವರಿಂದ ಸಂಗೀತದ ಪರಂಪರೆಯ ಶಿಕ್ಷಣವನ್ನು ಪಡೆದರು. ಇವರು ಬಾಲಕಿಯಾಗಿದ್ದಾಗಲೆ ವಿದ್ವಾನ್ ಸ್ವರ್ಗೀಯ ನಿಖಿಲ್ ಬ್ಯಾನರ್ಜಿಯವರ ಮಾರ್ಗದರ್ಶನವೂ ಕೂಡ ದೊರೆಯಿತು. ತದನಂತರ ಇವರು ಸುಪ್ರಸಿದ್ಧ ಸಿತಾರ್‌ವಾದಕ ಮತ್ತು ಸಂಗೀತಶಾಸ್ತ್ರಿ ಪ್ರೊ. ಅಜಯ್‌ಸಿನ್ಹಾರವರ ಆಶ್ರಮಕ್ಕೆ ಬಂದರು. ಪ್ರೊಫೆಸರ್ ಸಿನ್ಹಾರಾಯ್‌ರವರಿಂದ ಸುಮಾರು ಒಂದು ದಶಕ ಕಾಲ ಪ್ರಶಿಕ್ಷಣ ಪಡೆದರು. ಆನಂತರ ಕೇಕ ಮುಖರ್ಜಿಯವರು ಪಂಡಿತ್ ಅನಿಂದೊ ಚಟರ್ಜಿಯವರಿಂದ ಲಯ, ಛಂದಾ ಮತ್ತು ತಿಹಾಯಿಯ ಜ್ಞಾನವನ್ನು ಪಡೆದರು. ಕೇಕರವರ ಸಿತಾರ್ ಪ್ರದರ್ಶನ ಅದ್ವಿತೀಯವಾಗಿದೆ. ಇದಕ್ಕೆ ಪ್ರಮಾಣ ಇವರ ಮೈಹರ್ ಪ್ರಸ್ತುತಿ ಶೈಲಿಯಲ್ಲಿ ದೊರೆಯುತ್ತದೆ. ರಾಗಗಳನ್ನು ಪ್ರಸ್ತುತ ಮಾಡುವಾಗ ಇವರ ಸಂಕಲ್ಪನೆ ಸುಸ್ಪಷ್ಟವಾಗಿದೆ. ಸಿತಾರ್ ವಾದನದ ವಿಷಯದಲ್ಲಿ ಇವರ ಪಾರಂಗತತೆಯ ಉನ್ನತ ಮಟ್ಟದಿಂದ ಇವರಿಗೆ ಸರ್ವೋಚ್ಚ ದಕ್ಷತೆ ಸಿದ್ಧಿಯಾಗಿದೆ.

* * *

ಗೃತ್ಸಮದ : ಜಗತ್ತು ಕಂಡ ಓರ್ವ ಮಹಾನ್ ಋಷಿ

– ವಿನೋಬಾ

ಇವರು ಓರ್ವ ಮಂತ್ರದ್ರಷ್ಟಾ ವೈದಿಕ ಋಷಿಯಾಗಿದ್ದರು. ಈಗಿನ ಯವತ್‌ಮಾಲ್ ಜಿಲ್ಲೆಯ ಕಲಂಬ ಎಂಬ ಗ್ರಾಮದ ನಿವಾಸಿಯಾಗಿದ್ದರು. ಗಣಪತಿಯ ಮಹಾನ್ ಭಕ್ತರಾಗಿದ್ದರು. **ಗಣಾನಾಂ ತ್ವಾ ಗಣಪತಿಂ ಹವಾಮಯೆ** (೨.೪.೧) ಸಮೂಹದ ಅಧಿಪತಿಯಾದ ನಿನ್ನನ್ನು ನಾವು ಆಹ್ವಾನಿಸುತ್ತೇವೆ, ಈ ಸುಪ್ರಸಿದ್ಧ ಮಂತ್ರವು ಇವರ ಕಾಣಿಕೆಯಾಗಿದೆ. ಋಗ್ವೇದದ ಹತ್ತು ಮಂಡಲಗಳಲ್ಲಿ ಇಡೀ ಎರಡನೆಯ ಮಂಡಲ ಇವರ ಹೆಸರಿನಲ್ಲಿಯೆ ಇದೆ. ಈ ಮಂಡಲದಲ್ಲಿ ನಲವತ್ತ್ಮೂರು ಸೂಕ್ತಿಗಳಿವೆ ಮತ್ತು ಮಂತ್ರಗಳ ಸಂಖ್ಯೆ ನಾಲ್ಕು ನೂರಕ್ಕೂ ಹೆಚ್ಚಿವೆ.

ಋಗ್ವೇದವು ಜಗತ್ತಿನ ಅತಿ ಪ್ರಾಚೀನ ಹಾಗೂ ಪ್ರಥಮ ಗ್ರಂಥವೆಂದು ತಿಳಿಯಲಾಗುತ್ತದೆ. ಋಗ್ವೇದದ ಕೆಲವು ಭಾಗಗಳು ಪ್ರಾಚೀನತರ ಇವೆ. ಈ ಪ್ರಾಚೀನತರ ಭಾಗದಲ್ಲಿ ಎರಡನೆ ಮಂಡಲದ ಗಣನೆಯಾಗುತ್ತದೆ. ಇದರ ಆಧಾರದ ಮೇಲೆ ಗೃತ್ಸಮದ ಋಷಿಯು ಸುಮಾರು ಇಪ್ಪತ್ತು ಸಾವಿರ ವರ್ಷ ಮೊದಲೆ ಆಗಿ ಹೋಗಿದ್ದಾರೆಂದು ಇತಿಹಾಸಜ್ಞರು ನಿಷ್ಕರ್ಷಕ್ಕೆ ಬಂದಿದ್ದಾರೆ. ಗೃತ್ಸಮದರ ಈ ಮಂಡಲ ಸೂಕ್ತ-ಸಂಖ್ಯೆ ಮತ್ತು ಮಂತ್ರ ಸಂಖ್ಯೆಯ ದೃಷ್ಟಿಯಿಂದ ಋಗ್ವೇದದ ಸುಮಾರು ಇಪ್ಪತ್ತೈದನೆ ಭಾಗವಾಗುತ್ತದೆ.

ಗೃತ್ಸಮದ ಹರಫನ್ ಮೌಲಾ ಆಗಿದ್ದರು. ಜ್ಞಾನಿ, ಭಕ್ತ ಮತ್ತು ಕವಿಯಂತೂ ಆಗಿಯೇ ಇದ್ದರು; ಆದರೆ ಗಣಿತಜ್ಞ, ವಿಜ್ಞಾನವೇತ್ತ, ಋಷಿ ಸಂಶೋಧಕ ಮತ್ತು ಕುಶಲ ನೇಕಾರ ಸಹ ಆಗಿದ್ದರು. ಜೀವನದ ಸಣ್ಣ ಪುಟ್ಟ ಯಾವುದೇ ಅಂಗದ ಉಪೇಕ್ಷೆಯನ್ನು ಅವರು ಸಹಿಸಿಕೊಳ್ಳಲಾರದವರಾಗಿದ್ದರು. ಅವರು ಯಾವಾಗಲೂ ಹೀಗೆ ಹೇಳುತ್ತಿದ್ದರು: **ಪ್ರಾಯೆ ಪ್ರಾಯೆ ಜಿಗೀವಾಂಶಃ ಸ್ಯಾಮ್**(೨.೩.೫)–ನಾವು ಪ್ರತಿಯೊಂದು ವ್ಯವಹಾರದಲ್ಲೂ ವಿಜಯಿಗಳಾಗಬೇಕು. ಅವರ ಜ್ವಲಂತ ಉದಾಹರಣೆಯ ಕಾರಣದಿಂದಾಗಿ ಅಕ್ಕಪಕ್ಕ ಇರುವಂಥ ಜನರಲ್ಲಿ ಜಾಗೃತ ವಾತಾವರಣವು ನಿರ್ಮಾಣವಾಗಿರುತ್ತಿತ್ತು.

ಗೃತ್ಸಮದರ ಕಾಲದಲ್ಲಿ ನರ್ಮದೆಯಿಂದ ಗೋದಾವರಿಯವರೆಗೆ ಇಡೀ ಭೂ ಪ್ರದೇಶವು ಅರಣ್ಯಮಯವಾಗಿತ್ತು. ೨೦-೨೫ ಮೈಲಿಗೊಂದು ಚಿಕ್ಕ ಹಳ್ಳಿಯಿರುತ್ತಿತ್ತು. ಉಳಿದೆಲ್ಲ ಪ್ರದೇಶ ನಿರ್ಜನ!

ಅಕ್ಕ ಪಕ್ಕದ ಅರಣ್ಯದಲ್ಲಿ ಗೃತ್ಸಮದರ ಒಂದೇ ಒಂದು ದೊಡ್ಡ ವಸತಿ ಸ್ಥಾನವಿತ್ತು. ಈ ನಿವಾಸವೇ ಪ್ರಪಂಚದ ಹತ್ತಿ ವ್ಯವಸಾಯದ ಮೊಟ್ಟ ಮೊದಲ ಯಶಸ್ವೀ ಪ್ರಯೋಗವನ್ನು ಕಂಡಿತು. ಈಗಂತೂ ವಿದರ್ಭವು ಹತ್ತಿಯ ಭಂಡಾರವೇ ಆಗಿದೆ. ಗೃತ್ಸಮದರ ಕಾಲದಲ್ಲಿ ವಿದರ್ಭದಲ್ಲಿ ಇಂದಿಗಿಂತ ಅಂದು ಮಳೆಯ ಪ್ರಮಾಣ ಹೆಚ್ಚಾಗಿತ್ತು. ಅಷ್ಟು ಪ್ರಮಾಣದ ನೀರನ್ನು ಹೀರಬಹುದಾದಂಥ ಹತ್ತಿಯ ತಳಿಯನ್ನು ಗೃತ್ಸಮದರು ತಯಾರಿಸಿದರು ಮತ್ತು ಅದನ್ನು ಒಂದು ಚಿಕ್ಕ ಪ್ರಯೋಗ ಕ್ಷೇತ್ರದಲ್ಲಿ ಬಿಟ್ಟೂ ಬಿಡದೆ ಬೆಳಸಿ ಅದರಿಂದ ಹತ್ತು ಸೇರು ಹತ್ತಿಯನ್ನು ಪಡೆದರು. ಗೃತ್ಸಮದರ ಈ ಹೊಸ ಬೆಳೆಗೆ ಜನರು ಗಾತ್ಸಾಮದಂ ಎಂಬ ಹೆಸರನ್ನು ಕೊಟ್ಟರು. ಇದರ ಲ್ಯಾಟಿನ್ ರೂಪವೇ 'ಗಾಸಿಪಿಯಂ' ಇರಬಹುದೆ?

ಅವರ ನಿವಾಸದಲ್ಲಿಯ ಜನರು ಉಣ್ಣೆಯನ್ನು ನೂಲುವುದು ಮತ್ತು ನೇಯುವುದನ್ನು ಚೆನ್ನಾಗಿ ತಿಳಿದಿದ್ದರು.ಈ ಕೆಲಸವು ಮುಖ್ಯವಾಗಿ ಮಹಿಳೆಯರ ವಶದಲ್ಲಿತ್ತು. ಇಂದು ನೇಯುವ ಕೆಲಸವನ್ನು ಪುರುಷರು ಮಾಡುತ್ತಾರೆ. ಸ್ತ್ರೀಯರು ಕಣಿಕೆ ಸುತ್ತುವುದು,

ಊಕೆ ಮಾಡುವುದು ಇತ್ಯಾದಿ ಕೆಲಸಗಳಲ್ಲಿ ಸಹಾಯ ಮಾಡುತ್ತಾರೆ. ಆದರೆ ವೈದಿಕ ಕಾಲದಲ್ಲಿ ನೇಕಾರರದು ಒಂದು ಸ್ವತಂತ್ರ ವರ್ಗವಾಗಿರಲಿಲ್ಲ. ವ್ಯವಸಾಯದಂತೆ ನೇಯುವುದು ಕೂಡ ಎಲ್ಲರ ಕೆಲಸವಾಗಿತ್ತು. ಆ ಕಾಲದಲ್ಲಿ ಎಲ್ಲ ಪುರುಷರು ವ್ಯವಸಾಯ ಮಾಡುತ್ತಿದ್ದರು. ಎಲ್ಲ ಹೆಂಗಸರು ಮನೆಯ ಕೆಲಸ ಕಾರ್ಯಗಳನ್ನು ನಿರ್ವಹಿಸಿ ನೇಯ್ಗೆ ಮಾಡುತ್ತಿದ್ದರು. ;ಸಾಯಂಕಾಲ ಸೂರ್ಯ ಹೇಗೆ ತನ್ನ ಕಿರಣಗಳನ್ನು ಸುತ್ತಿಕೊಳ್ಳುತ್ತಾನೊ ಹಾಗೆ ನೇಯುವವರು ಕೂಡ ತಮ್ಮ 'ಅರ್ಧ ನೇಯ್ಗೆಯಾಗಿ ಉಳಿದ ದಾರದ ಭಾಗವನ್ನು ಸುತ್ತುತ್ತಿದ್ದರು' 'ಪುನಃ ಸಮವ್ಯದ್ ಚಿಂತನಂ ವ್ಯಯಂತಿ' (೨.೮.೪). ಈ ಶಬ್ದಗಳಲ್ಲಿ ಗೃತ್ಸಮದರು ನೇಯ್ಗೆ ಮಾಡುವವರ ಜೀವನ-ಕಾವ್ಯದ ವರ್ಣನೆ ಮಾಡಿದ್ದಾರೆ.

ಗೃತ್ಸಮದರ ಪ್ರಯೋಗದ ಫಲಸ್ವರೂಪವಾಗಿ ಹತ್ತಿಯೇನೋ ದೊರೆಯಿತು. ಆದರೆ 'ಬಟ್ಟೆಯನ್ನು ತಯಾರಿಸುವುದು ಹೇಗೆ?' ಇಂಥ ದೊಡ್ಡದೊಂದು ಪ್ರಶ್ನೆ ಎದುರಾಯಿತು. ಉಣ್ಣೆಯನ್ನು ನೂಲುವುದಕ್ಕಾಗಿ ಮರದ ತಕಲಿ ಇದ್ದವು. ಅದರ ಮೇಲೆಯೆ ಎಲ್ಲರೂ ಸೇರಿ ಹತ್ತಿಯ ದಾರವನ್ನು ನೂತರು. ಹಾಗಿದ್ದಾಗ್ಯೂ ನೇಯ್ಗೆ ಮಾತ್ರ ಹೆಂಗಸರ ವಶದಲ್ಲಿತ್ತು. ಆದರೂ ಕೂಡ ನೂಲುವ ಕೆಲಸವನ್ನು ಸ್ತ್ರೀಯರು, ಪುರುಷರು, ಬಾಲಕರು, ವೃದ್ಧರು ಎಲ್ಲರೂ ಮಾಡುತ್ತಿದ್ದರು. ನೂಲನ್ನೇನೊ ತಯಾರಿಸಿದರು. ಆದರೆ ಅದು ತುಂಬಾ ಕಳಪೆಯದಾಗಿತ್ತು. ಅಂಥದನ್ನು ನೇಯ್ಗೆ ಮಾಡುವುದು ಹೇಗೆ? ಗೃತ್ಸಮದ ಧೈರ್ಯ ಕಳೆದುಕೊಳ್ಳುವ ವ್ಯಕ್ತಿಯಾಗಿರಲಿಲ್ಲ. ಅವರು ಸ್ವತಃ ನೇಯ್ಗೆ ಮಾಡಲು ಪ್ರಾರಂಭಿಸಿದರು. ನೇಯ್ಗೆ ಕಲೆಯ ಎಲ್ಲ ಪ್ರಕ್ರಿಯೆಗಳ ಸಾಂಗೋಪಾಂಗ ಅಭ್ಯಾಸ ಮಾಡಿದರು. ಇಡಿ ದಾರ ದೋಷ ಸಂಪನ್ನವಾಗಿದೆ ಎಂದು ತಿಳಿದರು. ಆದರೆ ಅದರಲ್ಲಿ ಯಾವುದು ಸ್ವಲ್ಪ ಗಟ್ಟಿಯಾಗಿತ್ತೊ ಅದರಿಂದ ಅವರು 'ತಂತು' ತಯಾರಿಸಿದರು. ವೈದಿಕ ಭಾಷೆಯಲ್ಲಿ ತಂತುವಿನ ಅರ್ಥ ಹಾಸು ಎಂದು. ಅದರಲ್ಲಿ ಮಿಕ್ಕ ಗಟ್ಟಿಯಲ್ಲದ ದಾರಕ್ಕೆ 'ಹೊಕ್ಕೊ' ಎಂದು ಹೇಳಿ ಇಟ್ಟುಕೊಂಡರು. ಆದರೆ ನೇಯ್ಗೆ ಮಾಡುವಾಗ ದಾರವು ಪಟಪಟನೆ ಕಿತ್ತುಹೋಗಲು ಪ್ರಾರಂಭಿಸಿತು. ಗೃತ್ಸಮದರು ಗಣಿತಜ್ಞರೂ ಆಗಿದ್ದ ಕಾರಣದಿಂದಾಗಿ ಕಿತ್ತು ಹೋದ ದಾರಗಳನ್ನು ಜೋಡಿಸಬೇಕಾಯಿತು. ಆಗ ಇದರ ಲೆಕ್ಕವನ್ನು ಮಾಡಬೇಕಾಯಿತು. ಮೊದಲ ಸಲ ನೇಯ್ಗೆ ಮಾಡುವಾಗ ಕಿತ್ತುಹೋದ ದಾರಗಳ ಸಂಖ್ಯೆ ಸಾವಿರಾರಿದ್ದವು. ನಂತರ ಹಾಸನ್ನು ಮಗ್ಗಕ್ಕೆ ಹಾಕಲಾಯಿತು. ಲಾಳಿಯ ಮೊದಲನೆ ಏಟು ತಾಕಿದ ತಕ್ಷಣ ನಾಲ್ಕೈದು ದಾರಗಳು ಕಿತ್ತುಹೋದವು. ಅವುಗಳನ್ನು ಜೋಡಿಸಿದ ನಂತರ ಪುನಃ ಲಾಳಿಯ ಎಸೆತ ಮತ್ತೆ ಪುನಃ ದಾರದ ಕಿತ್ತು ಹೋಗುವಿಕೆ. ಈ ರೀತಿಯಾಗಿ ಎಷ್ಟೋ ವಾರಗಳ ನಂತರ ಮೊದಲನೆಯ ಥಾನು ನೇಯ್ಗೆಯಾಯಿತು. ಅದಾದ ನಂತರ ದಾರವು ನಿಧಾನವಾಗಿ ಸುಧಾರಣೆಯಾಗುತ್ತಾ ಹೋಯಿತು. ಆದರೂ ಕೂಡ ಪ್ರಾರಂಭದ ೧೨ ವರ್ಷಗಳಲ್ಲಿ ನೇಯ್ಗೆಯ ಕೆಲಸ ಬಹಳ ಕಷ್ಟಪ್ರದವಾಗಿತ್ತು. ಗೃತ್ಸಮದರ ಆಯುಷ್ಯದ ೧೨ ವರ್ಷಗಳು ಯಥಾರ್ಥವಾಗಿ ತಪಶ್ಚರ್ಯದ ವರ್ಷಗಳಾಗಿದ್ದವು. ಅವರು ಎಷ್ಟೊಂದು ಉತ್ಸಾಹಿಯಾಗಿದ್ದರೆಂದರೆ ತಂತು-ಬ್ರಹ್ಮ, ಹಾಸು-ಬ್ರಹ್ಮ, ಲಾಳಿ-ಬ್ರಹ್ಮ ಮತ್ತು ಕಿತ್ತುಹೋದುದು-ಬ್ರಹ್ಮ ಎಂಬ ರೀತಿಯಲ್ಲಿ ಬ್ರಹ್ಮಮಯ ವೃತ್ತಿಯಿಂದ ನೇಯ್ಗೆಯ ಕೆಲಸವನ್ನು ಮಾಡುವಂಥವರಾಗಿದ್ದರು. ಆದರೂ ದಾರವು ಒಂದೇ ಸಮನೆ ಕಿತ್ತು ಹೋದಾಗ ಅವರೂ ಕೂಡ ಕೆಲವೊಮ್ಮೆ ಧೈರ್ಯಗುಂದುತ್ತಿದ್ದರು. ಇಂಥದೇ ಒಂದು ಸಂದರ್ಭದಲ್ಲಿ ಅವರು ಈಶ್ವರನಲ್ಲಿ ಪ್ರಾರ್ಥನೆ ಸಲ್ಲಿಸಿದರು.

ಮೌ ತಂತು ಶ್ಛೇದಿ ವಯತಃ (೧.೩.೮)–'ಪ್ರಭುವೇ ನೇಯ್ಗೆ ಮಾಡುವಾಗ ದಾರ ಕಿತ್ತು ಹೋಗದೆ ಇರಲಿ. ಆದರೆ ಇಂಥ ತಪ್ಪು ಪ್ರಾರ್ಥನೆಯನ್ನು ಮಾಡಿದ ಕಾರಣಕ್ಕಾಗಿ ಅವರು ತಕ್ಷಣವೇ ಪಶ್ಚಾತ್ತಾಪಪಟ್ಟರು. ಆದ್ದರಿಂದ ಆ ಪ್ರಾರ್ಥನೆಯಲ್ಲಿ 'ಧಿಯಂ ಮೆ; ಅಂದರೆ 'ನನ್ನ ಧ್ಯಾನ' ಈ ಎರಡು ಶಬ್ದಗಳನ್ನು ಸೇರಿಸಿ ಎಚ್ಚೆತ್ತುಕೊಂಡರು. 'ನಾನು ಯಾವಾಗ ನನ್ನ ಧ್ಯಾನವನ್ನು ನೇಯ್ಗೆ ಮಾಡುತ್ತೇನೋ ಆಗ ಅದರ ತಂತು ಕಿತ್ತು ಹೋಗದೆ ಇರಲಿ.' ಹೀಗೆ ಆ ಸಂಶೋಧಿತ ಮತ್ತು ಪರಿವರ್ತಿತ ಪ್ರಾರ್ಥನೆಯಿಂದ ಶೋಧನೀಯವಾದ ಅರ್ಥ ಹೊರಟಿತು. ಅದರ ಭಾವಾರ್ಥ "ನನ್ನ ಖಾದಿಯ ನೇಯ್ಗೆ ನನ್ನ ದೃಷ್ಟಿಯಲ್ಲಿ ಕೇವಲ ಬಾಹ್ಯ ಕ್ರಿಯೆಯಲ್ಲ. ಇದು ನನ್ನ ಉಪಾಸನೆಯಾಗಿದೆ. ಇದು ಧ್ಯಾನ ಯೋಗ. ಕೆಲವೊಮ್ಮೆ ಮಧ್ಯದಲ್ಲಿ ದಾರಗಳು ಕಿತ್ತು ಹೋಗುವುದರಿಂದ ನನ್ನ ಧ್ಯಾನಯೋಗ ಭಂಗವಾಗುತ್ತದೆ. ಇದಕ್ಕಾಗಿ ನನಗೆ ದುಃಖವಿದೆ. ಆದ್ದರಿಂದ ದಾರ ಕಿತ್ತು ಹೋಗದೆ ಇದ್ದರೆ ಒಳ್ಳೆಯದಾಗುತ್ತದೆಂಬ ಇಚ್ಛೆಯಾಗುತ್ತದೆ. ಆದರೆ ಈ ಇಚ್ಛೆ ಉಚಿತವಾಗಿದ್ದರೂ ಕೂಡ ಪ್ರಾರ್ಥನೆಯ ವಿಷಯವಾಗಲಾರದು. ದಾರದಲ್ಲಿ ಸುಧಾರಣೆಯಾಗಬೇಕು ಮತ್ತು ಅದನ್ನು ನಾನು ಸುಧಾರಿಸುವೆನು. ಆದರೆ ಎಲ್ಲಿಯವರೆಗೆ ದಾರವು ಸಪ್ಪೆಯಾಗಿರುತ್ತದೊ ಅಲ್ಲಿಯವರೆಗೆ ಅದು ಕೀಳುತ್ತಲೆ ಇರುತ್ತದೆ. ಆದ್ದರಿಂದ ದಾರದೊಂದಿಗೆ ನನ್ನ ಅಂತರ್‌ವೃತ್ತಿಯ,. ನನ್ನ ಧ್ಯಾನದ ದಾರ ಕಿತ್ತು ಹೋಗದಿರಲಿ ಎಂಬುದೇ ಪ್ರಾರ್ಥನೆಯಾಗಿದೆ.

ಗೃತ್ಸಮದರು ಅಖಂಡವಾದ ಅಂತರ್‌ಮುಖ ವೃತ್ತಿಯನ್ನು ಇಟ್ಟುಕೊಳ್ಳುವ ಪ್ರಯತ್ನ ಮಾಡುತ್ತಿದ್ದಾಗ್ಯೂ ಪ್ರತಿದಿನವೂ ಒಂದಿಲ್ಲ ಒಂದು ಶರೀರಾಧಾರಿತ ಪರಿಶ್ರಮಾತ್ಮಕ ಮತ್ತು ಉತ್ಪಾದಕ ಕೆಲಸವನ್ನು ಮಾಡುತ್ತಲೇ ಇರುತ್ತಿದ್ದರು. **ಮಾಹಂ ಅನ್ಯಕೃತೇನ ಭೋಜಂ** (೨.೮.೧೨)–'ಎರಡನೆಯವರ ಪರಿಶ್ರಮದ ಉಪಭೋಗ ಮಾಡುವುದು ನನಗೆ ಉಚಿತವಲ್ಲ' ಇದು ಅವರ ಜೀವನ ಸೂತ್ರವಾಗಿತ್ತು. ಅವರು ಲೋಕ–ಸೇವಾಪರಾಯಣರಾಗಿದ್ದರು. ಆದ್ದರಿಂದ ಅವರ ಯೋಗಕ್ಷೇಮದ ಚಿಂತನೆಯನ್ನು ಜನರೆ ಮಾಡುತ್ತಿದ್ದರು. ಆದರೆ ಅವರು ತಮ್ಮ ಮನಸ್ಸಿನಲ್ಲಿ 'ಜನರಿಂದ ಎಷ್ಟು ದೊರೆಯುತ್ತದೊ ಅದಕ್ಕೆ ಬದಲಾಗಿ ನೂರರಷ್ಟು ಹಿಂದಿರುಗಿಸುತ್ತಿದ್ದೇನೆಯೆ ಮತ್ತು ಅದರಲ್ಲಿ ಕೂಡ ಹೊಸ ಉತ್ಪಾದನೆಯ ಯಾವುದಾದಗ್ರು ಹೊಸ ಅಂಶ ಇದಿಯೆ ಎಂಬುದಾಗಿ ಸದಾ ಚಿಂತನೆಯನ್ನು ಮಾಡುತ್ತಿದ್ದರು.

ಈ ಚಿಂತನೆಯ ಫಲಸ್ವರೂಪವಾಗಿ ಒಂದು ದಿನ ಅವರಿಗೆ ಅಕಸ್ಮಾತ್ತಾಗಿ ಗುಣಾಕಾ್ಗದ ಕಲ್ಪನೆ ಸ್ಫುರಿತವಾಯಿತು. ಗಣಿತಶಾಸ್ತ್ರವು ಲೋಕ ವ್ಯವಹಾರವನ್ನು ಸುಲಭಮಾ಼ಡುವ ದೃಷ್ಟಿಯಿಂದ ಅವರು ಬಿಡುವಿನ ಸಮಯದಲ್ಲಿ ಆ ಶಾಸ್ತ್ರದಲ್ಲಿ ಸಂಶೋಧನೆ ಮಾಡುತ್ತಿದ್ದರು. ಅಲ್ಲಿಯವರೆಗೆ ಜನರು ಗಣಿತಶಾಸ್ತ್ರದ ಆರು ವಿಧಿಗಳಲ್ಲಿ ಕೇವಲ ಕೂಡುವಿಕೆ ಮತ್ತು ಕಳೆಯುವಿಕೆಯ ಎರಡು ವಿಧಾನಗಳನ್ನು ಮಾತ್ರ ತಿಳಿದಿದ್ದರು. ಯಾವ ದಿನ ಗೃತ್ಸಮದರು ಗುಣಾಕಾರದ ವಿಧಿಯನ್ನು ಕಂಡು ಹಿಡಿದರೊ ಆ ದಿನ ಅವರಿಗೆ ಆದ ಆನಂದಕ್ಕೆ ಮಿತಿಯೆ ಇರಲಿಲ್ಲ. ಅವರು ಎರಡು ಅಂಕಿಗಳಿಂದ ಹಿಡಿದು ೧೦ ಅಂಕಿಗಳವರೆಗೆ ೬ ಮಗ್ಗಿಗಳನ್ನು ತಯಾರಿಸಿದರು. ಮಗ್ಗಿಗಳನ್ನು ಉರು ಹೊಡೆಯುವ ಮಕ್ಕಳಿಗೆ ಈ ವಿಷಯವೇನಾದರೂ ಗೊತ್ತಾದರೆ ಅವರು ಗೃತ್ಸಮದವರಿಗೆ ಕಲ್ಲು ಹೊಡೆಯದೆ ಇರಲಾರರು. ಅಲ್ಲದೆ ಗೃತ್ಸಮದರು ಆನಂದದ ಆವೇಶಕ್ಕೆ ಬಂದು

ಇಂದ್ರದೇವನನ್ನು ಮಗ್ಗಿಗಳ ಮೂಲಕವೆ ಆವಾಹನ ಮಾಡಲು ಪ್ರಾರಂಭಿಸಿದರು:

"ಹೇ ಇಂದ್ರ ! ನೀನು ಎರಡು ಕುದುರೆಗಳ, ನಾಲ್ಕು ಕುದುರೆಗಳ, ಆರು ಕುದುರೆಗಳ, ಎಂಟು ಕುದುರೆಗಳ ಮತ್ತು ಹತ್ತು ಕುದುರೆಗಳ ರಥದಲ್ಲಿ ಕುಳಿತುಕೊಂಡು ಬಾ ಆದಷ್ಟು ಬೇಗ ಬಾ. ಇದಕ್ಕಾಗಿ ನೀನು ಮನಸ್ಸು ಮಾಡು. ಸಾಧ್ಯವಾದರೆ ಎರಡರ ಮಗ್ಗಿಯ ಬದಲಾಗಿ ಹತ್ತರ ಮಗ್ಗಿಯನ್ನು ಉಪಯೋಗಿಸು. ಹತ್ತು ಕುದುರೆಗಳ, ಇಪ್ಪತ್ತು ಕುದುರೆಗಳ, ಮೂವತ್ತು ಕುದುರೆಗಳ ಮತ್ತು ನಲವತ್ತು ಕುದುರೆಗಳ.... ಮತ್ತು ನೂರು ಕುದುರೆಗಳ ರಥದಲ್ಲಿ ಕುಳಿತು ಬಾ."

ಗೃತ್ಸಮದರು ಚೌಮುಖಿ ಆವಿಷ್ಕಾರಕರಾಗಿದ್ದರು ಪೌರಣಿಕರು ಅವರ ಈ ಮಹಾನ್ ಆವಿಷ್ಕಾರದ ಬಗ್ಗೆ ಹೀಗೆ ಹೇಳಿದ್ದಾರೆ. "ಗರ್ಭವೃದ್ಧಿಯ ಮೇಲೆ ಚಂದ್ರಮನ ವಿಶೇಷ ಪರಿಣಾಮವಾಗುತ್ತದೆ. ವೈದಿಕ ಮಂತ್ರಗಳಲ್ಲೂ ಕೂಡ ಇದರ ಸಂಕೇತ ಸಿಗುತ್ತದೆ. ಚಂದ್ರನಲ್ಲಿ ಮಾತೃವೃತ್ತಿ ತುಂಬಿದೆ. ಅಲ್ಲದೆ ಅವನು ಸಶಕ್ತನೂ ಆಗಿದ್ದಾನೆ. ಆದ್ದರಿಂದ ಸೂರ್ಯನ ಜ್ಞಾನಮಯ ಪ್ರಖರ ಕಿರಣಗಳನ್ನು ಜೀರ್ಣಿಸಿಕೊಂಡು ಅವಕ್ಕೆ ಭಾವನಾಯುಕ್ತ ಸೌಮ್ಯರೂಪ ಕೊಟ್ಟು ತಾಯಿಯ ಹೃದಯದಲ್ಲಿರುವಂಥ ಕೋಮಲ ಗರ್ಭದವರೆಗೆ ಆ ಜೀವನಾಮೃತವನ್ನು ತಲುಪಿಸುವ ಪ್ರೇಮಪೂರ್ವಕವಾದ ಕುಶಲ ಕಾರ್ಯವನ್ನು ಚಂದ್ರ ಮಾಡಬಲ್ಲನು. ಅವನು ಅದನ್ನು ನಿರಂತರವಾಗಿ ಮಾಡುತ್ತಿರುತ್ತಾನೆ ಇದು ಗೃತ್ಸಮದರ ಆವಿಷ್ಕಾರ.ಆಧುನಿಕ ವಿಜ್ಞಾನವು ಈವರೆಗೂ ಈ ವಿಷಯದ ಮೇಲೆ ವಿಶೇಷವಾದ ಬೆಳಕನ್ನೇನೂ ಚೆಲ್ಲಿಲ್ಲ. ಪರಾವೃತ್ತ-ಕಿರಣ-ವಿಜ್ಞಾನ, ಪ್ರಾಣ ವಿಜ್ಞಾನ ಮತ್ತು ಮನೋ ವಿಜ್ಞಾನ ಈ ಮೂರರ ಮಿಲನ ಇಲ್ಲಿ ಆಗಿರುವ ಕಾರಣದಿಂದಾಗಿ ಈ ಪ್ರಶ್ನೆ ಕೊಂಚ ಗಡಚವೂ ಮತ್ತು ಸೂಕ್ಷ್ಮವೂ ಆಗಿದೆ. ಈ ಬಗ್ಗೆ ಸಂಶಯವೂ ಇಲ್ಲ. ಆದರೆ ಗೃತ್ಸಮದರ ಸಿದ್ಧಾಂತವು ಸಾಧಾರಣ ಅವಿಜ್ಞ ಮನಸ್ಸಿಗೂ ಕೂಡ ಒಪ್ಪುವಂತಿದೆ. ಮಗುವಿನ ಸೌಮ್ಯರೂಪವು ಸೋಮಕೃತ ಆಗಿದ್ದರೆ ಅದರಲ್ಲೇನು ಆಶ್ಚರ್ಯ? ಈಗ ನಾವು ಸೂರ್ಯವಂಶಿ ರಾಮನನ್ನೂ ಕೂಡ 'ರಾಮಚಂದ್ರ' ನೆಂದು ಕರೆಯುತ್ತೇವೆ. ಆಗ ಚಂದ್ರನ ಅಧಿಕಾರವನ್ನೆ ಸೂಚಿಸುತ್ತೇವಲ್ಲವೆ? ಕವಿಗಳು ಚಂದ್ರಾಮೃತವನ್ನು ಕುಡಿಯುವ ಒಂದು ಚಕೋರ ಪಕ್ಷಿಯ ಕಲ್ಪನೆಯನ್ನು ಮಾಡಿದ್ದಾರೆ. ಆ ಚಕೋರ ಪಕ್ಷಿಯು ಒಂದು ವೇಳೆ ತಾಯಿಯ ಉದರದಲ್ಲಿರುವ ಗರ್ಭವೇ ಎಂದು ಸಿದ್ಧವಾದರೂ ಕೂಡ ಕವಿಗಳು ಕದಾಪಿ ಕೋಪಗೊಳ್ಳಲಾರರು. ತಮ್ಮ ತಮ್ಮ ಅಲ್ಪ ಪ್ರಕಾಶದಿಂದ ಮಿನುಗುತ್ತಿರುವ ನಕ್ಷತ್ರಗಳೂ ಕೂಡ ತಮ್ಮ ಸ್ಥಳವನ್ನು ಬಿಟ್ಟು ಚಂದ್ರನನ್ನು ಭೇಟಿ ಮಾಡುವುದಕ್ಕಾಗಿ ಎಂದೂ ಹೋಗುವುದಿಲ್ಲ. ಆದರೆ ಚಂದ್ರ ವಿನಮ್ರನಾಗಿ ಪ್ರತಿಯೊಂದು ನಕ್ಷತ್ರದೊಂದಿಗೆ ಭೇಟಿ ಮಾಡುವುದಕ್ಕಾಗಿ ಅದರ ಮನೆಗೆ ಹೋಗುತ್ತಾನೆ. ಇಷ್ಟು ದೊಡ್ಡ ಪ್ರೇಮಮೂರ್ತಿ ಒಂದು ವೇಳೆ ಗರ್ಭಸ್ಥ ಬಾಲಕನ ಚಿಂತೆಯನ್ನು ಮಾಡದಿದ್ದರೆ ಇನ್ನು ಯಾರು ತಾನೆ ಮಾಡಬಲ್ಲರು. ಚಂದ್ರನ ಕಲೆಗಳ ಪೂರ್ಣತೆ ಪೌರ್ಣಿಮೆಯಂದೆ ಆಗುತ್ತದೆ. ಪೌರ್ಣಿಮೆಯನ್ನು ಉದ್ದೇಶಿಸಿ ಗೃತ್ಸಮದ ಹೇಳುತ್ತಾರೆ, 'ಹೇ ಪೌರ್ಣಿಮಾ ಗರ್ಭದ ಹೊಲಿಗೆಯನ್ನ ನೀನು ತುಂಬಾ ಗಟ್ಟಿಯಾದ ಸೂಜಿಯಿಂದ ಹೊಲಿ', ಮತ್ತು ನೂರು ಪಟ್ಟು ಪರಾಕ್ರಮಶೀಲನಾದ ಪ್ರಶಂಸನೀಯನಾದ ಸೇವಕನನ್ನು ನಿರ್ಮಾಣ ಮಾಡು'- ದದಾತು ವೀರಂ ಶತದಾಯಂ ಉಕ್ತ್ಯಮ್(೨.೩೨.೧೮) (ಮುಂದುವರಿಯುವುದು) - *ಅನು-ಸು.ಕೌ.*

ಜನಪದ ಧ್ವನಿ

ಗುರೂಜಿ ರವಿಶಂಕರ್‌ರವರ ಪರಿಸರ ಕಾರ್ಯಾಗಾರದಲ್ಲಿಯ ಅನುಭವ

ಫೆಬ್ರವರಿ ಮಾಹೆಯಲ್ಲಿ ಬೆಂಗಳೂರಿನ ಹೊರವಲಯದಲ್ಲಿ ನಡೆದ ಮೂರು ದಿನಗಳ ಪರಿಸರ ರಕ್ಷಣೆಯ ಶಿಬಿರದಲ್ಲಿ ಭಾಗವಹಿಸಿದ್ದೆ. ಅದಕ್ಕಾಗಿ ಈ ಶಿಬಿರದ ಪ್ರತಿನಿಧಿ ಶುಲ್ಕ ಐದು ಸಾವಿರ ರೂಪಾಯಿ ಇತ್ತು. ನನ್ನ ಸ್ನೇಹಿತರು ಈ ಶುಲ್ಕದ ಅರ್ಧ ಹಣವನ್ನು ನನಗೆ ಕೊಟ್ಟಿದ್ದರಿಂದ ನಾನು ಅದರಲ್ಲಿ ಭಾಗವಹಿಸಿದೆ. ಅಲ್ಲಿಯ ರಕ್ಷಣಾ ಸಿಬ್ಬಂದಿಗಳಿಗೆ ಕನ್ನಡ ಭಾಷೆಯ ಗಂಧವೆ ಇರಲಿಲ್ಲ. ಪ್ರತಿನಿಧಿಗಳಿಗೆ ಅಲ್ಲಿ ಪ್ರತ್ಯೇಕ ವ್ಯವಸ್ಥೆ ಇಲ್ಲದಿರುವುದು ಗೊತ್ತಾಯಿತು. ಸಣ್ಣ ಕೋಣೆಯಲ್ಲಿ ಮೂರು ಜನ ಪ್ರತಿನಿಧಿಗಳು ತಂಗಬೇಕಾಯಿತು. ಊಟದ ಗುಣಮಟ್ಟ ತುಂಬಾ ಕೀಳುಮಟ್ಟದ್ದಾಗಿತ್ತು. ಮಹಿಳಾ ಸ್ವಯಂ ಸೇವಕಿಯರ ಹೂನಗೆಯೊಂದಿಗಿನ ಸ್ವಾಗತ ಅನೇಕ ಪ್ರತಿನಿಧಿಗಳಿಗೆ ತಮ್ಮ ಹಣವನ್ನು ಹಗಲುದರೋಡೆ ಮಾಡಿದ ಪರಿ ಮತ್ತು ಇಲ್ಲಿನ ಅಸಮರ್ಪಕ ವ್ಯವಸ್ಥೆಯನ್ನು ಅನುಭವಿಸಿಯೂ ಅರ್ಥವಾಗದಂತೆ ಮಾಡುವಲ್ಲಿ ಯಶಸ್ವಿಯಾಯಿತು. ಆಶ್ರಮದಲ್ಲಿ ಓಡಾಡಿಕೊಂಡಿದ್ದವರಲ್ಲಿ ಪ್ರಪಂಚದ ನಾನಾ ಭಾಗದ ಇಂಗ್ಲೀಷ್ ಭಾಷೆ ಬರುವ ವಿದ್ಯಾವಂತರೆಂದು ತಿಳಿದುಕೊಂಡ ಹಣವಂತ ಜನರು ಅಧಿಕ ಸಂಖ್ಯೆಯಲ್ಲಿದ್ದರು. ಅಧಿಕ ಪ್ರಮಾಣದ ಹಣ ನೀಡದೇ ಯಾರಿಗೂ ಪ್ರವೇಶವಿಲ್ಲ. ಆಶ್ರಮದ ಸತ್ಸಂಗದಲ್ಲಿ ಕೇಳಿ ಬರುವ ಬಾಲಿಶ ಪ್ರಶ್ನೆಗಳು ಮತ್ತು ಅಂಥದೆ ಉತ್ತರಗಳನ್ನು ಸ್ವೀಕರಿಸುವ ಶಿಬಿರಾರ್ಥಿಗಳ ಭೌದ್ಧಿಕ ದಿವಾಳಿತನದ ಬಗ್ಗೆ ಕನಿಕರವೆನಿಸಿತು. ಶಾಂತಿ, ನೆಮ್ಮದಿಯನ್ನು ಅರಸುವವರಿಗೆ ಇಂಥ ವೈಭವದ ತಾಣದ ಅಗತ್ಯವಿದೆಯೆ ? ಇಲ್ಲಿಯ ಮುಖ್ಯ ಆಕರ್ಷಣೆ ವಿದೇಶದ ಅನುಯಾಯಿಗಳು. ಇದು ಕೇವಲ ಹಣವಿದ್ದವರಿಗೆ ಮಾತ್ರ ನೆಮ್ಮದಿಯನ್ನು ತೋರಿಸುವ ನೆಪದಲ್ಲಿ ಹಣವನ್ನು ಸೆಳೆಯುವ ತಂತ್ರಗಾರಿಕೆ ನಿಜವಾಗಿಯೂ ಅದ್ಭುತ. ಸ್ವಯಂ ಸೇವೆ ಮಾಡುವ ಮಹಿಳೆಯರು ಎಲ್ಲಾರೀತಿಯ ಅಲಂಕಾರ ಮಾಡಿಕೊಂಡು ಆಶ್ರಮದ ಅಭ್ಯಾಗತರಿಗೆ ಶುಭ ಕೋರುವ, ತಿಳಿನಗೆ ಬೀರುವ ಕ್ರಿಯೆಯನ್ನು ನೋಡಿದಾಗ ಆಶ್ಚರ್ಯವೂ, ಕನಿಕರವೂ ಆಗುತ್ತದೆ. ಪರಿಸರದ ರಕ್ಷಣೆಯ ಕಾರ್ಯಕ್ರಮಗಳನ್ನು ಮತ್ತು ನಡೆದ ಚರ್ಚೆಯನ್ನು ವೀಕ್ಷಿಸಿದಾಗ ನಾನು ತಪ್ಪು ಸ್ಥಳಕ್ಕೆ ಬಂದ ಅರಿವು ಸ್ಪಷ್ಟವಾಯಿತು. ಸಂಪನ್ಮೂಲ ವ್ಯಕ್ತಿಗಳಾಗಿ ಬಂದ ವ್ಯಕ್ತಿಗಳೆಲ್ಲರ ವರ್ತನೆ ಸ್ವಾಮಿಯನ್ನು ಮೆಚ್ಚಿಸಿ ಆಶೀರ್ವಾದ ಪಡೆಯಲು ಬಂದವರಂತೆ ಇದ್ದುದು ಬೇಸರ ತಂದಿತು. ಈ ಶಿಬಿರಕ್ಕಾಗಿ ವಿವಿಧ ಮೂಲಗಳಿಂದ ಸಂಗ್ರಹಿಸಿದ ಹಣ ಮೂವತ್ತು ಲಕ್ಷ ರೂಗಳಾಗಿರಬಹುದು. ಆದರೆ ಕಾರ್ಯಕ್ರಮಕ್ಕೆ ಖರ್ಚು ಮಾಡಿದ ಹಣ ಮೂರು ಲಕ್ಷಕ್ಕಿಂತ ಹೆಚ್ಚಾಗಿರಲು ಸಾಧ್ಯವಿಲ್ಲ. ಮೂರು ದಿನಗಳಲ್ಲಿ ಇಪ್ಪತ್ತೈದು ಲಕ್ಷಕ್ಕೂ ಅಧಿಕ ಹಣವನ್ನು ಯಾವ ಮುಲಾಜಿಲ್ಲದೆ ಸಂಗ್ರಹಿಸುವ ಕಾರ್ಯತಂತ್ರಕ್ಕೆ ಬೆರಗಾಗಬೇಕು.

– ಆರೂರು ಮಂಜುನಾಥರಾವ್

ಆಧ್ಯಾತ್ಮ ವಿಜ್ಞಾನಗಳ ಸಾಂಗತ್ಯದಿಂದ ವಿಶ್ವಶಾಂತಿ

– ರಾಮಚಂದ್ರ ಪ್ರಭು

ನಮ್ಮ ದೇಶವು ಸ್ವತಂತ್ರವಾದಂದಿನಿಂದ ಈವರೆಗೆ ಹತ್ತು ಹಲವು ಕ್ಷೇತ್ರಗಳಲ್ಲಿ ಪ್ರಗತಿಯನ್ನು ಸಾಧಿಸಿದೆ. ೨೦೨೦ನೇ ಇಸವಿಯೊಳಗೆ ಒಂದು ಪ್ರವರ್ಧಮಾನ ರಾಷ್ಟ್ರವಾಗಿ ಮೆರೆಯಬೇಕೆಂಬ ಗುರಿಯನ್ನು ನಮ್ಮ ಧುರೀಣರು ಯೋಚಿಸಿ ಆ ದಿಕ್ಕಿನಲ್ಲಿ ದಾಪುಗಾಲು ಇರಿಸಿದ್ದಾರೆ. ಇಂದು ವಿಜ್ಞಾನವು ನಾಗಾಲೋಟದಿಂದ ಸಾಗುವುದನ್ನು ಗಮನಿಸಿದಾಗ, ಆ ಅವಧಿಯೊಳಗೆ ಗುರಿಯನ್ನು ತಲುಪಬಹುದಾಗಿ ಕಾಣುತ್ತದೆ. ಎಲ್ಲವೂ ಸುಗಮವಾಗಿ ಸಾಗಿದಲ್ಲಿ ಭಾರತ ಅಂತಹ ಒಂದು ಶಕ್ತ ರಾಷ್ಟ್ರವಾಗಬಹುದು.

ಕೇವಲ ಆರ್ಥಿಕ ಮತ್ತು ಸೈನಿಕ ದೃಷ್ಟಿಯನ್ನೇ ಇಟ್ಟುಕೊಂಡು ಒಂದು ಪ್ರಬಲ ರಾಷ್ಟ್ರವಾಗಲು ಪ್ರಯತ್ನಿಸಿದರೆ ಅನೇಕ ಸಮಸ್ಯೆಗಳು ಎದುರಾಗಬಹುದು. ಈಗಾಗಲೆ ಹದಗೆಟ್ಟ ನೈತಿಕ ಮಟ್ಟ ಇನ್ನು ೧೫-೨೦ ವರ್ಷಗಳಲ್ಲಿ ಮತ್ತಷ್ಟು ಹದಗೆಡಬಹುದು. ಜನಸಂಖ್ಯಾ ವೃದ್ಧಿಯಿಂದ ಸಮಸ್ಯೆ ಉಲ್ಬಣಗೊಳ್ಳಬಹುದು. ರಾಷ್ಟ್ರೀಯ ಸಂಪತ್ತು ವೃದ್ಧಿಯಾದಂತೆ, ಅದನ್ನು ರಕ್ಷಿಸುವ ಸಲುವಾಗಿ ಸೈನಿಕ ಶಕ್ತಿಯನ್ನು ಹೆಚ್ಚಿಸಬೇಕಾದೀತು. ಶಸ್ತ್ರಾಗಾರದಲ್ಲಿ ಶಸ್ತ್ರಗಳ ಸಂಗ್ರಹ ಹೆಚ್ಚಳವಾಗಬೇಕಾದೀತು. ಸಾಲದಿದ್ದಲ್ಲಿ ಇನ್ನೂ ಹೆಚ್ಚಿನ ರಾಷ್ಟ್ರ ಭದ್ರತೆಗಾಗಿ ಸಮೂಹನಾಶಕ ಮಾರಕಾಸ್ತ್ರಗಳನ್ನು ಹೆಚ್ಚಿಸಿ ಜಾಗರೂಕತೆಯಿಂದ ಜೋಪಾನವಾಗಿಡಬೇಕಾದೀತು. ಇದು ನೈಜವಾಗಿ ಸಬಲ ರಾಷ್ಟ್ರದ ಲಕ್ಷಣವೊ?

ಇತರ ಶಕ್ತ ರಾಷ್ಟ್ರಗಳ ಜಾಗತಿಕ ಧೋರಣೆ ಯಾವ ರೀತಿಯದ್ದಿದೆ ಎಂಬುದಾಗಿ ಅವಲೋಕಿಸಿದಾಗ ಈಚೆಗೆ ಕೆಲವು ಸಮಯದ ಹಿಂದೆ ಇರಾಕ್ ಸಮೂಹ ನಾಶಕ ಮಾರಕಾಸ್ತ್ರಗಳನ್ನು ಹೊಂದಿದ್ದು ಜಾಗತಿಕ ಶಾಂತಿಗೆ ಆ ದೇಶದಿಂದ ಮಾರಕವಿದೆ ಎಂಬ ಆಪಾದನೆ ಎದುರಿಸಿ, ಅಮೆರಿಕ ಮತ್ತು ಇತರ ಶಕ್ತ ರಾಷ್ಟ್ರಗಳು ಸೇರಿ ಯುದ್ಧದ ಮೂಲಕ ಆ ದೇಶವನ್ನು ನಿರ್ದಯವಾಗಿ ದಂಡಿಸಿ, ಮಣಿಸಿದವು. ಆದರೂ ಆ ದೇಶದಲ್ಲಿ ಸಮೂಹ ನಾಶಕ ಮಾರಕಾಸ್ತ್ರಗಳು ಪತ್ತೆಯಾಗಿಲ್ಲ. ಮತ್ತೊಂದೆಡೆ ಲಿಬಿಯಾ ದೇಶದೊಡನೆ ಒಂದು ಒಪ್ಪಂದ ಮಾಡಿ, ಹೇರಳ ಆರ್ಥಿಕ ಸಹಾಯ ಮಾಡುವ ಭರವಸೆಯಿಂದ ಲಿಬಿಯಾ ದೇಶವು ತನ್ನ ಸಮೂಹ ನಾಶಕ ಶಸ್ತ್ರಾಸ್ತ್ರಗಳ ತಯಾರಿಯ ಕಾರ್ಯಕ್ರಮವನ್ನು ರದ್ದುಪಡಿಸುವಂತೆ ಒತ್ತಾಯಪಡಿಸಿತು. ಇನ್ನು ಅಮೆರಿಕಾದ ದೃಷ್ಟಿ ಇರಾನ್ ಮತ್ತು ಉತ್ತರ ಕೊರಿಯಾದೆಡೆಗೆ ಸಹ ಹರಿಯುತ್ತಿದೆ. ಹಾಗೆಯೇ ಆ ರಾಷ್ಟ್ರಗಳ ಸಮೂಹ ನಾಶಕ ಮಾರಕಾಸ್ತ್ರಗಳ ಕಾರ್ಯಕ್ರಮಗಳನ್ನು ರದ್ದುಪಡಿಸುವುದರಲ್ಲಿ ನಿರತವಾಗಬಹುದು. ಹೀಗೆ ಶಕ್ತರಾಷ್ಟ್ರವಾದ ಅಮೆರಿಕಾ ವಿಶ್ವದ ಇತರ ದೇಶಗಳ ಹಿರಿಯಣ್ಣನಂತೆ ವರ್ತಿಸುತ್ತಿದೆ. ವಿಜ್ಞಾನದ ಪ್ರಗತಿಯಿಂದ ಒಂದು ದೇಶದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹೀಗೆ ಜೀವನದ ಎಲ್ಲಾ ಪ್ರಗತಿಯಾದರೂ, ಅದೇ ವಿಜ್ಞಾನದಿಂದ ಆ ದೇಶವು ಇನ್ನೂ ಹೆಚ್ಚಿನ ಸೈನಿಕ ಶಕ್ತಿಯನ್ನು ಬೆಳಸಿದ್ದನ್ನು ನಾವು ಗಮನಿಸಬಹುದು. ವಿಶ್ವದ ದೇಶಗಳ ಈ ಮನೋಧರ್ಮ ಜಗತ್ತಿನ ಶಾಂತಿಗೆ ಹಾನಿಯಾಗಲಿದೆ. ಈ ಸಮಸ್ಯೆಯಿಂದ ವಿಶ್ವದ ಎಲ್ಲ

ನಾಗರಿಕರು ಪಾರಾಗುವ ಬಗ್ಗೆ ಚಿಂತಿಸಬೇಕಾದ ಅನಿವಾರ್ಯತೆ ಪ್ರಾಪ್ತವಾಗಿದೆ.

ನಾವು ಕೇವಲ ವಿಜ್ಞಾನವನ್ನು ಆಶ್ರಯಿಸಿರುವುದರಿಂದ ಈ ಸಮಸ್ಯೆಯನ್ನು ನಿವಾರಿಸಲಾರೆವು ಹೀಗಾಗಿ ಈ ಸಮಸ್ಯೆಯನ್ನು ನಿವಾರಿಸುವ ಸಲುವಾಗಿ ಮಾನವನು ಆಧ್ಯಾತ್ಮವಿಜ್ಞಾನದ ಕಡೆಗೆ ಗಮನ ಕೊಡಬೇಕಾಗಿದೆ. ಆಧ್ಯಾತ್ಮವು ಮನುಷ್ಯನ ಹೃದಯ, ಅಹಂಕಾರ, ಮನಸ್ಸು ಮತ್ತು ಬುದ್ಧಿಯನ್ನು ಜೋಡಿಸುವ ಸಾಧನವಾಗಿದೆ.ಆಧ್ಯಾತ್ಮವಿಜ್ಞಾನದ ಸರಿಯಾದ ಸಾಮೂಹಿಕ ಪ್ರಯೋಗ ಸಮಾಜದಲ್ಲಿ ಕಳೆದ ಸಹಸ್ರಾರು ವರ್ಷಗಳಿಂದ ಆಗಲೇ ಇಲ್ಲ. ವಿಚಾರ ದೃಷ್ಟಾರರಾದ ಮಹಾತ್ಮಾ ಗಾಂಧಿಯವರು ಅನೇಕ ದೈವಿಗುಣಗಳಲ್ಲಿ ಸತ್ಯ ಮತ್ತು ಅಹಿಂಸೆ ಎಂಬ ಎರಡು ಗುಣಗಳ ಆಧಾರದಲ್ಲಿ ಅವುಗಳ ಸಾಮೂಹಿಕ ಪ್ರಯೋಗ ನಡೆಸಿ ತನ್ಮೂಲಕ ದೇಶಕ್ಕೆ ಸ್ವಾತಂತ್ರವನ್ನು ತಂದುಕೊಟ್ಟಿರುವುದು ಸರ್ವರಿಗೂ ತಿಳಿದಿರುತ್ತದೆ. ಹಾಗೆಯೇ ಆ ಸಮಯದಲ್ಲಿ ದೇಶದ ಜನರ ನೈತಿಕ ಮಟ್ಟವೂ ಏರಿತ್ತು. ಈ ಘಟನೆಯಿಂದ ದೈವೀಗುಣಗಳ ಸಾಮೂಹಿಕ ಪ್ರಯೋಗದಿಂದ ದೇಶದ ನೈತಿಕಮಟ್ಟ ಉನ್ನತಗೊಳ್ಳುತ್ತದೆ ಎಂದು ನಿರ್ವಿವಾದವಾಗಿ ತೀರ್ಮಾನಿಸಬಹುದಾಗಿದೆ.

ಆಚಾರ್ಯ ವಿನೋಬಾ ಭಾವೆಯವರು ಸರ್ವೋದಯ ತತ್ವವನ್ನು ಪ್ರಚಾರ ಮಾಡಿ, ಗ್ರಾಮದಾನ ಆಂದೋಲನ ಅಂದರೆ ಪರಸ್ಪರ ಸಹಕಾರ ಹಾಗೂ ಪ್ರೇಮದ ಮೂಲಕ ಸಹಚರ್ಯದ ಅಲೆಯನ್ನು ಎಬ್ಬಿಸಿ, ನಿಸ್ವಾರ್ಥ ಸೇವೆಯನ್ನು ನೀಡುವ ಸೇವಕರ ಸಂಘಟನೆಯನ್ನು ಮಾಡಿ ಅವರಲ್ಲಿ ಸಮರ್ಪಣಾ ಭಾವವನ್ನು ಜಾಗೃತಗೊಳಿಸಿ ದೇಶದ ನೈತಿಕ ಮಟ್ಟವನ್ನು ಏರಿಸಿದರು. ಈ ಎರಡು ಘಟನೆಗಳಿಂದ ದೈವೀ ಗುಣಗಳ ಸಾಮೂಹಿಕ ಪ್ರಯೋಗವು ಹೆಚ್ಚು ಫಲಕಾರಿ ಎಂದು ತೀರ್ಮಾನಿಸಬಹುದು. ಮತ್ತು ಅಧ್ಯಾತ್ಮವು ಜನರ ಮನಸ್ಸು ಮತ್ತು ಹೃದಯವನ್ನು ಜೋಡಿಸಿ ದೇಶದಲ್ಲಿ ಶಾಂತಿಯನ್ನು ಉಂಟುಮಾಡುತ್ತದೆ. ಹಾಗೆಯೇ ಅಧ್ಯಾತ್ಮವು ವಿಶ್ವದ ಮನಸ್ಸು ಹಾಗೂ ಹೃದಯವನ್ನು ಜೋಡಿಸಿದಾಗ ವಿಶ್ವದಲ್ಲಿ ಶಾಂತಿ ನೆಲಸುತ್ತದೆ.

ಹಿಂದೆ ಯೂರೋಪ್ ದೇಶದ ಜ್ಞಾನಾಭ್ಯುದಯ ಕಾಲದಲ್ಲಿ, ವಿಜ್ಞಾನವು ಬೆಳೆದು, ಹಂತ ಹಂತವಾಗಿ ಅಭಿವೃದ್ಧಿ ಹೊಂದಿತ್ತು. ಆದಿಯಲ್ಲಿ ಕೆಲವೇ ಮಂದಿ ವ್ಯಕ್ತಿಗಳ ಆಂತರಿಕ ತುಡಿತದಿಂದಾಗಿ ವಿಜ್ಞಾನದ ಶೋಧವು ನಡೆಯಿತು. ಇದರಿಂದ ಸಮಾಜಕ್ಕೆ ಅಲ್ಪ ಸ್ವಲ್ಪ ಲಾಭವಾಗುತ್ತಲೂ ಮುಂದೆ ಹೆಚ್ಚಿನ ಜನರ ಸಹಕಾರವು ಲಭಿಸಿತು. ಶ್ರೀಮಂತರ, ಅಧಿಕಾರವರ್ಗದವರ ವಿಜ್ಞಾನವು ಕ್ಷಿಪ್ರಗತಿಯ ಪ್ರಗತಿಯನ್ನು ಕಂಡಿತು. ಇದರಿಂದ ಸಮಾಜಕ್ಕೆ ಹೆಚ್ಚಿನ ಲಾಭವಾಗಿ, ಸ್ವಾರ್ಥಿಗಳು ಲಾಭಬಡಕರು ಹಾಗೂ ಅಧಿಕಾರಶಾಹಿಗಳ ನೆರವಿನಿಂದಾಗಿ ವಿಜ್ಞಾನವು ಮತ್ತಷ್ಟು ಹಿರಿದಾದ ಪ್ರಗತಿಯನ್ನು ದಾಖಲಿಸಿತು. ವಿಜ್ಞಾನಿಗಳು ತಮ್ಮ ಜ್ಞಾನದಾಹದಿಂದಾಗಿ ಸಂಶೋಧನೆಗಳನ್ನು ಮುಂದುವರಿಸಿದರೇ ಹೊರತು ಸಂಶೋಧನೆಯ ಪರಿಣಾಮ ಸಮಾಜದಲ್ಲಿ ಯಾವ ರೀತಿ ಆಗುತ್ತದೆ ಎಂಬುದಾಗಿ ಚಿಂತಿಸಲಿಲ್ಲ. ತತ್ಪರಿಣಾಮವಾಗಿ ಇಂದು ವೈವಿಧ್ಯಮಯ ಮಾರಕಾಸ್ತ್ರಗಳು, ಅಲ್ಲದೆ ಕ್ಷಣಾರ್ಧದಲ್ಲಿ ವಿಶ್ವವನ್ನೇ ನಾಶಗೊಳಿಸಬಲ್ಲ ಸಾಮೂಹಿಕ ವಿನಾಶಕ ಅಣು ಅಸ್ತ್ರಗಳೂ ನಿರ್ಮಾಣಗೊಳ್ಳುವಂತಾಗಿದೆ. ಇನ್ನೊಂದೆಡೆ, ಹಲವು ಸಾಮಾಜಿಕ ರಂಗಗಳಲ್ಲಿ ಅಂದರೆ ವೈದ್ಯಕೀಯ, ಶೈಕ್ಷಣಿಕ, ಸಮೂಹ ಮಾಧ್ಯಮ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ

ಇವೇ ಮೊದಲಾದ ರಂಗಗಳಲ್ಲಿ ಬಹು ಉಪಕಾರಕ ಪ್ರಗತಿಯನ್ನು ಸಾಧಿಸಲಾಗಿದೆ. ಆದರೇನು? ಇದರಿಂದೆಲ್ಲ ವಿಜ್ಞಾನದ ವಿಧಾಯಕ ಪ್ರಗತಿಯ ಲಾಭ ಅನುಭವಿಸಲು ಸಾಧ್ಯವೋ? ಎಂಬುದಾಗಿ ಯೋಚಿಸಬೇಕಾಗಿದೆ. ಇಂದಿನ ಸಮಾಜದಲ್ಲಿ ಅಶಾಂತಿ, ಅತೃಪ್ತಿ, ಅವಿಶ್ವಾಸ, ಆಕ್ರೋಶ, ಪಾಂಥಿಕ ಭೇದ, ಗಡಿಭೇದ, ಭಾಷಾ ವ್ಯಾಮೋಹ ಇವೇ ಮೊದಲಾದ ಸಮಸ್ಯೆಗಳು ಬೆಳೆದು ಸಾಮಾಜಿಕ ಮನಸ್ಸನ್ನು ಕೆಡಿಸಿರುತ್ತವೆ. ಮತ್ತೊಂದು ಕಡೆ ಅಂತರಾಷ್ಟ್ರೀಯ ಮಾನಸ ಯಾವ ರೀತಿಯಲ್ಲಿ ಕಾರ್ಯಮಾಡುತ್ತದೆ ಎಂಬುದಾಗಿ ಗಮನಿಸಬೇಕು. ಕೆಲವು ಶಕ್ತ ರಾಷ್ಟ್ರಗಳು ಸಣ್ಣ ರಾಷ್ಟ್ರಗಳನ್ನು ತಮ್ಮ ಕಕ್ಷೆಗೆ ಬರುವಂತೆ ಮಾಡಲು, ಸೈನಿಕ ಆರ್ಥಿಕ ಒತ್ತಡವನ್ನು ಹೇರಲು ಪ್ರಯತ್ನಿಸುತ್ತಿವೆ.

ಕೆಲವೇ ಶಕ್ತ ರಾಷ್ಟ್ರಗಳ ಈ ಒತ್ತಡದ ಪರಿಣಾಮವು ವಿನಾಶಕ ವಿಜ್ಞಾನ ಪ್ರಗತಿಯ ಹಿನ್ನೆಲೆಯಲ್ಲಿ ಜಾಗತಿಕ ಮಟ್ಟದಲ್ಲಿ ಯಾವ ಕೆಟ್ಟ ಪರಿಣಾಮ ಬೀರಬಹುದೆಂದು ನಾವು ಚಿಂತಿಸಬೇಕಾದ ಕಾಲ ಈಗ ಬಂದಿದೆ. ಜಾಗತಿಕ ಪ್ರಜೆಗಳು ಎಚ್ಚರಗೊಳ್ಳಬೇಕಾಗಿದೆ. ವಿನಾಶಕ ವಿಜ್ಞಾನವನ್ನು ತೊರೆದು, ವಿಧಾಯಕ ವಿಜ್ಞಾನವನ್ನು ಆಶ್ರಯಿಸಬೇಕು. ವಿಶ್ವಪ್ರಜೆಗಳು ಅಧ್ಯಾತ್ಮ ಮತ್ತು ವಿಧಾಯಕ ವಿಜ್ಞಾನವನ್ನು ಜೊತೆಯಾಗಿ ಆಶ್ರಯಿಸಿ ವಿಶ್ವದಲ್ಲಿ ಶಾಂತಿಗಾಗಿ ಶ್ರಮಿಸಬೇಕು. ಹಿಂಸಾಮಯ ಭಾವನೆಯಿಂದ ತ್ವಪ್ತಗೊಂಡ ವಿಶ್ವಕ್ಕೆ ಇದೇ ಈಗಿನ ತುರ್ತು ಅನಿವಾರ್ಯತೆಯಾಗಿದೆ.

ಮಹಾತ್ಮಾ ಗಾಂಧೀ, ಏಸುಕ್ರಿಸ್ತ, ಮಹಮದ್ ಪೈಗಂಬರ್, ಪರ್ಶಿಯಾದ ಜರಾತುಷ್ಟ್ರ ಚೀನಾದ ಲಾವೋತ್ಸೆ, ತಾವೋ ಎಲ್ಲರೂ ಈ ಭೂಮಿಯ ಪುತ್ರರು. ಅವರೆಲ್ಲರೂ ತಾವು ದಿವ್ಯ ಜೀವನವನ್ನು ಜೀವಿಸಿ, ಸಾರ್ವಕಾಲಿಕ ತತ್ವ ಬೋಧನೆ ಮಾಡಿದ್ದರಿಂದ ಸಹಸ್ರ ಸಹಸ್ರ ವರ್ಷಗಳಿಂದಲೂ ಅವರ ಬೋಧನೆಯ ಪ್ರಭಾವ ಉಳಿದಿದೆ. ತಾವೋ ತಪೋನಿಷ್ಠ ಜೀವನವನ್ನು ನಡೆಸಿ, ಲೋಕ ಕಲ್ಯಾಣಕ್ಕಾಗಿ ಮರುತ್‌ಗಣಗಳ ಸಂದೇಶವನ್ನು ಆಲಿಸಬೇಕು. ಪ್ರತಿಭಾವಂತ ಮಹಾತ್ಮರಿಗೆ ಅವು ಲಭಿಸುತ್ತವೆ. ಅವುಗಳು ಲೋಕಕಲ್ಯಾಣಕ್ಕಾಗಿ, ಸಮಾಜದಲ್ಲಿ ಶಾಂತಿ, ಪುಷ್ಟಿ, ತುಷ್ಟಿಗಾಗಿ ಆವಿರ್ಭವಿಸಿದ್ದು, ಅಂತಹ ಶ್ರೇಷ್ಠ ವಿಚಾರಗಳ ಸಾಕ್ಷಾತ್ಕಾರ ಜೀವನದಲ್ಲಾಗಬೇಕು.

ಈ ರೀತಿ ಅಧ್ಯಾತ್ಮವಿಜ್ಞಾನ ಬೆಳೆಯಬೇಕು. ಪೂರ್ಣ ಮಟ್ಟದ ಅಧ್ಯಾತ್ಮವಿಜ್ಞಾನ ಬೆಳೆದು ಬರಲು ಕೆಲವು ಶತಮಾನಗಳೇ ಬೇಕಾದಾವು ಆದರೂ ಅದು ಪೂರ್ಣ ಅನ್ನುವಂತಿಲ್ಲ. ಅಧ್ಯಾತ್ಮವಿಜ್ಞಾನವು ಬೃಹತ್ ಆಗಿದೆ, ಬ್ರಹ್ಮವಾಗಿದೆ, ಆದರೂ ಅಧ್ಯಾತ್ಮದ ಸ್ವಲ್ಪ ಸ್ವಲ್ಪ ವಿಕಾಸವಾಗುತ್ತಲೂ ಸಮಾಜಕ್ಕೆ ಅಮಿತ ಲಾಭವಾಗುತ್ತದೆ. ಅಧ್ಯಾತ್ಮವಿಜ್ಞಾನ ವರ್ಧಿಸುತ್ತ ಮುಂದೆ ಕಾಲಕಳೆದಂತೆ ವಿಶ್ವಕ್ಕೆ ಯಾವ ಯಾವ ಪ್ರಯೋಜನ ಕೊಡುತ್ತದೆ ಎಂಬ ಕಲ್ಪನೆ ಈ ಕಾಲದಲ್ಲಿ ಮೂಡಲು ಸಾಧ್ಯವಿಲ್ಲ. ಆಊಹ್ಯ ರೀತಿಯಲ್ಲಿ ವರ್ಧಿಸಿ ಮುಂದೆ ಸಮಾಜದಲ್ಲಿ,ಶಾಂತಿ, ಪುಷ್ಟಿ, ತುಷ್ಟಿಗಳನ್ನೂ ಕೊಡುತ್ತವೆ ಎಂಬ ದೃಢ ವಿಶ್ವಾಸ ತಾಳಬಹುದು.

ಪ್ರಾಥಮಿಕ ಶಾಲೆ ಆದಿಯಾಗಿ ಸ್ನಾತಕೋತ್ತರ ವಿದ್ಯಾಸಂಸ್ಥೆಗಳ ಸರ್ವಶಿಕ್ಷಕರು, ವಿದ್ಯಾಸಂಸ್ಥೆಯಲ್ಲೇ, ಹೊರಗುಳಿದ ಚಿಂತಕರು ಸಾಹಿತಿಗಳು ಸರ್ವಹಿತಕಾಂಕ್ಷಿಗಳು ನಮ್ಮ ವಿಶ್ವದ ಎಲ್ಲಾ ಶ್ರೇಷ್ಠ ಮಹಾತ್ಮರ ದಿವ್ಯ ಜೀವನವನ್ನು ಆಳವಾಗಿ ಅಭ್ಯಸಿಸುವ ಮೂಲಕ

ಅವರ ವಿಚಾರಗಳನ್ನು ನಿಷ್ಪಕ್ಷಪಾತವಾಗಿ ಲೋಕಕಲ್ಯಾಣಕ್ಕಾಗಿ ಪ್ರೌಢಶಾಲೆ ಆದಿಯಾಗಿ ಸ್ನಾತಕೋತ್ತರ ತರಗತಿಗೂ ಯೋಗ್ಯವಾದ ಪಠ್ಯ ಪುಸ್ತಕಗಳನ್ನು ತಯಾರಿಸಿ ವಿದ್ಯಾ ಕ್ಷೇತ್ರದಲ್ಲಿ ಅವುಗಳ ಅನುಷ್ಠಾನವಾಗಬೇಕು.

ಪ್ರೌಢಶಾಲೆಯ ಪ್ರಾರಂಭ ತರಗತಿಯ ಮಕ್ಕಳ ಪ್ರಾಯ ೧೩-೧೪ ವರ್ಷ ಆಗಿರುತ್ತದೆ. ಈ ಹಂತದಲ್ಲಿಯೇ ಮಕ್ಕಳು ಬಹು ಕುತೂಹಲದಿಂದ ತಮ್ಮ ಜೀವನದ ಬಗ್ಗೆ ಯೋಚಿಸಲು ಉಪಕ್ರಮಿಸುತ್ತಾರೆ. ತಾನು ಯಾರು? ಪ್ರಪಂಚ ಏನು? ತನಗೂ ಪ್ರಪಂಚಕ್ಕೂ ಸಂಬಂಧವೇನು? ಹೀಗೆ ಮಕ್ಕಳ ಮನಸ್ಸು ಪ್ರಶ್ನಿಸಲು ತೊಡಗುತ್ತದೆ. ಈ ಸಂದರ್ಭದಲ್ಲಿಯೇ ಮಕ್ಕಳಿಗೆ ಅಧ್ಯಾತ್ಮ ವಿಚಾರಗಳನ್ನು ತಿಳಿಸಿ ಕೊಟ್ಟಲ್ಲಿ ಅವರ ಚಿಂತನೆಯು ವಿಕಾಸಗೊಳ್ಳುತ್ತದೆ. ತನಗೆ ಅನುಕೂಲವೆನಿಸಿದ ಜೀವನದ ಗುರಿ ಆತನ ಹೃದಯದಲ್ಲಿ ಮನೆಮಾಡಿದಾಗ ಆತನ ಮನಸ್ಸು ವಿಕಾಸಗೊಂಡು ಜೀವಮಾನವಿಡೀ ಆತನನ್ನು ಪ್ರೇರೇಪಿಸುತ್ತದೆ. ಆತನು ಅಪೇಕ್ಷಿಸುವ ಗುರಿಯತ್ತ ಮುನ್ನಡೆಸುತ್ತದೆ. ಮುಂದೆ ಅವರು ಸತ್ಪ್ರಜೆಗಳಾಗುತ್ತಾರೆ.

ಮಕ್ಕಳಿಗೆ ಸಹಸ್ರ, ಸಹಸ್ರ ವರ್ಷಗಳ ವರೆಗೆ ಪ್ರೇರೇಪಿಸುವ ಮಹಾತ್ಮರ ಜ್ಞಾನವು ಸಂಕುಚಿತ ಭಾವನೆಯದೆ? ಕೋಮುವಾದವೇ? ಮೂಲಭೂತವಾದವೇ? ಇವು ಯಾವುದೂ ಅಲ್ಲ. ಇಂತಹದನ್ನು ಪಠ್ಯ ಪುಸ್ತಕದಲ್ಲಿ ಸೇರಿಸಲು ಅಡ್ಡಿ ಏನು? ವಿರೋಧವಿದ್ದಲ್ಲಿ ಸಾರ್ವಜನಿಕ ಅಭಿಪ್ರಾಯ ರೂಢಿಸಿಕೊಂಡು ಅಧ್ಯಾತ್ಮ ವಿಷಯಗಳನ್ನು ಪಠ್ಯಪುಸ್ತಕಗಳಲ್ಲಿ ಅಳವಡಿಸಬೇಕು. ಭಾವಿ ಜನಾಂಗದ ಭವಿಷ್ಯ ರೂಪಿಸುವ ಜವಾಬ್ದಾರಿ ನಮ್ಮ ಪಾಲಿಗೆ ಇದೆ. ಉತ್ತಮ ಆಡಳಿತ ನಡೆಸುವ ಹಕ್ಕು ಸರ್ಕಾರದ್ದು. ಆದರೆ ಮಕ್ಕಳನ್ನು ಉತ್ತಮ ಪ್ರಜೆಗಳನ್ನಾಗಿ ರೂಪುಗೊಳಿಸುವುದು ಶಿಕ್ಷಕರ ಮತ್ತು ಶಿಕ್ಷಣ ಸಂಸ್ಥೆಯ ಗುರಿಯಾಗಿರಬೇಕು. ಇದನ್ನು ಸಾಧಿಸುವ ಜವಾಬ್ದಾರಿ ಶಿಕ್ಷಕರದ್ದಾಗಿರುತ್ತದೆ.

ಇಂದಿನ ವಿದ್ಯಾಭ್ಯಾಸದ ಪಾಠ ಪಟ್ಟಿಯಲ್ಲಿ ಶ್ರೇಷ್ಠ ಪುರುಷರ ಜೀವನ ವೃತ್ತಾಂತ ಹಾಗೂ ಅವರ ಉತ್ತಮ ವಿಚಾರಗಳು ಇಲ್ಲದಿರುವುದು ದುರ್ದೈವದ ಸಂಗತಿ. ದೇಶ ಪ್ರೇಮಕ್ಕಿಂತ ಮಾನವತೆಯ ಪ್ರೇಮ ಹಿರಿದು. ಭಾವಿ ಜನಾಂಗವನ್ನು ಸೃಷ್ಟಿಸುವ ಚತುರ ಶಿಲ್ಪಿಗಳಾದ, ಶಿಕ್ಷಕರು ಮಾನವ ನಿರ್ಮಾಣದಂತಹ ಕಾರ್ಯವನ್ನು ನಿರ್ವಹಿಸ ಬೇಕು. ಈ ಪುಣ್ಯ ಕಾರ್ಯದಲ್ಲಿ ಅವರಿಗೆ ಜಯವಾಗಲಿ. ತಾಯಿಯು ಮಗುವನ್ನು ಕುಟುಂಬದ ಭಾವಿ ಕುಡಿ ಎಂಬುದಾಗಿ ವಾತ್ಸಲ್ಯದಿಂದ ಕಾಣುವಂತೆ, ಶಿಕ್ಷಕರು ತಮ್ಮ ಮಡಿಲಿಗೆ ಬಂದ ಆ ಮಕ್ಕಳನ್ನು ಭವಿಷ್ಯದ ಕುಡಿ ಎಂಬುದಾಗಿ ಭಾವಿಸಿ ವಾತ್ಸಲ್ಯದಿಂದ ಕಾಣಬೇಕು. ವಿಜ್ಞಾನ ಹಾಗೂ ಅಧ್ಯಾತ್ಮವಿದ್ಯೆಯನ್ನು ಬೋಧಿಸಬೇಕು.

ಆಚಾರ್ಯ ವಿನೋಬಾ ಭಾವೆಯವರು ಹೇಳುತ್ತಾರೆ. "ವಿಶ್ವದಲ್ಲಿ ಮರುತ್‌ಗಣಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಂಚರಿಸಿ ವಿಚಾರಗಳನ್ನು ಒಯ್ಯುತ್ತಿವೆ. ಮತ್ತು ಅವು ಪ್ರತಿಭಾವಂತರಲ್ಲಿ ಪ್ರಕಟಗೊಳ್ಳುತ್ತವೆ." ಉದಾಹರಿಸುವುದಾದರೆ, ನ್ಯೂಟನ್ ಮಹಾಶಯನ ವಿಚಾರವಾಗಿ ಹೇಳುತ್ತೇನೆ. ಒಮ್ಮೆ ಆತ ಮರದಿಂದ ಹಣ್ಣು ಕೆಳಗೆ ಬೀಳುವುದನ್ನು ಕಂಡಾಗ ಹಣ್ಣು ಏತಕ್ಕಾಗಿ ಕೆಳಗೆ ಬೀಳುತ್ತದೆ ಎಂಬ ಕುತೂಹಲ ಅವನಲ್ಲಿ ಕೆರಳಿತು. ಮುಂದೆ ಅದು ಭೂಮಿಯ ಗುರುತ್ವಾಕರ್ಷಣೆಯಿಂದ ಭೂಮಿಗೆ

ಬೀಳುತ್ತದೆ ಎಂಬುದಾಗಿ ಆತನ ಬುದ್ಧಿ ನಿಷ್ಕರ್ಷಿಸಿ ಆತನ ಪ್ರತಿಭೆಯಿಂದಾಗಿ ವಿಜ್ಞಾನಕ್ಕೆ ಸಂಬಂಧಿಸಿದ ವಿಚಾರವು ಆತನಿಗೆ ಹೊಳೆಯಿತು. ಹೀಗೆಯೇ ವಿಶ್ವದ ಬೇರೆ ಬೇರೆ ವಿಜ್ಞಾನಿಗಳ ಪ್ರತಿಭೆಗೆ ವಿಜ್ಞಾನದ ವಿಚಾರಗಳು ಪ್ರಕಟಗೊಂಡು ಆಧುನಿಕ ವಿಜ್ಞಾನವು ಬೆಳೆಯಿತು.

ಮರುತ್‌ಗಣಗಳು ವಿಶಿಷ್ಟವಾದ ಮಾರುತಗಳ ಸಮೂಹ. ಈ ಮರುತ್‌ಗಣಗಳು ಜಗತ್ತಿನ ಎಲ್ಲೆಡೆ ಸಂಚರಿಸಿ ವಿಚಾರಗಳ ಪ್ರವಾಹ ಮಾಡುತ್ತಾ ವಿಶಿಷ್ಟ ಜನರಿಗಷ್ಟೇ ಪ್ರೇರಣೆ ಕೊಡುತ್ತವೆ. ತನ್ನ ಬುದ್ಧಿ, ಇಂದ್ರಿಯ, ಮನ, ಶರೀರ ಮತ್ತು ಬಾಹ್ಯ ಪರಿಸ್ಥಿತಿಗೆ ಅತೀತರಾಗಿರುವವರಿಗೆ ಈ ಮರುತ್‌ಗಣಗಳು ಸ್ಪರ್ಶಿಸಿ, ಅವರಿಂದ ಪ್ರೇರಣಾದಾಯಕ ಕಾರ್ಯಗಳನ್ನು ಮಾಡಿಸುತ್ತವೆ. ಈ ಪ್ರೇರಣೆಯನ್ನು ಅನುಭವಿಸುವ ಪ್ರಜ್ಞೆಯುಳ್ಳವರನ್ನು ಋಷಿಗಳು, ಯಾ ದೃಷ್ಟಾರರೆಂದು ಕರೆಯುತ್ತಾರೆ. ಅದಕ್ಕಾಗಿಯೇ ಉಪಾಸನೆ, ತಪಸ್ಸು, ಚಿಂತನೆಗಳಿಂದ ಸಹೃದಯೀ ಮಹಾತ್ಮಾ ಮರುತ್‌ಗಣವನ್ನು ಉದ್ದೇಶಿಸಿ ಈ ರೀತಿಯಾಗಿ ಪ್ರಾರ್ಥಿಸುತ್ತಿದ್ದರು.

"ಆನೋ ಭದ್ರಾ : ಕ್ರತವೋ ಯಂತು ವಿಶ್ವತಃ" – ಋಗ್ವೇದ

ವಿಶ್ವದ ಎಲ್ಲಡೆ ಸಂಚರಿಸುವ ಮರುತ್‌ಗಣಗಳು ತಮ್ಮನ್ನು ಸ್ಪರ್ಶಿಸಿ ಶುದ್ಧವಿಚಾರಗಳ ಪ್ರೇರಣೆ ಕೊಡಲೆಂಬುದಾಗಿ ಬೇಡುತ್ತಿದ್ದರು. ಈ ರೀತಿಯಲ್ಲಿ ಪ್ರಾಪ್ತವಾದ ವಿಚಾರಗಳನ್ನು ಮನನ ಮಾಡಿಕೊಂಡು ಋಷಿಗಳು ಮಧುರವಾಣಿಯ ಮೂಲಕ ಜನರಿಗೆ ಬೋಧಿಸಿ ಜನರೊಂದಿಗೆ ಸಾಮೂಹಿಕ ಪ್ರಯೋಗ ಮಾಡಿ ಅಧ್ಯಾತ್ಮ ವಿಚಾರ ಮಂತವ್ಯಗಳನ್ನು ಖಚಿತಗೊಳಿಸುತ್ತಿದ್ದರು. ಇಂತಹ ಅನುಭವ ಮಹಾತ್ಮರಿಗೆ ಆಗಾಗ್ಗೆ ಅವರ ಪ್ರತಿಭೆಗೆ ಪ್ರಾಪ್ತವಾಗಿ ಅಧ್ಯಾತ್ಮವಿಜ್ಞಾನ ಪ್ರಗತಿಯಾಗುತ್ತಿದೆ.

ವಿಶ್ವದಲ್ಲಿ ಪುರಾಣ ಕಾಲದಲ್ಲಿ ಈ ಅಧ್ಯಾತ್ಮ ವಿಚಾರವು ಬೆಳೆದು ಬಂದಿತ್ತು. ಅದು ಹಾಗೆಯೇ ಭಾರತ ದೇಶದಲ್ಲಿ ಅನೇಕಾನೇಕ ಋಷಿಗಳು ಆಚಾರ್ಯರು ಧರ್ಮಗುರುಗಳು ಸಂತರು ಸಾಧ್ವಿಗಳೂ ಬಂದು ಮಾನವ ಹೃದಯವನ್ನು ಜೋಡಿಸುವ ಜ್ಞಾನ ಕೊಟ್ಟಿದ್ದಾರೆ. ನಾವು ಸಮನ್ವಯ ದೃಷ್ಟಿಯಿಂದ ಎಲ್ಲಾ ರಾಷ್ಟ್ರದ ವಿಚಾರಗಳನ್ನು ಸಂಗ್ರಹಿಸಿ ಸರ್ವೇಸಾಮಾನ್ಯವಿರುವ ವಿಚಾರವನ್ನು ಮುಂದಿನ ಪೀಳಿಗೆಗೆ ವರ್ಗಾಯಿಸುವ ಕಾರ್ಯವಾಗಬೇಕು. ಬೈಬಲ್, ಕುರಾನ್, ವೇದೋಪನಿಷತ್, ಝುಂಡ್‌ಅವೆಸ್ತಾ, ದಮ್ಮಪದ, ಮುಂತಾದವುಗಳ ವಿಚಾರಗಳಲ್ಲಿ ಸರ್ವ ಮಾನ್ಯವಾದುವನ್ನು ಸ್ವೀಕರಿಸಿ, ಮುಂದಿನ ಜನರಿಗೆ ವರ್ಗಾಯಿಸುವುದು ಅಗತ್ಯ. ಏಕತೆಯನ್ನು, ಸಮಭಾವವನ್ನು ಉಂಟುಮಾಡುವ ಸದ್ವಿಚಾರಗಳನ್ನು ಸ್ವೀಕರಿಸಿ, ಧರ್ಮ ಸಹಿಷ್ಣುತೆಯನ್ನು ಬೆಳೆಸಿ ತನ್ಮೂಲಕ ವಿಶ್ವದಲ್ಲಿ ಶಾಂತಿ ಸ್ಥಾಪನೆ ಹಾಗೂ ಮಾನವ ನಿರ್ಮಾಣ ಕಾರ್ಯವನ್ನು ಸದ್ವಿದ್ಯೆಯ ಮೂಲಕ ಸಾಧಿಸುವ ಪಥದಲ್ಲಿ ಸಾಗೋಣ ಎಂದು ಹಾರೈಸುವ.

* * *

ಅಸಹಕಾರ ಮತ್ತು ಗೃಹಸ್ಥ ಜೀವನದ ಬಗ್ಗೆ ಗಾಂಧೀ ಮತ್ತು ಟಾಗೋರ್

– ಗುರುದಯಾಳ್ ಮಲ್ಲಿಕ್

ಪ್ರತಿಯೊಬ್ಬರನ್ನೂ ಪ್ರೀತಿಸುವ ಸಾಮರ್ಥ್ಯವನ್ನು ಹೊಂದಿರುವುದು ಮಹಾಪುರುಷರ ಗುಣಗಳಲ್ಲಿ ಮುಖ್ಯವಾದುದು. ಆದ್ದರಿಂದ ಅಸಹಕಾರ ಚಳುವಳಿಯಂಥದನ್ನು ಗಾಂಧೀಜಿ ಮತ್ತು ಟಾಗೋರರು ಸಮರ್ಥಿಸಿದ್ದರ ಬಗ್ಗೆ ಯಾರಿಗಾದರೂ ಆಶ್ಚರ್ಯವಾಗುತ್ತದೆ. ಆದರೆ ಆ ಸಮರ್ಥನೆಯ ಸಾಧಕ-ಬಾಧಕಗಳನ್ನು ಅರಿತ ಕೂಡಲೆ ಆ ಆಶ್ಚರ್ಯ ಇಲ್ಲವಾಗುತ್ತದೆ. ಅವರು ಯಾವುದು ಕೆಟ್ಟದಾಗಿದೆಯೋ ಅದರೊಂದಿಗೆ ಅಸಹಕಾರ ಮಾಡುವುದನ್ನು ಸಮರ್ಥಿಸಿದ್ದರು; ಅಂದರೆ ಬಹುಸಂಖ್ಯಾತ ಜನರಿಗೆ ತೇಜೋವಧೆಯನ್ನು ಅಥವಾ ಅನ್ಯಾಯವನ್ನು ಮಾಡುವ ಉದ್ದೇಶ್ಯಕ್ಕಾಗಿಯೇ ಇರುವ ವ್ಯವಸ್ಥೆ ಮತ್ತು ವ್ಯಕ್ತಿಗಳ ವಿರುದ್ಧ ಅಸಹಕಾರ. ಅಂಥ ಯಾವುದೇ ಚಟುವಟಿಕೆಗಳೊಂದಿಗೆ ಸಂಬಂಧ ಇಟ್ಟುಕೊಳ್ಳುವುದೇ ಇರುವುದು. ಈ ಭಾವನೆಯಿಂದ ಟಾಗೋರರು ಸಂಘಟಿತಗೊಂಡಿರುವ ಯಾವುದೇ ದುಷ್ಟ ಪ್ರವೃತ್ತಿಯೊಂದಿಗೆ ಸಂಬಂಧ ಇಟ್ಟುಕೊಳ್ಳದೇ ಇರುವ ತತ್ವವನ್ನು ತಮ್ಮ ಬರವಣಿಗೆಗಳಲ್ಲಿ ಮತ್ತು ಗಾಂಧೀಜಿ ದೇಶದ ಸ್ವಾತಂತ್ರ್ಯಕ್ಕಾಗಿ ನಡೆಸಿದ ವಿವಿಧ ಉದ್ದೇಶ್ಯಮುಖಿ ಕಾರ್ಯಕ್ರಮಗಳಲ್ಲಿ ಹುಟ್ಟುಹಾಕಿದರು. ಆ ದುಷ್ಟ ಪ್ರವೃತ್ತಿ ಆರ್ಥಿಕ, ಸಾಮಾಜಿಕ, ಧಾರ್ಮಿಕ, ನೈತಿಕ, ರಾಜಕೀಯ ಇತ್ಯಾದಿ ಯಾವುದೇ ರೂಪದಲ್ಲಿರಬಹುದು. ಈ ದೃಷ್ಟಿಕೋನದಿಂದ ಅಸಹಕಾರ ಚಳುವಳಿಯ ತತ್ವ ಮಾನವ ಸಮಾಜದಲ್ಲಿ ಕಾರ್ಯ ಮಾಡುವ ನೈತಿಕ ಶಕ್ತಿಗಳೊಂದಿಗೆ ಸಹಕರಿಸುವುದು. ಆದರೆ ದುರಂತವೇನೆಂದರೆ ಈ ಚಳುವಳಿಯಲ್ಲಿ ಭಾಗವಹಿಸಿದ ಅನೇಕರಿಗೆ ಈ ಸತ್ಯ ಹೊಳೆಯಲೇ ಇಲ್ಲ. ಬೇರೆಯವರ ಬಗ್ಗೆ ಪ್ರೇಮ ಹೊಂದುವುದರರ್ಥ ಅವರ ನೈತಿಕ ಸುಧಾರಣೆ ಮತ್ತು ಪ್ರಾಮಾಣಿಕತೆಗೆ ಒತ್ತು ಕೊಡುವುದೆಂದಲ್ಲವೆ? ಖಂಡಿತವಾಗಿಯೂ ಮನುಷ್ಯ ದುಷ್ಟತನವನ್ನು ಮೀರಬಲ್ಲಂಥವನು.

ಗಾಂಧೀಜಿ ಮತ್ತು ಟಾಗೋರರು ವಿದೇಶಿ ಆಳ್ವಿಕೆಯನ್ನು ದುಷ್ಟತನದ ಪರಮಾವಧಿಯೆಂದು ತಿಳಿದಿದ್ದರು. ಏಕೆಂದರೆ, ಅದು ಜನತೆಯ ಸ್ವತಂತ್ರ ವೈಚಾರಿಕ ಶಕ್ತಿಯನ್ನೂ, ಕೃತಿಯನ್ನೂ ಮತ್ತು ಸ್ವಂತ ಪ್ರತಿಭೆ ಹಾಗೂ ಗುರಿಗನುಗುಣವಾಗಿ ಬೆಳೆಯಬೇಕೆಂಬ ಅವರ ಜನ್ಮಸಿದ್ಧ ಹಕ್ಕನ್ನೂ ಅಪಹರಿಸುತ್ತದೆ. ಪ್ರಜೆಗಳನ್ನು ಅಮಾನವೀಯರನ್ನಾಗಿ, ದೇಶಭ್ರಷ್ಟರನ್ನಾಗಿಯೂ ಮಾಡುವುದರ ಮೂಲಕ ಅವರನ್ನು ಬಾಯಿಲ್ಲದ ಮೂಕ ಪಶುಗಳ ದಯನೀಯ ಸ್ಥಿತಿಗೆ ತಳ್ಳುತ್ತದೆ. ಆದ್ದರಿಂದ ಜನತೆ ಮೊದಲು ತನಗೆ ದೇವರು ಕೊಟ್ಟ ಜನ್ಮಸಿದ್ಧ ಹಕ್ಕಿನ ಅರಿವು ಮಾಡಿಕೊಳ್ಳಬೇಕು. ನಂತರ ಅದನ್ನು ಪಡೆಯುವುದಕ್ಕಾಗಿ ಅಹಿಂಸಾತ್ಮಕವಾಗಿ ನಿರಂತರವಾಗಿ ನಿರ್ಭಯದಿಂದ ಹೋರಾಟ ನಡೆಸಬೇಕು. ಆನಂತರವೇ ಅವರಿಗೆ ತಮ್ಮತನದ ಅರಿವುಂಟಾಗುವುದು ಮತ್ತು ಆತ್ಮ ಸಂತೋಷ ಹಾಗೂ ಅದೃಷ್ಟದ ಕನಸುಗಳನ್ನು ಸಾಕಾರಗೊಳಿಸಿಕೊಳ್ಳಬಹುದು. ಕೇಡಿನ ವಿರುದ್ಧದ ಈ ಹೋರಾಟದಲ್ಲಿ ತೊಡಗಿದಾಗ ಕೇಡು ಮಾಡುವವನ ವಿರುದ್ಧ ಯಾವುದೇ ಪ್ರಕಾರದ ದ್ವೇಷ ಹೊಂದುವುದನ್ನು ಸಾಧ್ಯವಾದಷ್ಟು ತೊರೆಯಬೇಕು.

ಆದರೆ ದುಃಖದ ಸಂಗತಿಯೇನೆಂದರೆ ಕೇಡಿನ ವಿರುದ್ಧದ ಹೋರಾಟದಲ್ಲಿ ತೊಡಗಿರುವಾಗಲೇ ಬೆಳೆಸಿಕೊಳ್ಳಬೇಕಾಗಿದ್ದ ಪರಸ್ಪರರಲ್ಲಿಯ ಸಹಕಾರದ ಭಾವನೆ ಅಸಹಕಾರದ ಆಂದೋಲನದಲ್ಲಿ ಬೆಳೆಯಲಿಲ್ಲವೆಂಬುದು. ಸಮಕಾಲೀನ ಭಾರತದಲ್ಲಿ ಈ ಭಾವನೆಯ

ಆಚರಣೆ ಎಷ್ಟು ಅಗತ್ಯವೆಂಬುದು ನೋವಿನ ಅನುಭವದ ಮೂಲಕ ಸ್ಪಷ್ಟವಾಗುತ್ತಿದೆ. ಈ ಸಂಗತಿ ಎಷ್ಟು ಬೇಗನೆ ಆಚರಣೆಗೆ ಬರುತ್ತದೋ ಅಷ್ಟರ ಮಟ್ಟಿಗೆ ಗಾಂಧೀಜಿ ಮತ್ತು ಟಾಗೋರರ ಜೀವನವಿಡಿಯ ಶ್ರಮ ಮತ್ತು ಪರಂಪರೆ ಫಲದಾಯಕವಾಗುವುದು.

ಪಾರಂಪರಿಕ ಹಿಂದೂ ಸಂಪ್ರದಾಯದ ಮತ್ತು ಜೀವನ ಯೋಜನೆಯ ನಾಲ್ಕು ಪ್ರಕಾರದ ಆಶ್ರಮಗಳಲ್ಲಿ ಗೃಹಸ್ಥಾಶ್ರಮ ಒಂದು. ಆತ್ಮಜ್ಞಾನಕ್ಕೆ ಸಂಬಂಧಪಟ್ಟ ವಿಶೇಷ ಅಧ್ಯಯನದ ನಂತರ ಗೃಹಸ್ಥಾಶ್ರಮವನ್ನು ಪ್ರವೇಶಿಸುತ್ತಾನೆ. ಗೃಹಸ್ಥಾಶ್ರಮವು ಅವನ ಪರಿಕ್ಷಾ ಸ್ಥಾನವೂ ಆಗಿರುತ್ತದೆ; ತರಬೇತಿಯ ಸ್ಥಾನವೂ ಆಗಿರುತ್ತದೆ. ಅವನು ಕಲಿತ ಸತ್ಯದ ಪಾಠಗಳ ಪರೀಕ್ಷೆಯಾಗುತ್ತದೆ. ಮೊದಲು ಅವನು ತನ್ನ ಕುಟುಂಬದಲ್ಲಿ ತಾನು ಹೇಗಿರಬೇಕೆಂಬುದರ ಶಿಕ್ಷಣ ಪಡೆಯುತ್ತಾನೆ; ನಂತರ ಹೊರಗಿನ ವಿಶಾಲ ಸಮಾಜದೊಡನೆ ಇರಬೇಕಾದ ತನ್ನ ಸೂಕ್ತ ಸಂಬಂಧಗಳ ಬಗ್ಗೆ ಶಿಕ್ಷಣ ಪಡೆಯುತ್ತಾನೆ. ಕುಟುಂಬದಲ್ಲಿರುವಾಗಲೇ ಸಂತೋಷದ ಮತ್ತು ಸಮರಸ ಜೀವನದ ಗುಟ್ಟನ್ನು ಅರಿತುಕೊಳ್ಳುತ್ತಾನೆ ಅಂದರೆ ಸ್ವಾರ್ಥ ತ್ಯಾಗವನ್ನೂ, ತನ್ನ ಅಭಿವೃದ್ಧಿಯ ಪಥದಲ್ಲಿ ಇರಬಹುದಾದ ಎಲ್ಲ ಅಡ್ಡಿ–ಆತಂಕಗಳ ಮಧ್ಯೆಯೂ ಸ್ವಯಂ ಪ್ರೇರಿತನಾಗಿ ಮತ್ತು ಸಂತೋಷದಿಂದ ಸೇವೆ ಮಾಡುವುದನ್ನು ಕಲಿಯುತ್ತಾನೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ ಅವನು ಜೀವನದ ಶ್ರೇಷ್ಠ ತತ್ವ ಮತ್ತು ನಿಯಮವಾದ ಪರಸ್ಪರ ಅವಲಂಬನೆಯನ್ನು ಕಲಿಯುತ್ತಾನೆ.

ಗಾಂಧೀಜಿ ಮತ್ತು ಟಾಗೋರ್ ಈ ಉದ್ದೇಶ್ಯದಿಂದಾಗಿಯೇ ಗೃಹಸ್ಥಾಶ್ರಮ ಜೀವನದ ಅನಿವಾರ್ಯತೆಯನ್ನು ನಂಬಿದ್ದರು. ಆ ಆಶ್ರಮದಲ್ಲಿ ಪಡೆದ ಶಿಕ್ಷಣದಿಂದ ಜಗತ್ತಿನಲ್ಲಿ ಸರಿಯಾಗಿ ಬಾಳುವುದರ ಮೌಲ್ಯ ದೊರೆಯುವುದೆಂದು ಅವರು ಭಾವಿಸಿದ್ದರು. ಆದ್ದರಿಂದ ಯಾರೇ ಆಗಲಿ, ಮೋಕ್ಷ ಪಡೆಯಬೇಕೆಂಬಂಥ ಮಹೋನ್ನತ ಉದ್ದೇಶ್ಯವಿದ್ದರೂ ಯಾವ ಕಾರಣಕ್ಕೂ ಕುಟುಂಬವನ್ನು ಬಿಟ್ಟು ಹೋಗುವುದನ್ನ ಅವರಿಬ್ಬರೂ ಕಟುವಾಗಿ ವಿರೋಧಿಸಿದ್ದರು. ಟಾಗೋರರ ಒಂದು ಕವನದಲ್ಲಿ ಈ ಸತ್ಯವು ಸ್ಪಷ್ಟವಾಗಿ ವ್ಯಕ್ತಗೊಂಡಿದೆ. ಓರ್ವ ಗೃಹಸ್ಥ ಮೋಕ್ಷ ಪಡೆಯುವುದಕ್ಕಾಗಿ ಹಂಬಲಿಸುತ್ತಿರುತ್ತಾನೆ. ಈ ಉದ್ದೇಶ್ಯಕ್ಕಾಗಿ ಅವನು ತನ್ನ ಮನೆ ಮತ್ತು ಕುಟುಂಬವನ್ನು ಬಿಟ್ಟುಹೋಗಲು ತೀರ್ಮಾನಿಸುತ್ತಾನೆ. ಅವನು ತನ್ನ ಬಂಧು ಬಳಗದಿಂದ ದೂರಹೋದಂತೆಲ್ಲ ಅವನಿಗೆ ಸ್ವರ್ಗದಿಂದ ಬರುತ್ತಿರುವ ಒಂದು ಧ್ವನಿ ಪದೇ ಪದೇ ಕೇಳುತ್ತದೆ, "ನೀನು ನಿನ್ನ ಬಂಧು ಬಳಗದಿಂದ ದೂರ ಹೋದಂತೆಲ್ಲ ನೀನು ದೇವರಿಂದ ದೂರಹೋಗುತ್ತೀಯೆ? ಪ್ರಾರಂಭದಲ್ಲಿ ಅವನು ಇದು ಭೂತದ ಧ್ವನಿ ತನ್ನನ್ನು ಆಶೆಯತ್ತ ಎಳೆಯುತ್ತಿದೆ ಎಂದು ತಿಳಿಯುತ್ತಾನೆ. ಆದರೆ ಕೂಡಲೆ ಅವನಿಗೆ ತಿಳುವಳಿಕೆ ಬರುತ್ತದೆ. ನಂತರ ಅವನು ತನ್ನ ಕುಟುಂಬದ ತೆಕ್ಕೆಗೆ ಬಂದು ಸೇರುತ್ತಾನೆ.

ವ್ಯಕ್ತಿಗತ ಸ್ವಾತಂತ್ರ್ಯ ಅಥವಾ ಆತ್ಮ ಸಂತೋಷದ ವಿಷಯ ಮನುಷ್ಯನ ಆತ್ಮಕ್ಕೆ ಸಂಬಂಧಿಸುದಾಗಿದೆ. ಆತ್ಮವು ಎಲ್ಲ ಬಗೆಯ ಹಿಂಸೆಯನ್ನೂ, ದಬ್ಬಾಳಿಕೆಯನ್ನೂ ಅದು ಎಷ್ಟೇ ಕಷ್ಟದಾಯಕವಾಗಿದ್ದರೂ ಸಹಿಸಿ ದಾಟಿ ಹೋಗಬಲ್ಲದು. ಇದೇ ನಿಜವಾದ ಸ್ವಾತಂತ್ರ್ಯ ಅಥವಾ ಆತ್ಮಸಂತೋಷ. ಸಿ.ಎಫ್.ಆಂಡ್ರ್ಯೂಸ್ ತಾವು ಸಾಯುವ ಸ್ವಲ್ಪ ಮೊದಲು ತಮ್ಮ ಸ್ನೇಹಿತನ ಬಳಿ ಹೀಗೆ ಹೇಳಿದ್ದರು, "ಗೃಹಸ್ಥ ಜೀವನದ ಶಿಸ್ತನ್ನು ನನಗೆ ನಾನೇ ನಿರಾಕರಿಸಿಕೊಂಡಿದ್ದರಿಂದ ನನ್ನ ಜೀವನ ಪರಿಪೂರ್ಣವಾಗಲಿಲ್ಲ. ಜೀವನದಲ್ಲಿ ಯಾವುದೋ ಒಂದು ಅಗತ್ಯದ ಮತ್ತು ಮೌಲ್ಯದ ವಸ್ತುವನ್ನು ತನ್ನ ಜೀವನದಲ್ಲಿ ಕಳೆದುಕೊಂಡಿದ್ದೇನೆಂದು ಪ್ರಾಮಾಣಿಕವಾಗಿ ನನಗೆ ಅನಿಸುತ್ತದೆ."

ಜಾಣ್ಮೆಯಿಂದ ಗೃಹಸ್ಥಾಶ್ರಮ ನಡೆಸಿದ ಗೃಹಸ್ಥ ಮಾನವಕುಲದ ಸೇವಕನಾಗಲು ಮತ್ತು ಭಗವಂತನ ಶೋಧಕನಾಗಲು ಸಿದ್ಧನಾದಂತೆ.

– *ಅನು: ಸು.ಶೌ*

ಜನಪದ ವ್ಯಕ್ತಿ

ಮಾನವ ಹಕ್ಕುಗಳ ವೈದ್ಯ ಡಾ॥ ವಿನಾಯಕ್ ಸೇನ್

- ಡಾ. ಗೋಪಾಲ ದಾಬಡೆ

ನಮ್ಮಲ್ಲಿಯ ಅನೇಕರಿಗೆ ನಮ್ಮ ಕಾಯಿಲೆಗೆ ಕಾರಣ ಆಸ್ಪತ್ರೆಗಳ ನಾಲ್ಕು ಗೋಡೆಯ ಹೊರಗೇ ಇದೆ ಎಂಬುದು ಗೊತ್ತಿಲ್ಲ. ಮತ್ತು ಆ ಕಾಯಿಲೆಗಳು ಬಹಳಷ್ಟು ವೈದ್ಯರ ಹಿಡಿತಕ್ಕೆ ಸಿಕ್ಕುವುದಿಲ್ಲ. ಆಹಾರದ ಕೊರತೆ, ಸುರಕ್ಷಿತ ನೀರಿನ ಅಭಾವ ಮತ್ತು ಸ್ವಚ್ಛತೆ ಇಲ್ಲದ ವಾಸಸ್ಥಾನ ಇತ್ಯಾದಿಗಳು ಅನಾರೋಗ್ಯಕ್ಕೆ ಕಾರಣವಾಗಿವೆ. ಅಂತೆಯೇ ಸಾಮಾಜಿಕ ಅಸಮಾನತೆಗಳು, ಅನ್ಯಾಯಗಳಿಂದ ಕೂಡಿದ ಸಮಾಜ, ಮಾನವ ಹಕ್ಕುಗಳ ಉಲ್ಲಂಘನೆ ಇತ್ಯಾದಿಗಳು. ಸಮಾಜದಲ್ಲಿ ತುಳಿಯಲ್ಪಟ್ಟಂಥವರಲ್ಲಿ ಆದಿವಾಸಿಗಳು, ಸ್ತ್ರೀಯರು ಮತ್ತು ಮಕ್ಕಳಲ್ಲಿ ಈ ಸಾಮಾಜಿಕ ಅನಾರೋಗ್ಯದ ಪರಿಸ್ಥಿತಿ ಸ್ಪಷ್ಟವಾಗಿ ಕಾಣುತ್ತದೆ. ಬಹಳಷ್ಟು ವೈದ್ಯರು ರೋಗಿಗಳನ್ನು ಆಸ್ಪತ್ರೆಯ ನಾಲ್ಕು ಗೋಡೆಗಳ ಮಧ್ಯೆ ಉಪಚರಿಸಲು ಬಯಸುತ್ತಾರೆ ಆದರೆ ಹೊರಗಿನ ಸಮಾಜದಲ್ಲಿ ವ್ಯಾಪಿಸಿರುವ ಅನಾರೋಗ್ಯಕರ ಸಾಮಾಜಿಕ ಪರಿಸ್ಥಿತಿಯ ಬಗ್ಗೆ ಗಮನವನ್ನೆ ಕೊಡುವುದಿಲ್ಲ. ಆದರೆ ಆಸ್ಪತ್ರೆಯ ಹೊರಗಿರುವಂಥ ಸಮಸ್ಯೆಗಳ ಬಗ್ಗೆ ವಿಶೇಷ ಗಮನ ಕೊಟ್ಟಂಥ ವೈದ್ಯನೊಬ್ಬನಿಲ್ಲಿದ್ದಾನೆ. ಛತ್ತಿಸ್‌ಘಡದ ಹಿಂದುಳಿದ ಪ್ರದೇಶಗಳಲ್ಲಿರುವ ಶೋಷಣೆಗೊಳಗಾದ ಜನರ ಸಮಸ್ಯೆಗಳಿಗಾಗಿ ಪರಿಹಾರವನ್ನು ಹುಡುಕುವುದರಲ್ಲಿ ನಿರತನಾಗಿದ್ದಾನೆ ಈ ವೈದ್ಯ. ಛತ್ತಿಸ್‌ಘಡದ ಆದಿವಾಸಿಗಳಿಗೆ 'ಪಾಲ್ ಹ್ಯಾರಿಸನ್' ಪ್ರಶಸ್ತಿಯುನ್ನು ಪಡೆದಿರುವ ಡಾ॥ ವಿನಾಯಕ್ ಸೇನರ ಪರಿಚಯ ಮಾಡಿಕೊಡುವುದರ ಅಗತ್ಯವೇನಿಲ್ಲ. ಆದರೆ ಹೊರಗಿನ ಪ್ರಪಂಚಕ್ಕೆ ಅವರ ವೆಲ್ಲೂರಿನಲ್ಲಿರುವ ಕ್ರಿಶ್ಚಿಯನ್ ಮೆಡಿಕಲ್ ಕಾಲೇಜಿನಲ್ಲಿ ಮಕ್ಕಳ ಆರೋಗ್ಯದ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದವರೆಂದು ಪರಿಚಿತರಾಗಿದ್ದಾರೆ.

ವಿಪರ್ಯಾಸವೇನೆಂದರೆ ಕೇಂದ್ರ ಆರೋಗ್ಯ ಮಂತ್ರಿಯುವರು ವಿಶ್ವ ವಿದ್ಯಾನಿಲಯಗಳಿಂದ ಹೊರಬರುತ್ತಿರುವ ವೈದ್ಯರು ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸ ಮಾಡಲು ನಿರಾಕರಿಸುವುದರ ಬಗ್ಗೆ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸುತ್ತಿರುವಾಗ ಡಾ॥ ಸೇನ್ ಗ್ರಾಮಾಂತರ ಪ್ರದೇಶದಲ್ಲಿ ವಿಶೇಷ ಸಾಹಸ ಮಾಡಲು ಹೋಗಿದ್ದರಿಂದ ಕಾರಾಗೃಹಕ್ಕೆ ತಳ್ಳಲ್ಪಟ್ಟಿದ್ದಾರೆ. ಕಳೆದ ಒಂಬತ್ತು ತಿಂಗಳುಗಳಿಂದ ಡಾ॥ ಸೇನ್ ಛತ್ತಿಸ್‌ಘಡದ ಜೈಲಿನಲ್ಲಿ ಕೊಳೆಯುತ್ತಿದ್ದಾರೆ. ಅವರ ಈ ಬಂಧನದ ವಿರುದ್ಧ ರಾಷ್ಟ್ರಮಟ್ಟದಲ್ಲಿ ಮತ್ತು ಜಾಗತಿಕ ಮಟ್ಟದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆಯೆಂದು ಖಂಡನೆಯಾಗುತ್ತಿದ್ದರೂ ಅಲ್ಲಿಯ ಸರ್ಕಾರ ಅದನ್ನು ಲೆಕ್ಕಿಸುತ್ತಿಲ್ಲ. ಕಾರಾಗೃಹದ ಅವಧಿಯಲ್ಲಿ ಡಾ॥ ಸೇನ್ ತಮ್ಮ ದೇಹದ ಇಪ್ಪತ್ತು ಕೆ.ಜಿ. ತೂಕವನ್ನು ಕಳೆದುಕೊಂಡಿದ್ದಾರೆ. ಅಲ್ಲದೆ ಹೃದಯಕ್ಕೆ ಸಂಬಂಧಿಸಿದ ನೋವುಗಳಿಂದ ನರಳುತ್ತಿದ್ದಾರೆ. ಅವರು ಮಾಡಿದ ಒಂದೇ ಒಂದು ತಪ್ಪೇನೆಂದರೆ ಛತ್ತಿಸ್‌ಘಡ್ ಸರ್ಕಾರವು ಜಾರಿಗೆ ತಂದಿರುವ ಸಲ್ವಾ ಜುಡುಮ್ ಎಂಬ ಕಾನೂನಿನಿಂದ ಆದಿವಾಸಿಗಳ ಹಕ್ಕುಗಳನ್ನು ರಕ್ಷಿಸುವುದಕ್ಕಾಗಿ ಕೆಲಸ ಮಾಡಿದುದೇ ಆಗಿದೆ.

ಡಾ॥ ಸೇನ್‌ರವರನ್ನು ೨೦೦೭ ಮೇ ೧೪ ರಂದು ಛತ್ತಿಸ್‌ಘಡದ ಪೋಲಿಸರು ಬಂಧಿಸಿದರು. ನಂತರ ಅವರನ್ನು ರಾಜ್ಯ ಮತ್ತು ರಾಷ್ಟ್ರೀಯ ಕಾನೂನುಗಳನ್ವಯ ರಾಯಪುರ್ ಕೇಂದ್ರ ಕಾರಾಗೃಹಕ್ಕೆ ವರ್ಗಾಯಿಸಲಾಯಿತು. ಈ ಕಾನೂನುಗಳು ಯಾವುವೆಂದರೆ ಛತ್ತಿಸ್‌ಘಡ್ ವಿಶೇಷ ಸಾರ್ವಜನಿಕ ಭಧ್ರತಾ ಕಾನೂನು; (ಜಿಎಸ್ ಪಿ ಎಸ್ ಎ ೨೦೦೫ ಮತ್ತು) ಶಾಸನ ವಿರೋಧಿ ಚಟುವಟಿಕೆಗಳ ಕಾನೂನು (ಯು ಎ ಪಿ ಎ) ೨೦೦೪. ನ್ಯಾಯಾಂಗೀಯ

ವ್ಯವಸ್ಥೆಯಲ್ಲಿಯ ಯಾತನಾಮಯ ನಿಧಾನದಿಂದಾಗಿ ಡಾ॥ ಸೇನ್‌ರವರ ಜಾಮೀನು ಅರ್ಜಿಯು ಉಚ್ಚ ನ್ಯಾಯಾಲಯದಿಂದ ೨೦೦೭ ಜುಲೈ ೨೩ ರಂದು ತಿರಸ್ಕರಿಸಲ್ಪಟ್ಟಿತು. ಸರ್ವೋಚ್ಚ ನ್ಯಾಯಾಲಯವು ಅದನ್ನು ೨೦೦೭ ಡಿಸೆಂಬರ್ ೧೨ ರಂದು ತಿರಸ್ಕರಿಸಿತು. ಡಿಸೆಂಬರ್ ೨೦೦೭ ರಂದು ಭಾರತೀಯ ಸಾಮಾಜಿಕ ವಿಜ್ಞಾನಗಳ ಅಕಾಡೆಮಿಯು ಅವರಿಗೆ ಪ್ರಶಸ್ತಿಯಾಗಿ ಕೊಟ್ಟಿದ್ದ 'ಕೈತಾನ್' ಚಿನ್ನದ ಪದಕವನ್ನು ಪಡೆಯಲು ಜಾಮೀನಿನ ಮೇಲೆ ಹೋಗುವುದನ್ನು ಸಹ ಕೆಲ ತಾಂತ್ರಿಕ ಕಾರಣಗಳಿಂದಾಗಿ ಅವರ ಅರ್ಜಿಯನ್ನು ನಿರಾಕರಿಸಿತು. ಛತ್ತಿಸ್‌ಘಡದೊಂದಿಗೆ ಡಾ॥ ಸೇನ್‌ರವರ ಸಂಬಂಧ ೧೯೮೫ ರಿಂದಲೂ ಇದೆ. ಆ ಕಾಲದಲ್ಲಿ ಅವರು ಅಂದಿನ ಕಾರ್ಮಿಕ ಸಂಘದ ನಾಯಕರಾಗಿದ್ದ ಶಂಕರ್‌ಗುಹ ನಿಯೋಗಿ ಅವರೊಂದಿಗೆ 'ದಲ್ಲಿ ರಜರ' ಎಂಬಲ್ಲಿ ಕೆಲಸ ಮಾಡುವುದರೊಂದಿಗೆ ಪ್ರಾರಂಭವಾಯಿತು. ೧೯೮೨ ರಲ್ಲಿ ಒಂದು ಆಸ್ಪತ್ರೆಯನ್ನು ನಿರ್ಮಿಸಲಾಯಿತು. ಆ ಆಸ್ಪತ್ರೆಯನ್ನು ನಿರ್ಮಿಸಲು ಕಾರಣಕರ್ತರಾದ ಆದಿವಾಸಿಗಳು ಅದರ ಪ್ರಯೋಜನ ಪಡೆಯುವಂತಾಯಿತು. ಕೆಲಸಗಾರರೇ ಆಸ್ಪತ್ರೆಯನ್ನು ಕಟ್ಟಿ ಅದನ್ನು ನಡೆಸುವುದರ ಮೂಲಕ ಕಾರ್ಮಿಕ ಸಂಘದ ಕೆಲಸಗಾರರಿಗೂ ಮತ್ತು ಆದಿವಾಸಿಗಳಿಗೂ ಆರೋಗ್ಯದ ಭದ್ರತೆ ಸಿಗುವಂತಾದುದು ವೈದ್ಯಕೀಯ ಕ್ಷೇತ್ರದಲ್ಲಿ ಒಂದು ಮಾದರಿಯಾಗಿದೆ. ನಂತರ ೧೯೯೦ ರಲ್ಲಿ ಡಾ॥ ಸೇನ್ ಮತ್ತು ಅವರ ಹೆಂಡತಿ ಸೇರಿ 'ರೂಪಾಂತರ' ಎಂಬ ಹೆಸರಿನಲ್ಲಿ ಒಂದು ಸರ್ಕಾರೇತರ ಸಂಸ್ಥೆಯನ್ನು ಸ್ಥಾಪಿಸಿದರು. ಆ ಸಂಸ್ಥೆಯ ಮೂಲಕ ಬಡವರಿಗೆ ಆರೋಗ್ಯದ ಸೌಲಭ್ಯವನ್ನು ಒದಗಿಸಿಕೊಡಲು ನಿರತರಾದರು. ಲೋಕನಾಯಕ ಜಯಪ್ರಕಾಶ ನಾರಾಯಣರಿಂದ ಪ್ರಾರಂಭಿಸಲ್ಪಟ್ಟಿದ್ದ ಪಿ.ಯು.ಸಿ.ಎಲ್ ಜೊತೆ ಸೇರಿ ಸಕ್ರಿಯ ಕಾರ್ಯಕರ್ತರಾದರು. ನಕ್ಸಲೀಯರ ಸಮಸ್ಯೆಯನ್ನು ಪರಿಹರಿಸುವ ನೆಪದಲ್ಲಿ ಪಿ.ಯು.ಸಿ ಎಲ್. ಮೇರೆಗೆ ೨೦೦೫ ನೇ ಇಸವಿಯಿಂದ ಛತ್ತಿಸ್‌ಘಡ್ ಸರ್ಕಾರವು ಅತಿಯಾದ ಮತ್ತು ಅನಗತ್ಯವಾದ ಪೋಲಿಸ್ ಬಲವನ್ನು ಉಪಯೋಗಿಸಿ ಮಾನವೀಯತೆಯ ವಿರುದ್ಧ ಅಪರಾಧಗಳ ದೊಡ್ಡ ದಾಖಲೆಯನ್ನೇ ನಿರ್ಮಿಸಿದೆ. ಅಲ್ಲದೆ ೨೦೦೫-೦೬ ನೇ ಸಾಲಿನಲ್ಲಿ ಸಂಭವಿಸಿದ ೧೫೫ ಸುಳ್ಳು ದಾಳಿಗಳ ಬಗ್ಗೆ ವಿಚಾರಣೆ ನಡೆಯಬೇಕೆಂದು ಅವರು ಒತ್ತಾಯಿಸುತ್ತಿದ್ದಾರೆ. ಇದಲ್ಲದೆ ಕಾನೂನು ಬಾಹಿರ ಹತ್ಯೆಗಳ ಬಗ್ಗೆಯೂ ವಿಚಾರಣೆಯಾಗಬೇಕೆಂದು ಹೋರಾಟ ಮಾಡುತ್ತಿದ್ದಾರೆ. ಪಿ.ಯು.ಸಿ.ಎಲ್. ಸರ್ಕಾರದ ಕಾನೂನು ಬಾಹಿರ ಚಟುವಟಿಕೆಗಳನ್ನು ಬಹಿರಂಗಪಡಿಸದೆ ಇರುವಂತೆ ಮಾಡಲು ಡಾ॥ ಸೇನ್‌ರವರನ್ನು ಕಾರಾಗೃಹಕ್ಕೆ ತಳ್ಳುವುದೇ ಒಂದು ಉಪಾಯವೆಂದು ಚತ್ತಿಸ್‌ಘಡ್ ಸರ್ಕಾರ ಭಾವಿಸಿದೆ.

ನಾವು ಕೆಲವರು ಡಾ॥ ಸೇನ್‌ರವರನ್ನು ಕಾರಾಗೃಹದಲ್ಲಿ ಭೇಟಿ ಮಾಡಿದಾಗ ಡಾ॥ ಸೇನ್ ಹೀಗೆ ಹೇಳಿದರು, "ನನ್ನ ಬಂಧನವನ್ನು ಒಂದು ವ್ಯಕ್ತಿ ವಿಷಯವನ್ನಾಗಿ ಮಾಡದೆ ಅದನ್ನು ಇತರ ಮುಖ್ಯ ಸಮಸ್ಯೆಗಳ ಪರಿಹಾರ ವಿಷಯವನ್ನಾಗಿ ಮಾಡಬೇಕು." ಅಭಿವೃದ್ಧಿಯ ಕೊರತೆ, ಪೌಷ್ಟಿಕ ಆಹಾರದಭದ್ರತೆಯ ಕೊರತೆ ಮತ್ತು ಕಾರ್ಪೊರೇಟ್ ಆಧಾರಿತ ಕೇಗಾರೀಕರಣದಿಂದ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಮೇಲೆ ಉಂಟಾಗಿರುವ ಪರಿಣಾಮ ಇತ್ಯಾದಿ ವಿಷಯಗಳನ್ನು ಕೈಗೆತ್ತಿಕೊಳ್ಳಬೇಕೆಂದು ಡಾ॥ ಸೇನ್ ಬಯಸಿದರು. ಡಾ॥ ಸೇನ್‌ರವರ ಬಂಧನಕ್ಕಾಗಿ ಅಗತ್ಯವಾಗಿರುವ ಸಾಕ್ಷ್ಯಾಧಾರಗಳನ್ನು ಒದಗಿಸಲು ರಾಜ್ಯ ಸರ್ಕಾರ ವಿಫಲವಾಗಿದೆ. ಆದರೆ ಡಾ॥ ಸೇನ್‌ರವರು ಜೈಲಿನಲ್ಲಿ ಕೊಳೆಯುವುದನ್ನು ಮಾತ್ರ ತಪ್ಪಿಸಲು ಸಾಧ್ಯವಾಗಿಲ್ಲ. ಅವರ ಬಂಧನವನ್ನು ವಿರೋಧಿಸಿ ಹೆಚ್ಚು ಹೆಚ್ಚು ಜನರು ತಮ್ಮ ಧ್ವನಿಯನ್ನು ಎತ್ತುವುದೊಂದೇ ಅವರನ್ನು ಉಳಿಸುವ ಮಾರ್ಗವಾಗಿದೆ. ಅಂಥ ಸಾರ್ವಜನಿಕ ಹಿತಾಸಕ್ತಿಯ ಕೂಗಲ್ಲಿ ತಮ್ಮ ಧ್ವನಿಯನ್ನೂ ಸೇರಿಸ ಬಯಸಯವವರು ಈ ಮುಂದಿನ ಇ ಮೇಲ್ www.freebinayaksen.org ಯನ್ನು ಸಂಪರ್ಕಿಸ ಬೇಕು.

* * *

ಪುಣೆ ಒಪ್ಪಂದ : ಎರಡು ದೊಡ್ಡ ಮನಸ್ಸುಗಳ ಬಂಧನ

– ಅನಂತ ಕಲ್ಲೋಳ

[ಏಪ್ರಿಲ್ ೧೪ ಡಾ॥ ಬಿ.ಆರ್.ಅಂಬೇಡ್ಕರರ ಜನ್ಮದಿನ.
ಆ ದಿನದ ಮಧುರ ಸ್ಮರಣೆಯ ನಿಮಿತ್ತ ಈ ಲೇಖನ]

ಭಾರತದ ರಾಷ್ಟ್ರೀಯ ಸಂಗ್ರಾಮದ ರೋಮಾಂಚನಕಾರಿ ಚರಿತ್ರೆಯಲ್ಲಿ ೧೯೩೨ರ 'ಯರವಾಡಾ ಒಪ್ಪಂದ'ವು ಕೂಡಲಸಂಗಮದಂತೆ, ಪ್ರಯಾಗದಂತೆ ಪಾವನಬಿಂದುವಾಗಿ ಕಂಗೊಳಿಸಲು ಪಾತ್ರವಾಗಿದೆ. ವಿಭಿನ್ನ ಪ್ರವಾಹಗಳೆರಡು ಎದಿರುಬದಿರಾಗಿ ರಭಸದಿಂದ ಹರಿದು ಬರುವಾಗ, ಎದುರಾಳಿಯನ್ನು ನುಂಗಿ ನೊಣೆಯುವ ತವಕದಲ್ಲಿರುವ ಪ್ರತಿಸ್ಪರ್ಧಿಗಳೇನೋ ಎಂಬಂತೆ ಅನಿಸುತ್ತದೆ. ಆ ಸ್ರೋತಗಳು ಸಂಗಮಿಸಿ ಒಂದೇ ದಿಕ್ಕಿನಲ್ಲಿ ಮುಂದೆ ಸಾಗುವಂತಾದುದನ್ನು ಕಂಡಾಗ ಕೂಡಲಸಂಗಮವನ್ನೋ, ಪ್ರಯಾಗವನ್ನೋ ಕಂಡಂಥ ದಿವ್ಯ ಅನುಭವವಾಗುತ್ತದೆ, ದೈವಿಕತೆಯ ದೀಪ್ತಿಯ ದರ್ಶನವಾದಂತಾಗುತ್ತದೆ.

ದುಂಡುಮೇಜಿನ ಪರಿಷತ್ತಿನಲ್ಲಿ ಮಹಾತ್ಮಾ ಗಾಂಧಿಯುವರು ಪಟ್ಟುಹಿಡಿದಿದ್ದ ಸಾಮಾನ್ಯ ಮತದಾರ ಕ್ಷೇತ್ರಕ್ಕೆ ವಿರೋಧವಾಗಿ ಬಾಬಾ ಸಾಹೇಬ್ ಅಂಬೇಡ್ಕರರು ದಲಿತರಿಗಾಗಿ ಪ್ರತ್ಯೇಕವಾದ ಮತದಾರ ಕ್ಷೇತ್ರಗಳು ಬೇಕೆಂದು ಪ್ರತಿಪಾದಿಸಿ ಬ್ರಿಟಿಷ್ ಆಳರಸರನ್ನು ಹೆಚ್ಚೂ ಕಡಿಮೆ ಒಪ್ಪಿಸಿಯೂಬಿಟ್ಟರು. ಗಾಂಧೀಜಿಯವರಿಗೆ ಈ ಬೆಳವಣಿಗೆಯಿಂದ ಆಘಾತವಾದುದರಲ್ಲಿ ಅಚ್ಚರಿಯಿಲ್ಲ. ಆ ವೇಳೆಗಾಗಲೆ ಭಾರತೀಯರಲ್ಲಿ ಮುಸಲ್ಮಾನರಿಗಾಗಿ ಪ್ರತ್ಯೇಕ ಮತದಾರಕ್ಷೇತ್ರ ನೀಡಲ್ಪಟ್ಟಿತ್ತು. ಅಂತೆಯೇ ಸಿಖ್ಖರಿಗೂ ಕೂಡ ಸ್ವತಂತ್ರವಾದ ಮತದಾರ ಸಂಘ ಪ್ರದತ್ತವಾಗಿತ್ತು. ಉಳಿದಂತೆ ಸಮಸ್ತ ಹಿಂದೂಧರ್ಮೀಯರಿಗೆ ಸಾಮಾನ್ಯ ಮತದಾರಕ್ಷೇತ್ರ ಇರಬೇಕೆಂದು ಗಾಂಧೀಜಿಯವರು ಪಟ್ಟುಹಿಡಿಯಲು ಕಾರಣವೇನೆಂದರೆ – ಈಗಾಗಲೇ 'ಸ್ಪೃಶ್ಯ'ರಲ್ಲಿ ಮತ್ತು 'ಅಸ್ಪೃಶ್ಯ' ಸಮಾಜದಲ್ಲಿ ಅಸಂತೋಷವಿರುವಾಗ, ಹಿಂದೂ ಸಮಾಜದಿಂದ 'ಅಸ್ಪೃಶ್ಯ'ರನ್ನು ಬೇರ್ಪಡಿಸಿ ಅವರಿಗಾಗಿ ಪ್ರತ್ಯೇಕ ಮತಕ್ಷೇತ್ರಗಳನ್ನು ನೀಡುವಂತಾದಲ್ಲಿ ಹಿಂದೂ ಸಮಾಜದ ಬಾಂಧವರಲ್ಲಿ ಮತ್ತಷ್ಟು ವಿಭಕ್ತತೆಗೆ ದಾರಿ ಮಾಡಿದಂತಾಗುವುದು ಎಂಬ ಸೂಜ್ಞ ವಿಚಾರವಾಗಿತ್ತು. ವಿಭಕ್ತ ಮತದಾರಕ್ಷೇತ್ರ ಎಂಬ ಕಲ್ಪನೆಯು ಸಾಮಾಜಿಕ ಏಕಾತ್ಮತೆಯ ದಾರಿಯಲ್ಲಿ ಒಂದು ದೊಡ್ಡ ಅಡೆತಡೆಯಾಗಿದೆ ಎಂಬುದು ಅವರ ನಿಶಾಂತ ನಂಬುಗೆಯಾಗಿತ್ತು. ಆದ್ದರಿಂದಲೇ ಅವರು ಅಷ್ಟೊಂದು ಪಟ್ಟುಹಿಡಿದು, 'ವಿಭಕ್ತ ಮತಕ್ಷೇತ್ರದ ಯೋಜನೆಯು ಉಳಿದ ಹಿಂದೂ ಸಮಾಜಕ್ಕಷ್ಟೆ ಅಲ್ಲ, ಅಸ್ಪೃಶ್ಯ ವರ್ಗಕ್ಕೂ ಹಾನಿಕಾರಕವಾಗಿದೆ ಎಂದು ನನ್ನ ಖಚಿತ ನಿಲುವಾಗಿದೆ. ಆದ್ದರಿಂದ ನಾನು ಈ ವಿಷಯ ಕುರಿತು ಏಕಾಂಗಿಯಾದರೂ ಸೈ, ಅದರ ವಿರುದ್ಧ ಪ್ರಾಣಾಂತಿಕವಾಗಿ ಹೋರಾಡುವೆ, ಎಂದು ದುಂಡುಮೇಜಿನ ಪಡಿಷತ್ತಿನಲ್ಲ ದೃಢವಾಗಿ ಸಾರಿ ಭಾರತಕ್ಕೆ ಮರಳಿದ್ದರು.

ಆಗ ಮತಾಧಿಕಾರವು ಈಗಿನಂತೆ ಕೇವಲ ವಯಸ್ಸಿನ ಆಧಾರದ ಮೇಲೆ ಅಂದರೆ ವಯಸ್ಕ ಮತಾಧಿಕಾರವಾಗಿ ಇರಲಿಲ್ಲ. ಮತಾಧಿಕಾರ ಹೊಂದಲು ಸಾಂಪತ್ತಿಕ ಪತ್ತು, ಕನಿಷ್ಠ ಶಿಕ್ಷಣದ ಅರ್ಹತೆ – ಹೀಗೆ ನಿಬಂಧನೆಗಳಿದ್ದವು. ದಲಿತ ಸಮಾಜದಲ್ಲಿಯ

ಸ್ಥಿತಿಗತಿಗಳಿಂದಾಗಿ ಈ ಬಗೆಯ ನಿಬಂಧನೆಗಳಿಂದ ಅವರಿಗೆ ದಕ್ಕಬೇಕಾದ ಪ್ರಾತಿನಿಧ್ಯ ದೊರಕುವುದಿಲ್ಲ ಎಂಬುದನ್ನು ಮನಗಂಡ ಬಾಬಾ ಸಹೇಬರು, ಅಸ್ಪೃಶ್ಯರಿಗಾಗಿ ಪ್ರತ್ಯೇಕವಾದ ಮರುಕ್ಷೇತ್ರಗಳಿಗಾಗಿ ಬಲವಾಗಿ ಪ್ರತಿಪಾದನೆ ಮಾಡಿದ್ದರು. ಮುಸಲ್ಮಾನರಿಗೆ, ಸಿಖ್ಖರಿಗೆ ದಯಪಾಲಿಸಲಾಗಿದ್ದ ವಿಭಕ್ತ ಮತದಾರ ಕ್ಷೇತ್ರಗಳಂತೆಯೇ ಅಸ್ಪೃಶ್ಯರಿಗೂ ಸ್ವತಂತ್ರವಾದ, ಪ್ರತ್ಯೇಕವಾದ ಮತದಾರ ಸಂಘ (ಕ್ಷೇತ್ರ) ಬೇಕೇಬೇಕು ಎಂದು ಅವರು ಸಯುಕ್ತಿಕವಾಗಿ ವಾದಿಸಿದ್ದರು. ಆದರೆ ಗಾಂಧೀಜಿಯವರಿಗೆ ಹಿಂದೂ ಸಮಾಜದಿಂದ ದಲಿತವರ್ಗವನ್ನು ಬೇರ್ಪಡಿಸುವುದೆಂದರೆ ರಾಷ್ಟ್ರೀಯತ್ವವನ್ನು ಇಬ್ಭಾಗಗೊಳಿಸಿದಂತೆ ಎಂಬಷ್ಟರ ಮಟ್ಟಿಗೆ ಅವರು ಆತಂಕಗೊಂಡಿದ್ದರು. ಅದಕ್ಕಾಗಿ ಅವರು ಪ್ರತ್ಯೇಕ ಮತದಾರ ಸಂಘದ ಪ್ರತಿಭಟನಾರ್ಥವಾಗಿ ಆಮರಣ ಉಪವಾಸ ಕೈಗೊಂಡರು.

ಗಾಂಧೀಜಿಯವರಿಗೆ ದಲಿತ ನಾಯಕ ಅಂಬೇಡ್ಕರರ ಬಗ್ಗೆಯಾಗಲಿ, ದಲಿತರಿಗೆ ತಮ್ಮ ಹೀನ ಬಾಳ್ವೆಯಿಂದ ಬಿಡುಗಡೆಗೊಂಡು ಉತ್ಕರ್ಷದೆಡೆಗೆ ಸಾಗುವುದರ ಬಗ್ಗೆಯಾಗಲಿ ವಿರೋಧವಿರಲಿಲ್ಲ. ಗಾಂಧೀಜಿಯವರು ದಲಿತರ ಬಗ್ಗೆ ಮೊದಲಿನಿಂದಲೂ ಅತ್ಯಂತ ಕಳಕಳಿ, ಸಹಾನುಭೂತಿ ಹೊಂದಿದವರಾಗಿದ್ದರು ಎಂಬುದು ಆ ವೇಳೆಗಾಗಲೇ ಸುಪರಿಚಿತವಾಗಿತ್ತು.ಮೊದಮೊದಲು ಅವರು ಜಾತಿ ವ್ಯವಸ್ಥೆಯನ್ನು ಪುರಸ್ಕರಿಸಿದ್ದರೂ ಆನಂತರದ ದಿನಗಳಲ್ಲಿ ಅವರ ಅಭಿಪ್ರಾಯಗಳು ಎಷ್ಟೊಂದು ಮಟ್ಟಿಗೆ ಪರಿಷ್ಕೃತವಾದವು ಎಂದರೆ ಭಾರತಕ್ಕೆ ಸ್ವರಾಜ್ಯ ದಕ್ಕುವುದು ತಡವಾದರೂ ನಡೆದೀತು, ಆದರೆ ಅದಕ್ಕಿಂತ ಮೊದಲು ಅಸ್ಪೃಶ್ಯತಾ ನಿವಾರಣೆಯಾಗುವುದು ಅತ್ಯಗತ್ಯ ಎಂದು ಮನಗಂಡು ಆ ದಿಸೆಯಲ್ಲಿ ಕಾರ್ಯತತ್ಪರರಾದರು. ಅಂದ ಹಾಗೆ ಕರ್ನಾಟಕದ ಕುದ್ಮಲ್ ರಂಗರಾಯರನ್ನು ತಮ್ಮ ಅಸ್ಪೃಶ್ಯತೋದ್ಧಾರ ಚಳವಳಿಯ ಗುರುಗಳೆಂದು ಮನ್ನಿಸಿದ್ದವರು ಗಾಂಧೀಜಿ. ಹೀಗಿದ್ದೂ ಗಾಂಧೀಜಿಯವರು ದಲಿತನಾಯಕ ಬಾಬಾಸಾಹೇಬ ಅಂಬೇಡ್ಕರರ ಪ್ರತ್ಯೇಕ ಮತದಾರ ಸಂಘ ವಿಚಾರಕ್ಕೆ ಪ್ರಬಲವಾಗಿ ಪ್ರತಿರೋಧ ಒಡ್ಡಿದರು.

ಪ್ರತ್ಯೇಕ ಮತದಾರಸಂಘದ ಅನುಷ್ಠಾನದಿಂದ ಭವಿಷ್ಯದಲ್ಲಿ ಅನಾಹುತಗಳು ಆಗುವುದು ಖಚಿತ ಎಂಬುದೇ ಈಗ ನಮ್ಮ ಇತಿಹಾಸವಾಗಿದೆ. ಭಾರತದ ರಾಷ್ಟ್ರೀಯರಲ್ಲಿ ಮುಸ್ಲಿಮರಿಗಾಗಿ ಬ್ರಿಟಿಷ್ ಆಳರಸರು ಪ್ರತ್ಯೇಕ ಮತದಾರಸಂಘ ನೀಡಿದ್ದರು. ಅದು ಭಾರತದ ವಿಭಜನೆಗೂ ಬೀಜರೋಪ ಮಾಡಿತೆನ್ನಬಹುದು. ಬ್ರಿಟಿಷ್ ಆಡಳಿತಗಾರರು ಸಿಖ್ಖರಿಗೆ ಸ್ವತಂತ್ರ ಮತದಾರಸಂಘ ದಯಪಾಲಿಸಿದ್ದರು. ಅದರ ಸಲುವಾಗಿಯೇ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಖಲಿಸ್ತಾನಕ್ಕಾಗಿ ಉಗ್ರವಾದಿ ಸಿಖ್ಖರು ನಡೆಸಿದ ತೀವ್ರ ಹೋರಾಟ, ಪ್ರಧಾನಿಮಂತ್ರಿಯೊಬ್ಬರ ಹತ್ಯೆ ಮೊದಲಾದ ಬೆಳವಣಿಗೆಗಳಿಗೆ ದಾರಿಯಾದಂತಾಗಿತ್ತು, ಅಲ್ಲವೆ! ಒಂದು ವೇಳೆ ದಲಿತರಿಗೂ ಪ್ರತ್ಯೇಕ ಮತದಾರಕ್ಷೇತ್ರಗಳು ದತ್ತವಾಗಿದ್ದಲ್ಲಿ ಹಿಂದೂ ಸಮಾಜದ, ಭಾರತದ ಸ್ಥಿತಿಗತಿ ಏನಾಗಬಹುದಿತ್ತೆಂಬುದನ್ನು ಊಹಿಸುವುದು ಸಾಧ್ಯವಿಲ್ಲ. ಗಾಂಧೀಜಿಯವರು ಅಂಬೇಡ್ಕರ್‌ರ, 'ದಲಿತರಿಗೆ ಪ್ರತ್ಯೇಕವಾದ ಮತದಾರಕ್ಷೇತ್ರ'ದ ಆಗ್ರಹವನ್ನು ತಮ್ಮ ಪ್ರಾಣವನ್ನು ಪಣಕ್ಕಿಟ್ಟು ವಿರೋಧಿಸಿದರು, ಆಮರಣ ಉಪವಾಸಕ್ಕೆ ಕುಳಿತರು.

ಗಾಂಧೀಜಿಯವರ ಈ ಪ್ರತಿರೋಧವು ಅಂಬೇಡ್ಕರರ ಹೋರಾಟದ ವಿರುದ್ಧ ಪ್ರತಿವಾದದ ರಾಜಕೀಯ ಹೋರಾಟವಾಗಿರಲಿಲ್ಲ. ಹಿಂದೂ ಸಮಾಜದಲ್ಲಿ ಹಿಂದಿನಿಂದ ಉಳಿದು ಬೆಳೆದುಕೊಂಡು ಬಂದಿದ್ದ ಆತ್ಮನಾಶಕ ಶಾಪವಾಗಿ ಹೊಮ್ಮಿದ್ದ ಅಸ್ಪೃಶ್ಯತೆ, ಜಾತೀಯತೆಗಳನ್ನು ತೊಡೆದುಹಾಕುವುದಕ್ಕಾಗಿ ತ್ರಿಕರಣಪೂರ್ವಕ ಅವರು ತಮ್ಮನ್ನು

ಮುಡಿಪಾಗಿಟ್ಟರು. ಅಂಬೇಡ್ಕರ್‌ರವರು ಒಂದೊಮ್ಮೆ ಲೋಕಮಾನ್ಯ ತಿಲಕರ ಆ ಪ್ರಬುದ್ಧ ಉಕ್ತಿ, 'ಸ್ವರಾಜ್ಯವು ನನ್ನ ಜನ್ಮಸಿದ್ಧ ಹಕ್ಕು ಆಗಿದೆ, ಅದನ್ನು ನಾನು ಪಡದೇ ತೀರುವೆನು' ಎಂಬುದನ್ನು ಉಲ್ಲೇಖಿಸುತ್ತಾ, "ತಿಲಕರು ಒಂದು ವೇಳೆ ಬ್ರಾಹ್ಮಣರಾಗಿ ಹುಟ್ಟದೆ ದಲಿತರಾಗಿ ಹುಟ್ಟಿದ್ದಿದಲ್ಲಿ 'ಸರ್ವಸಮಾನತೆಯು ನನ್ನ ಜನ್ಮ ಸಿದ್ಧಹಕ್ಕು ಆಗಿದೆ, ಹಾಗೂ ನಾನು ಅದನ್ನು ಪಡದೇ ತೀರುವೆನು' ಎಂದೇ ಘೋಷಿಸುತ್ತಿದ್ದರು" ಎಂದು ಟಿಪ್ಪಣಿಸಿದ್ದರು. ಲೋಕಮಾನ್ಯ ತಿಲಕರ ರಾಜಕೀಯ ವಾರಸುದಾರರಾಗಿ, ಭಾರತದ ನೇತಾರರಾಗಿ ಬೆಳೆದ ಗಾಂಧೀಜಿಯವರು ಭಾರತದಲ್ಲಿಯ ದಲಿತರ ದಾರುಣ ಸ್ಥಿತಿಗತಿಗಳನ್ನು ಮನಗಂಡು, ದಲಿತರ ಕೈವಾರಿ ಬಾಬಾ ಸಾಹೇಬ ಅಂಬೇಡ್ಕರ್‌ರ ಪ್ರಖರ ಕಳಕಳಿಯ ವಿಚಾರಗಳನ್ನು ಅರ್ಥೈಸಿಕೊಂಡು, 'ನನಗೆ ಮತ್ತೊಂದು ಜನ್ಮವೇನಾದರೂ ಇದ್ದಲ್ಲಿ, ನಾನು ದಲಿತನಾಗಿ ಹುಟ್ಟಬಯಸುವೆ' ಎಂದು ಸಾರಿದ್ದು ಹಾಗೂ 'ಭಾರತಕ್ಕೆ ಸ್ವಾತಂತ್ರ್ಯ ದಕ್ಕುವುದು ತಡವಾದರೂ ಸೈ, ಮೊದಲು ದಲಿತೋದ್ಧಾರವಾಗಬೇಕು, ಅಸ್ಪೃಶ್ಯತಾ ನಿವಾರಣೆ ಆಗಬೇಕು' ಎಂದು ಸಂಕಲ್ಪಿಸುವ ಮಟ್ಟಕ್ಕೆ ಮುಟ್ಟಿದ್ದು ಹೃದಯಸ್ಪರ್ಶಿಯಾಗಿದೆ. ಅಂಬೇಡ್ಕರ್‌ರಿಗೆ, ಗಾಂಧೀಜಿಯವರ ಪ್ರಾಮಾಣಿಕತೆಯ ಬಗ್ಗೆ ಯಾವುದೇ ಸಂದೇಹ ಉಳಿಯಲಿಲ್ಲ. ಪ್ರತ್ಯೇಕ ಮತದಾರ ಸಂಘದ ವಿರುದ್ಧ ಮಹಾತ್ಮಾಜಿಯವರು ಯರವಾಡ ಕಾರಾಗೃಹದಲ್ಲಿಯೇ ಆಮರಣ ಉಪವಾಸಕ್ಕೆ ಕುಳಿತಾಗ ಭಾರತದಾದ್ಯಂತ ಆತಂಕ, ಕಳವಳದ ಅಲೆ ಆವರಿಸಿದ್ದು ಅಸಹಜವೇನಲ್ಲ.

ಗಾಂಧೀಜಿಯವರು ತಮ್ಮ ಈ ಉಪವಾಸ ಕುರಿತು ಹೇಳಿದ್ದು ಕೂಡ ಮನನೀಯವಾಗಿದೆ.

"ಈ ಉಪವಾಸಕ್ಕೆ ಎರಡು ಆಯಾಮಗಳಿವೆ. ಸಾಮಾಜಿಕ ಏಕಾತ್ಮತೆಗೆ ಅಡ್ಡಬರುವ ವಿಭಕ್ತ ಮತಕ್ಷೇತ್ರದ ಯೋಜನೆಯನ್ನು ರದ್ದುಗೊಳಿಸುವುದು ಒಂದು ಕಾರಣವಾಗಿದ್ದರೆ, ಎರಡನೆಯದು ಹೆಚ್ಚಿನ ಮಹತ್ವದ ಕಾರಣವಾಗಿದೆ. ಅದೇನೆಂದರೆ ಅಸ್ಪೃಶ್ಯತಾ ನಿವಾರಣೆಯ ನ್ಯಾಯಯುತತೆ ಮತ್ತು ಅಗತ್ಯತೆಗಳು ಒಪ್ಪಿತವಾಗಿದ್ದವರ ಸದಸದ್ವಿವೇಕ ಬುದ್ಧಿಯನ್ನು ಚುಚ್ಚಿ ಅವರ ಕರ್ತವ್ಯಪ್ರಜ್ಞೆಯನ್ನು ಎಚ್ಚರಿಸಿ, ಅವರನ್ನು ಕಾರ್ಯತತ್ಪರಗೊಳಿಸುವುದು. Above all it is intended to sting Hindu conscience into right religious action.

"........ಅಸ್ಪೃಶ್ಯತೆಯ ಆಚರಣೆಯು ಪವಿತ್ರ ಧರ್ಮಭಾವನೆಯನ್ನು ಮೆಟ್ಟಿಹಾಕುವಂಥದ್ದಾಗಿದೆ. ಆದ್ದರಿಂದ ಅದನ್ನು ಉಚ್ಚಾಟನೆಗೊಳಿಸಿ ಧರ್ಮಾಚರಣೆಗೆ ಯುಕ್ತವಾದ ತಿರುವ ನೀಡಲೆಂದು ಈ ಉಪವಾಸವಿದೆ."

ತಾವು ಸನಾತನೀ ಹಿಂದೂ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದ ಗಾಂಧೀಜಿಯವರಿಗೆ ಪವಿತ್ರ ಧರ್ಮದ ನಿಜ ಸಾಕ್ಷಾತ್ಕಾರವಾಗಿ ಈ ವಿಚಾರಗಳು ಆ ಉಪವಾಸ ಸಂದರ್ಭದಲ್ಲಿ ಹೊಮ್ಮಿದವು.

ಗಾಂಧೀಜಿಯವರ ಈ ಆಮರಣ ಉಪವಾಸ ಸತ್ಯಾಗ್ರಹದ ಫಲವಾಗಿ ೨೪-೯-೧೯೩೨ರಂದು ಸವರ್ಣೀಯ ಹಿಂದೂಗಳು ಮತ್ತು ದಲಿತ ಹಿಂದೂಗಳು ಇವರ ನಡುವೆ ಒಡಂಬಡಿಕೆಯಾಗಿ ದಲಿತರಿಗಾಗಿ ಪ್ರತ್ಯೇಕ ಮತದಾರಸಂಘದ ಬೇಡಿಕೆಯನ್ನು ಕೈಬಿಡಲಾಯಿತು. ಉಭಯಪಕ್ಷದ ನೇತಾರರು ಈ ಒಪ್ಪಂದಕ್ಕೆ ರುಜು ಹಾಕಿದರು. ಇದು 'ಯರವಾಡ ಒಪ್ಪಂದ' ಎಂದು ಪ್ರಸಿದ್ಧವಾಗಿ ಉಳಿದುಕೊಳ್ಳುವಂತಾಯಿತು. "ಭಿನ್ನಾಭಿಪ್ರಾಯವು ವಿಕೋಪಕ್ಕೆ ಹೋಗದಂತೆ, ಸೂಕ್ತ ಕಾಲದಲ್ಲಿ ಒಮ್ಮತ ಸಮ್ಮತವಾದುದರ

ಬಹುತಾಂಶ ಶ್ರೇಯಸ್ಸು ಗಾಂಧೀಜಿಯವರಿಗೆ ಸಲ್ಲತಕ್ಕದ್ದು" ಎಂದು ಅಂಬೇಡ್ಕರ್‌ರು ಹೇಳಿದ್ದಾರೆ. ಮರುದಿನ ಹಿಂದೂ ಪರಿಷತ್ತಿನಲ್ಲಿ ಮಂಡಿಸಿ ಅಂಗೀಕರಿಸಿದ ಗೊತ್ತುವಳಿಯ ಕರಡನ್ನು ಗಾಂಧೀಜಿಯವರೇ ತಯಾರಿಸಿದ್ದರು.

"ಹಿಂದೂ ಸಮಾಜದಲ್ಲಿ ಇನ್ನು ಮುಂದೆ ಯಾರನ್ನೂ ಹುಟ್ಟಿನಿಂದಾಗಿ ಅಸ್ಪೃಶ್ಯ ಎಂದು ಬಗೆಯುವಂತಿಲ್ಲ. ಈ ತನಕ ಯಾರನ್ನು ಅಸ್ಪೃಶ್ಯ ಎಂದು ಬಗೆಯಲಾಗಿತ್ತೋ ಅವರಿಗೆ ಸಾರ್ವಜನಿಕ ಬಾವಿ, ಶಾಲೆ, ಬೀದಿಗಳು, ಸಾರ್ವಜನಿಕ ಸಂಸ್ಥೆಗಳನ್ನು ಮುಕ್ತವಾಗಿ ಬಳಸುವಂತೆ ಉಳಿದ ಸವರ್ಣೀಯ ಹಿಂದೂಗಳಿಗೆ ಇರುವಷ್ಟೇ ಅಧಿಕಾರ ದಕ್ಕುವುದು. ಅನುಕೂಲಕರ ಅವಕಾಶ ಒದಗಿದೊಡನೆ ಅವರ ಈ ಅಧಿಕಾರದ ಮೇಲೆ ಮೊಟ್ಟಮೊದಲನೆಯದಾಗಿ ಸಂವಿಧಾನಾತ್ಮಕ ಮುದ್ರೆ ಒತ್ತಲಾದೀತು....."

ಭಾರತದ ಸಂವಿಧಾನವು ಹಾಗೇ ಪರಿಪಾಲನೆ ಮಾಡಿದೆ. 'ಯರವಾಡ ಒಪ್ಪಂದ'ದ ತರುವಾಯ ಗಾಂಧೀಜಿಯವರು ಅಸ್ಪೃಶ್ಯತಾ ನಿವಾರಣೆ ಮತ್ತು ಜಾತೀಯತೆಯ ನಿವಾರಣೆಗಾಗಿಯೇ ತಮ್ಮ ಶ್ರಮ, ಶಕ್ತಿಗಳನ್ನು ವಿನಿಯೋಗಿಸಿದರು. ನಾಡಿನಾದ್ಯಂತ ಸಂಚರಿಸಿ ಈ ದಿಸೆಯಲ್ಲಿ ಜನಜಾಗೃತಿ ಮೂಡಿಸಿದರು. ಸಹಭೋಜನ, ಮಂದಿರ ಪ್ರವೇಶ ಮುಂತಾದ ವಿವಿಧ ಚಟುವಟಿಕೆಗಳನ್ನು ಪ್ರೋತ್ಸಾಹಿಸಿದರು. 'Even a Vedic text must be rejected if it is repugnant to reson and contrary to experience' (ವೇದವಾಕ್ಯವು ಒಂದೊಮ್ಮೆ ವಿವೇಕಬುದ್ಧಿಗೆ ವ್ಯತಿರಿಕ್ತವಾದಲ್ಲಿ ಮತ್ತು ಪ್ರತ್ಯಕ್ಷದ ಅನುಭವಕ್ಕೆ ವಿರುದ್ಧವಾಗಿದ್ದಲ್ಲಿ ಅದನ್ನೂ ನಿಸ್ಸಂಶಯವಾಗಿ ತಿರಸ್ಕರಿಸಬೇಕು) ಎಂದು ಗಾಂಧಿಜೀ ನಿಲವು ತಾಳಿದರು.

ಗಾಂಧಿಜೀಯವರ ವಿಚಾರಸರಣಿಯಲ್ಲಿ ಆದ ಈ ಉತ್ತರೋತ್ತರ ಪರಿವರ್ತನೆಯು ಅಂಬೇಡ್ಕರರ ಮನತಟ್ಟಿತು. 'ಗಾಂಧೀಜಿಯವರನ್ನು ಈಗ ನಮ್ಮವರೇ ಎಂದೆನ್ನಬೇಕು, ಏಕೆಂದರೆ ಅವರೀಗ ನಮ್ಮಭಾಷೆಯಲ್ಲಿ ನಮ್ಮ ವಿಚಾರಗಳನ್ನು ನುಡಿಸುತ್ತಿದ್ದಾರೆ' ಎಂದು ಪ್ರಾಂಜಲ ಮನಸ್ಸಿನಿಂದ ಸಾರಿದರು ಅಂಬೇಡ್ಕರ್.

ಗಾಂಧೀಜಿಯವರ ಆಪ್ತಕಾರ್ಯದರ್ಶಿಗಳಾಗಿದ್ದ ಪ್ಯಾರೇಲಾಲ್‌ರು ಗಾಂಧೀಜಿಯವರನ್ನು ಕುರಿತು ಹೇಳಿದ್ದೇನೆಂದರೆ: "Classless and castless society was his ideal. When untouchability was really gone, there would be no caste. All will be Hindus, pure and simple" (ವರ್ಗವಿಹೀನ ಮತ್ತು ಜಾತಿರಹಿತ ಸಮಾಜವು ಅವರ ಅಂತಿಮ ಧ್ಯೇಯವಾಗಿತ್ತು. ಅಸ್ಪೃಶ್ಯತೆಯು ಬೇರುಸಹಿತ ಕಿತ್ತೊಗೆಯಲ್ಪಟ್ಟಲ್ಲಿ ಜಾತಿ ಎಂಬುದು ಉಳಿಯುವುದೇ ಇಲ್ಲ, ಪ್ರತಿಯೊಬ್ಬನೂ ತನ್ನನ್ನು ಅಪ್ಪಟ ಹಿಂದೂ ಎಂದುಕೊಂಡಾನು ಎಂದು ಗಾಂಧೀಜಿ ಬಗೆದಿದ್ದರು.)

ಯರವಾಡ ಒಪ್ಪಂದವು ಪ್ರಯಾಗದ ಗಂಗಾ-ಯಮುನಾ ಸಂಗಮದಂತೆ, ಕೂಡಲ ಸಂಗಮದ ಕೃಷ್ಣಾಮಲಪ್ರಭೆಯ ಕೂಡಿಕೆಯಂತೆ ಪಾವನಬಿಂದುವಾಗಿದೆ. ಪ್ರತಿಯೊಬ್ಬ ಹಿಂದೂವೂ ಅಪ್ಪಟ ಹಿಂದೂ ಆಗಿ ಉಳಿಯುವಂತಾಗಲು ಆ ಧಾರೆಯಲ್ಲಿ, ಆ ಹೊನಲಿನಲ್ಲಿ ಸ್ನಾನ, ಧ್ಯಾನ ಮತ್ತು ಎಲ್ಲಕ್ಕೂ ಮಿಗಿಲಾಗಿ ಅನುಸಂಧಾನಕ್ಕೆ ಅಣಿಯಾಗಬೇಕಷ್ಟೆ. ದಲಿತರು ಇಸ್ಲಾಂ ಧರ್ಮವನ್ನು, ಕ್ರೈಸ್ತಧರ್ಮವನ್ನು ಅಪ್ಪಿಕೊಳ್ಳುತ್ತಾರಲ್ಲ ಎಂಬ ಇರುಸುಮುರಿಸಿನಲ್ಲಿ ತೊಳಲಾಡುವುದಕ್ಕಿಂತ ತೋಳುಗಳನ್ನು ವಿಶಾಲಗೊಳಿಸಿ ಹೃದಯಾಂತರಾಳದಿಂದ ದಲಿತರನ್ನು ಸವರ್ಣೀಯ ಹಿಂದುಗಳೇ ಆಲಂಗಿಸುವಂತಾದಲ್ಲಿ ಸಮರಸತೆಯು ಸಾಧ್ಯವಿಲ್ಲವೆ? * * * (ಸಾಭಾರ : ಉತ್ಥಾನ)

ಆರ್ಥಿಕವಾಗಿ ಬೆಲೆಕಟ್ಟುವಿಕೆ ಒಂದೇ ಸಾಕೆ?

– ಜೆ.ಸಿ.ಕುಮಾರಪ್ಪ

ನಾವು ಯಾವ ಅಳತೆಯನ್ನು ಬಳಸುತ್ತೇವೋ, ಹೇಗೆ ಬೆಲೆಕಟ್ಟುತ್ತೇವೋ, ಅದರ ಪ್ರಭಾವ ನಮ್ಮ ಮೇಲೆ ಬೀಳುತ್ತದೆ. ನಾವು ಉಪಯೋಗಿಸುವ ಪ್ರಮಾಣ ಅಳತೆಗಳ ಪ್ರಧಾನ ಗುಣ ನಮ್ಮ ಸಂಸ್ಕೃತಿಯಲ್ಲಿ ಇಳಿದು ಬರುತ್ತದೆ. ನಮ್ಮ ಮೌಲ್ಯಗಳಿದ್ದಂತೆ ನಮ್ಮ ಸಂಸ್ಕೃತಿ. ಆದ್ದರಿಂದ ನಾವು ಬಹಳ ಎಚ್ಚರಿಕೆಯಿಂದ ನಮ್ಮ ಮೌಲ್ಯಗಳ ನಿರ್ಣಯ ಮಾಡಬೇಕು. ಯಾವ ವಿಧಾನವನ್ನು ಅವಲಂಬಿಸುತ್ತೇವೆಂಬುದು ಬಹಳ ಮುಖ್ಯ.

ಈಜಿಪ್ಟ್, ಬ್ಯಾಬಿಲೋನ್, ಗ್ರೀಸ್ ಮತ್ತು ರೋಮ್‌ಗಳ ಪುರಾತನ ನಾಗರೀಕತೆಗಳು ತಮ್ಮ ಕಥೆಗಳನ್ನು ಹೇಳುವಂತಿಲ್ಲ. ಕೆಲವು ದಿನ ವೈಭವದಿಂದ ವಿಜೃಂಭಿಸಿ ಬಹುಬೇಗನೆ ಕಣ್ಮರೆಯಾಗಿ ಹೋದವು. ಸ್ವಾರ್ಥಮಯ ಅಶಾಶ್ವತ ಮೌಲ್ಯಗಳ ಮೇಲೆ ಕಟ್ಟಿದ ನಾಗರಿಕತೆಗಳು ಅವು. ಹಿಂದಯೇ ತಿಳಿಸಿದಂತೆ ಗುಲಾಮಗಿರಿಯಿಂದ ಆ ಸಮಾಜ ರಚನೆಗೆ ಗೆದ್ದಲು ಹಿಡಿದಿತ್ತು. ಸಾಮಂತ ರಾಜರ ಕಪ್ಪಕಾಣಿಕೆಗಳಿಂದ ಕಲುಷಿತವಾಗಿತ್ತು. ಗ್ರೀಕರೂ, ರೋಮನ್ನರೂ ತಮ್ಮ ಭಾವನಾಮಯ ಸ್ವಾರ್ಥಪೂರ್ಣ ಮೌಲ್ಯಗಳ ಗುರುತನ್ನು ತಮ್ಮ ಕಲೆ, ಸಾಹಿತ್ಯ, ಶಿಲ್ಪಗಳಲ್ಲಿ ಸ್ಥಿರವಾಗಿ ಮೂಡಿಸಿದ್ದಾರೆ. ಆ ಗತ ವೈಭವವನ್ನು ನೆನೆದು ಹಿಗ್ಗಲು ಅವರ ಸಂತಾನಕ್ಕೆ ಇವು ಸಾಧನ. ಆದರೆ ಆ ನಾಗರಿಕತೆಗಳು ಈಗ ಸಚೇತನವಲ್ಲ.

ಇವಕ್ಕೆ ವಿರುದ್ಧವಾಗಿ ಅವುಗಳಷ್ಟೇ ಪುರಾತನ, ಇನ್ನೂ ಪುರಾತನವಾದ ಚೀನಾ–ಭಾರತೀಯ ನಾಗರಿಕತೆಗಳು ಇಂದಿಗೂ ಸಜೀವವಾಗಿವೆ, ಶಕ್ತವಾಗಿದೆ. ನಿಸ್ವಾರ್ಥ, ವಾಸ್ತವ ಮೌಲ್ಯಗಳ ಮೇಲೆ ಕಟ್ಟಲ್ಪಟ್ಟಿರುವ ಇವು ಇಂದಿಗೂ ದೃಢವಾಗಿ, ಶಾಶ್ವತವಾಗಿ, ಅಹಿಂಸಾಪೂರ್ಣವಾಗಿ ಬಾಳುತ್ತಿದೆ. ಪೌರ್ವಾತ್ಯರ ಧಾರ್ಮಿಕ ಪ್ರವೃತ್ತಿ, ಪರಲೋಕ ಪ್ರಿಯತೆಗಳನ್ನು ಈಗಿನ ಕಾಲದ ಬುದ್ಧಿವಂತರು ಹಗುರವಾಗಿ ಅಣಕಿಸಬಹುದು. ಅದಕ್ಕಾಗಿ ನಾವು ಸಂಕೋಚಪಡಬೇಕಾಗಿಲ್ಲ. ಚಿರತೆ–ಹುಲಿಗಳ ಹಂತವನ್ನು ದಾಟಿ ಚಿರಂತನ ಪ್ರಗತಿಶೀಲ ಮಾನವನಾಗುವ ಪ್ರಯತ್ನ ಅದು. ಈ ನಾಗರಿಕತೆಗಳು ಇಷ್ಟು ದೀರ್ಘಕಾಲ ಬದುಕಿ ಉಳಿದಿರುವದೇ ನಮ್ಮ ಪುರಾತನರು ಸ್ಥಿರವಾದ ಸಮಾಜವನ್ನು ಕಟ್ಟಲು ಹಾಕಿದ ದೂರದೃಷ್ಟಿಯ ತಳಹದಿಯ ಮೌಲ್ಯಗಳಿಗೆ ಸಾಕ್ಷಿ. ಅವರು ಹಾಕಿದ ಶಾಶ್ವತತೆ, ಅಹಿಂಸೆಗಳ ತಳಹದಿಯ ಮೇಲೆ ನಾವೂ ಮುಂಬರಿಯಬೇಕೆಂದರೆ ನಮ್ಮ ಮೌಲ್ಯಗಳು ಜಗದ್ಧಿತಕಾರಿಯಾಗಿ ವಾಸ್ತವವಾಗಿರಬೇಕು, ಕೇವಲ ಕ್ಷಣಭಂಗುರವಾಗಬಾರದು. ರಾಜಕೀಯ ಸಂಸ್ಥೆಗಳೆಲ್ಲಾ ಕರಗಿಹೋಗಿ ಭವಿಷ್ಯಕ್ಕಾಗಿ ಹಲವು ಯೋಜನೆಗಳಾಗುತ್ತಿರುವ ಈ ಸಮಯದಲ್ಲಿ ನಾವು ಎಚ್ಚರವಾಗಿರಬೇಕಾದುದು ಅಗತ್ಯ.

ದೌರ್ಭಾಗ್ಯವಶದಿಂದ ಜಗದ್ರಂಗದಲ್ಲಿ ಈಗ ನಾಯಕ ಪಾತ್ರ ವಹಿಸಿರುವ ಗುಂಪುಗಳು ಕ್ಷಣಭಂಗುರವಾದ ಹಣವನ್ನೇ ಅಳತೆಯಾಗಿಟ್ಟುಕೊಂಡಿವೆ, ಸಂಪೂರ್ಣವಾಗಿ ಅಲ್ಲದಿದ್ದರೂ ಪ್ರಧಾನವಾಗಿ. ಎಲ್ಲೆಲ್ಲೂ 'ಉನ್ನತ ಜೀವನ', 'ರಾಷ್ಟ್ರೀಯ ವರಮಾನವನ್ನು ಹೆಚ್ಚಿಸುವಿಕೆ', 'ಉತ್ಪಾದನಾ ಶಕ್ತಿ– ದಕ್ಷತೆಗಳ ವರ್ಧನಾ', 'ಆಧುನಿಕ ಕಾಲದ ಸ್ಪರ್ಧೆಯಲ್ಲಿ ಗಿಟ್ಟಿಸುವುದು' ಮುಂತಾದ ಘೋಷಣೆಗಳನ್ನು ಕೇಳುತ್ತೇವೆ. ಲಾಭ, ಬೆಲೆ, ಕೊಳ್ಳುವ

ಸಾಮರ್ಥ್ಯ, ಹೊರದೇಶದ ವ್ಯಾಪಾರ ಇಂಥ ಅಶಾಶ್ವತ ಮೌಲ್ಯಗಳ ಮರಳಿನಲ್ಲಿ ಮನೆಕಟ್ಟುವ ಪ್ರಯತ್ನವೇ ಈಗಿನ ಆರ್ಥಿಕ ವಿಚಾರ. ಉಳಿದ ಜೀವಕೋಟಿಗೂ ಮನುಷ್ಯನಿಗೂ ಇರುವ ಭೇದದ ಬಗ್ಗೆ ಕಿಂಚಿತ್ತೂ ವಿಚಾರ ಹರಿಯದಾಗಿದೆ. ಮಾನವೀಯ, ಆಧ್ಯಾತ್ಮಿಕ ಪ್ರಮಾಣಗಳ ಬಗ್ಗೆ ಮಾತನಾಡಿದರೆ ತಿರಸ್ಕಾರ ಪೂರ್ವಕ ನಗುವ ವಿಪರೀತ ಸ್ವಭಾವ ಬೆಳೆಯುತ್ತಿದೆ. ಆದುದರಿಂದ ಜಾಗರೂಕರಾಗಿರಬೇಕಾದುದು ಅಗತ್ಯ.

ಯಾವ ಸಮಸ್ಯೆಯನ್ನೇ ತೆಗೆದುಕೊಂಡರೂ ನೂರಾರು ದೃಷ್ಟಿ, ನೂರಾರು ಅಂಶ ಇರುತ್ತವೆ. ಯಾವುದನ್ನೂ ತೀರ್ಮಾನಿಸುವ ಮೊದಲು ಈ ಎಲ್ಲಾ ಅಂಶಗಳನ್ನೂ ಗಮನಿಸಬೇಕು; ಎಲ್ಲಾ ದೃಷ್ಟಿಗಳಿಂದಲೂ ನೋಡಬೇಕು, ಆಗ ತೀರ್ಮಾನ ಸರಿ. ಅನೇಕ ಸಲ ಸ್ಪಷ್ಟವಾಗಿ ಗೋಚರಿಸುದ ಮೌಲ್ಯಗಳೇ ಹೆಚ್ಚು ಸ್ಥಿರ ಮತ್ತು ಶಾಶ್ವತ; ಎದ್ದು ಕಾಣುವ ಮೌಲ್ಯಗಳು, ಕೇವಲ ಹಣದ ಅಳತೆಯಿಂದ ಅಳೆಯುವಂಥವು, ಉಳಿದ ದೃಷ್ಟಿಯಿಂದ ಅತ್ಯಂತ ಗೌಣ.

ಅರ್ಥಶಾಸ್ತ್ರೀಯನ್ನು ಕೇಳೀದರೆ "ಬೇಡಿಕೆ–ಪೂರೈಕೆಗಳು ಬೆಲೆಯ ತಂತ್ರಕ್ಕೆ ಅಧೀನ; ಬೆಲೆ ಕಡಿಮೆಯಾದಷ್ಟೂ ಬೇಡಿಕೆ ಹೆಚ್ಚು" ಎನ್ನುತ್ತಾನೆ. ಆದರೆ ಇದು ಯಾವಾಗಲೂ ಸತ್ಯವೆ? ಅರ್ಥಶಾಸ್ತ್ರದ ಪುಸ್ತಕವನ್ನು ಬಿಟ್ಟರೆ ಪ್ರಪಂಚದಲ್ಲಿ ಎಲ್ಲಿಯೂ ಆರ್ಥಿಕ ಮನುಷ್ಯ ಎಂಬುವನು ಇಲ್ಲವೇ ಇಲ್ಲ.

ಗಿರಣಿ ಬಟ್ಟೆ ಬಳಸುವ ಪಟ್ಟಣಿಗನಿಗೆ ಖಾದಿಬಟ್ಟೆ ತುಟ್ಟಿಯೆನಿಸಬಹುದು. ಆದರೆ ನಾವು ಅದರ ಹಿನ್ನೆಲೆಯನ್ನು ಗಮನಿಸುವುದಿಲ್ಲ. ಹಳ್ಳಿಯಲ್ಲಿ ವಾಸಿಸುವನು ತನ್ನ ವಿರಾಮಕಾಲದಲ್ಲಿ ನೂತು ತನ್ನ ನೆರೆಯ ನೇಯ್ಗೆಯವನಿಂದ ಬಟ್ಟೆಮಾಡಿಸಿಕೊಳ್ಳುವುದು ಅಗ್ಗವೆನಿಸುತ್ತದೆ. ತನ್ನ ಬಟ್ಟೆ ತಾನೇ ಒಗೆದುಕೊಳ್ಳುವ, ಸರಳವಾದ ಉಡುಗೆ ತೊಡುವ, ನೆಲದ ಮೇಲೆ ಚಾಪೆ ಹಾಸಿ ಕುಳಿತು ಕೊಳ್ಳುವ ಅವನ ಜೀವನ ವಿಧಾನಕ್ಕೆ ಖಾದಿ ಹೊಂದಿಕೊಳ್ಳುತ್ತದೆ. ನಾಲ್ಕಾಣೆ ಕಡಿಮೆ ಕೊಟ್ಟು ಗಿರಣಿ ಬಟ್ಟೆಕೊಳ್ಳುವವನು ನಾಜೂಕು ಹೊಲಿಗೆ, ಹೆಚ್ಚು ಉಡಿಗೆ ತೊಡಿಗೆಗಳು, ಇಸ್ತ್ರಿ ಮಾಡಲು ಅಗಸನಿಗೆ ಕೂಲಿ ಹೀಗೆ ವೆಚ್ಚ ಮಾಡುವ ಹಣವನ್ನು ಬಟ್ಟೆಯ ಬೆಲೆಗೆ ಸೇರಿಸುವುದಿಲ್ಲ. ಅಲ್ಲದೆ ಪಂಚೆ ಬಿಟ್ಟು ಷರಾಯಿ ತೊಡುವ ನಾಗರಿಕನು ಮನೆಯಲ್ಲಿ ಕುರ್ಚಿ ಮೇಜುಗಳನ್ನು ಕೊಳ್ಳುತ್ತಾನೆ. ಹೀಗೆ ಬೆಲೆಕಟ್ಟುವಾಗ ಯಾವುದು ತುಟ್ಟಿ ಯಾವುದು ಸೋವಿ ಎಂದು ಹೇಳುವುದು ಕಷ್ಟ. ಬೆಲೆ ಕಟ್ಟುವಾಗ ಆ ಪದಾರ್ಥದ ಸುತ್ತಲೂ ಹೆಣೆದುಕೊಂಡಿರುವ ಆರ್ಥಿಕ ಗಂಟುಗಳನ್ನೆಲ್ಲ ಗಮನಿಸಬೇಕಾಗುತ್ತದೆ. ಆದರೆ ಈಗ ಕೇವಲ ಉಪಭೋಗಿಸಲು ಕೊಳ್ಳುವ ಗಿರಾಕಿಯ ದೃಷ್ಟಿಯಿಂದಲೇ ಬೆಲೆಕಟ್ಟುತ್ತಾ ಬಂದಿದ್ದೇವೆ.

ಈ ಯಂತ್ರಯುಗದಲ್ಲಿ ಗುಡಿಕೈಗಾರಿಕೆಗಳು ಬದುಕುತ್ತವೆಯೇ? ಈ ಪ್ರಶ್ನೆ ಆಗಾಗ ಕೇಳಿಬರುತ್ತದೆ. ಇದರ ಪೂರ್ಣ ಚರ್ಚೆ ಬೇರೆಡೆ ಮಾಡಿದರೂ ಇಲ್ಲಿ ಇಷ್ಟು ಹೇಳಬಹುದು. ಗೃಹಕೈಗಾರಿಕೆ ಅಥವಾ ಗ್ರಾಮೋದ್ಯೋಗ ಬರೀ ಒಂದು ಉತ್ಪಾದನಾ ವಿಧಾನವಲ್ಲ, ಒಂದು ಆರ್ಥಿಕ ವಿಧಾನವಲ್ಲ ಅದು ಒಂದು ಆರ್ಥಿಕ ವಿಧಾನದ ಮುಖ್ಯಾಂಶ. ಇನ್ನೊಂದು ಬಗೆಯ ಆರ್ಥಿಕ ವಿಧಾನಕ್ಕೆ 'ಆಧುನಿಕ ಕೈಗಾರಿಕೆ' ಇದ್ದ ಹಾಗೆ. ನಮಗೆ ಯಾವ ವಿಧಾನ ಇಷ್ಟವೆಂಬುದು ನಮ್ಮ ಧ್ಯೇಯಗಳನ್ನು ಅವಲಂಬಿಸಿದೆ. ಅದಕ್ಕೆ ನಮಗೆ ಜೀವನ ಮೌಲ್ಯಗಳು ಯಾವುವು ಎಂಬುದು ಆಧಾರ. ಆದುದರಿಂದ ಮೌಲ್ಯಗಳು ಬೆಲೆಕಟ್ಟುವ ರೀತಿ ಎರಡೂ

ಮಾನವ ಜೀವನದ ಪ್ರಗತಿ ರಥವನ್ನು ಎಳೆಯುವ ಕುದುರೆಗಳು. ಕಡೆಯಲ್ಲಿ, ನಮ್ಮ ಪಯಣದ ದಿಕ್ಕು ಶಾಶ್ವತತೆ, ಅಹಿಂಸೆಗಳ ಕಡೆಗೋ ಅಥವಾ ಅಶಾಶ್ವತತೆ, ಹಿಂಸೆಗಳ ಕಡೆಗೋ ನಿರ್ಧರಿಸುವವು ಅವೇ. ಆದುದರಿಂದ ಈ ಎರಡೂ ವಿಷಯಗಳ ಬಗ್ಗೆ ಬಹಳ ಸ್ಪಷ್ಟವಾಗಿರಬೇಕು. ನಮ್ಮ ಗುರಿ ಅಥವಾ ಮೌಲ್ಯಗಳಲ್ಲಿ ಗೊಂದಲವಿದ್ದರೆ ಸರ್ವನಾಶ ಖಂಡಿತ.

ತಿರುವಾಂಕೂರಿನಲ್ಲಿ ಗರಿಯ ಚಾಪೆಗಳನ್ನು ಚೆನ್ನಾಗಿ ಹೆಣೆಯುತ್ತಾರೆ. ಈ ಕೈಗಾರಿಕೆಯನ್ನು ಪರಿಶೀಲಿಸಲು ಒಮ್ಮೆ ಹೋದಾಗ ಅಲ್ಲಿನ ಕೆಲಸಗಾರ ತನ್ನ ಮನೆಗೆ ಊಟಕ್ಕೆ ಕರೆದ. ಚಾಪೆಗಳಿಗೆ ಮಾರುಕಟ್ಟೆಯೇ ಇಲ್ಲ ಎಂದು ಆತನ ಗೋಳು. ನಮಗೆ ಕುಳಿತುಕೊಳ್ಳಲು ಅವನ ಮನೆಯಲ್ಲಿ ಹಾಕಿದ ಚಾಪೆ ಜಪಾನಿನದು ಎಂದು ಅವನೇ ಹೇಳಿದ. ಅದನ್ನು ಪೇಟೆಯಲ್ಲಿ ಕೊಂಡಿದ್ದ. ಅತಿಥಿಗಳಿಗೆ ಹಾಕಲು ತಾನು ಹೆಣೆದ ಚಾಪೆ ಗೌರವವಸ್ತುವಲ್ಲ ಎಂದೇ ಅವನ ಭಾವನೆ. ಆತನಿಗೆ ಹೇಳಿದೆ, "ಈ ಬಣ್ಣದ ಜಪಾನೀ ಚಾಪೆ ನೀನು ಹೆಣೆದ ಚಾಪೆಗಿಂತ ಶ್ರೇಷ್ಠ ಎಂದು ನೀನೆ ತಿಳಿದಿದ್ದೀಯೆ. ಇನ್ನು ಇತರರು ಇದನ್ನು ಹೇಗೆ ಗೌರವಿಸಬೇಕು? ಗಿರಾಕಿಗಳು ಹೇಗೆ ಕೊಂಡಾರು? ನಿನ್ನ ಕೈಗಾರಿಕೆಯನ್ನು ಹಾಳುಮಾಡಲು ನೀನೇ ಮುಖ್ಯ ಕಾರಣ. ನಿನ್ನ ಮೌಲ್ಯಗಳಲ್ಲೇ ಈ ತಪ್ಪಾಗಿದೆ" ಎಂದೆ. ಆತ ನನಗೆ ಕೈಮುಗಿದು ಆ ಜಪಾನಿ ಚಾಪೆಯನ್ನು ತೆಗೆದುಹಾಕಿ ತಾನೇ ಹೆಣೆದ ಚಾಪೆಯನ್ನು ಹಾಸಿದ.

ಒಂದು ಸಹಕಾರ ಸಂಘ. ಸದಸ್ಯರು ಉತ್ಪಾದನೆ ಮಾಡಿದ ಜೇನುತುಪ್ಪವನ್ನು ಮಾರಿ ಅದು ಅವರಿಗೆ ಅನೇಕ ಅನುಕೂಲತೆಗಳನ್ನು ಕಲ್ಪಿಸಿತ್ತು. ಅದನ್ನೆಲ್ಲ ಹೆಮ್ಮೆಯಿಂದ ವಿವರಿಸುತ್ತಾ ಅದರ ಕಾರ್ಯದರ್ಶಿ ಒಬ್ಬ ಸದಸ್ಯನ ತೋಟಕ್ಕೆ ಕರೆದೊಯ್ದ. ಆ ಸದಸ್ಯ ಮೂವತ್ತು ಜೇನುಗೂಡುಗಳನ್ನು ಇಟ್ಟುಕೊಂಡಿದ್ದ. ಹುಳುಗಳು ಬಹಳ ಚಟುವಟಿಕೆಯಾಗಿದ್ದವು. ನೂರಾರು ಪೌಂಡು ಜೇನುತುಪ್ಪವನ್ನು ಮಾರಲಿಕ್ಕೆ ಸಂಘಕ್ಕೆ ಕಳುಹಿಸುತ್ತಿದ್ದ ಆ ಸದಸ್ಯ. ಇದರಿಂದ ಎಷ್ಟು ಹಣ ಗಳಿಸಿರಬಹುದು ಎಂದು ಲೆಕ್ಕ ಹಾಕುತ್ತಾ ಆತನ ಪರಿಶ್ರಮವನ್ನು ಮೆಚ್ಚಿಕೊಂಡೆ ನಾನು. ಅಷ್ಟರಲ್ಲಿ ಆತನ ಪುಟ್ಟ ಮಗಳು ಅಲ್ಲಿಗೆ ಓಡಿ ಬಂದಳು. "ಈ ಜೇನುಹುಳು ಏನು ಮಾಡುತ್ತವೆ?" ಎಂದಳು ಆ ಹುಡುಗಿ. "ಜೇನುತುಪ್ಪ ನಿನಗೆ ಇಷ್ಟವೇ?" ಎಂದೆ. "ನನಗದರ ರುಚಿ ಗೊತ್ತಿಲ್ಲ" ಎಂದಳು ಆ ಹುಡುಗಿ. ನಾನು ಬೆರಗಾದೆ. ಇತ್ತ ತಿರುಗಿ "ನಿಮ್ಮ ಮನೆಯ ಮಕ್ಕಳಿಗೆ ಜೇನುತುಪ್ಪದ ರುಚಿಯನ್ನೇ ತೋರಿಸಿಲ್ಲವೆ ನೀವು?" ಎಂದು ಆ ದೊಡ್ಡ ಮನುಷ್ಯನನ್ನು ಕೇಳಿದೆ. ಅದಕ್ಕೆ ಸರಿಯಾದ ಉತ್ತರ ಎಂದು ಆತ ತಿಳಿದುದನ್ನು ಹೇಳಿದ: "ಸಂಘಕ್ಕೆ ಕೊಟ್ಟರೆ ಒಂದು ಪೌಂಡು ಜೇನುತುಪ್ಪಕ್ಕೆ ಒಂದು ರುಪಾಯಿ ಕೊಡುತ್ತಾರೆ. ಮನೆಯಲ್ಲಿ ಅದನ್ನು ಬಳಸಲು ಮೊದಲಿಟ್ಟರೆ ಹೇಗಾದೀತು?" ಎಂದ. ಅಲ್ಲಿಯವರೆಗೆ ಆ ಸದಸ್ಯನ ಪರಿಶ್ರಮವನ್ನು ಮೆಚ್ಚುತ್ತಿದ್ದ ನನಗೆ ಹೇಗೆ ಹೇಗೋ ಆಯಿತು. ಆ ಕಾರ್ಯದರ್ಶಿಯ ಕಡೆ ತಿರುಗಿ, "ಈ ಮಗುವಿಗೆ ಜೇನುತುಪ್ಪದ ರುಚಿಯನ್ನೇ ತೋರಿಸದಂಥ ನಿಮ್ಮ ಕೆಲಸವೆಲ್ಲವೂ ವ್ಯರ್ಥ. ಅದಕ್ಕೆ ಹೆಚ್ಚು ಬೆಲೆಕೊಟ್ಟು ನೀವು ಮಾಡಿದುದೇನು ಗೊತ್ತೇ? ಆ ಮಗುವಿಗೆ ಒಂದು ತೊಟ್ಟೂ ಜೇನುತುಪ್ಪವಿಲ್ಲದಂತೆ ದೋಚಿದಿರಿ. ಜೇನುತುಪ್ಪ ಹೊಟ್ಟೆ ತುಂಬಿದ ಹಣವಂತರ ಬಾಯಿಗೆ ಸುರಿದಿರಿ" ಎಂದೆ. ಎಲ್ಲಿ ನೋಡಿದರೂ, ಯಾವ

ಪದಾರ್ಥದ ವಿಷಯವಾದರೂ ಇದೇ ಕಥೆಯೇ! ಹಾಲು, ಹಣ್ಣು, ಮೊಟ್ಟೆ, ಪುಷ್ಟಿಕರವಾದ ಪದಾರ್ಥ ಯಾವುದೇ ಆಗಲಿ ಇದೇ ಹಾಡು: ನಂಜನಗೂಡಿನಲ್ಲಿ ರಸಬಾಳೆಗೇ ಅಭಾವ. ಕೊಡಗಿನಲ್ಲಿ ಕಿತ್ತಳೆಯೇ ಸಿಗದು. ವಾಯುವ್ಯ ಪ್ರಾಂತದಲ್ಲಿ ಕೋಳಿಸಾಕುವ ಪರಿಶ್ರಮ ಹೆಚ್ಚು. ಹಿಂದೆ ಅಲ್ಲಿ ಎಲ್ಲರ ಮನೆಯಲ್ಲೂ ಮೊಟ್ಟೆ ತಿನ್ನುವ ರೂಢಿಯಿತ್ತು. ರಾವಲ್ಪಿಂಡಿ, ಕ್ವೆಟ್ಟಾ, ಅಂಬಾಲಾಗಳಲ್ಲಿ ದಂಡಿನ ಏರ್ಪಾಟಾದ ಮೇಲೆ ಒಳನಾಡಿನಲ್ಲಿ ಮೊಟ್ಟೆಯನ್ನು ತಿಂದವರೇ ಇಲ್ಲ.

ನಮ್ಮ ದೇಶದಲ್ಲಿ ಎಲ್ಲಾ ಕಡೆಯಲ್ಲೂ ನಡೆಯುತ್ತಿರುವುದರ ಸಂಗ್ರಹ ಚಿತ್ರ ಇದು. ನಾವು ಕಟ್ಟುವ ಬೆಲೆ ಸಮಗ್ರವಲ್ಲ. ಅನೇಕ ವೇಳೆ ಪದಾರ್ಥ ಅಗ್ಗವಾಗಿದ್ದರೆ ಸಾಕು, ಕೊಂಡುಬಿಡುತ್ತೇವೆ. ಹಾಗೆ ಕಣ್ಣು ಮುಚ್ಚಿ ಕುರುಡಾಗಿ ನಾವು ಕೊಂಡುದರ ಸಾಮಾಜಿಕ ಪರಿಣಾಮವೇನೆಂಬುದು ನಮಗೆ ತಿಳಿಯದು. ಬೆಳ್ಳಗಿರುವುದೆಲ್ಲಾ ಹಾಲಲ್ಲ. ನಮ್ಮ ನೆರೆಹೊರೆಯುವರು ಮಾಡಿದ ಪದಾರ್ಥಗಳಿಗೆ ಬರೀ ಹಣವನ್ನು ಮೀರಿದ ಕೆಲವು ಅಗೋಚರ ।ಅವ್ಯಕ್ತ ಮೌಲ್ಯಗಳಿವೆ. ಕೊಳ್ಳುವಾಗ ನಮಗೆ ಹಣದ್ದೊಂದೇ ಲೆಕ್ಕವಾದರೂ ಒಂದು ಪದಾರ್ಥದ ಬೆಲೆಯಲ್ಲಿ ಹಣದ ಸ್ಥಾನ ಬಹಳ ಗೌಣವಾದ ಅಂಶ. ಬರಿ ಹಣದ ಲೆಕ್ಕವನ್ನೇ ನಂಬಿದರೆ ಮರದ ಮೇಲೆ ನಿಂತು ಬುಡವನ್ನು ಕಡಿದಂತೆ. ಸಾಮಜಿಕ ದೂರದೃಷ್ಟಿಯನ್ನು ಕಳೆದುಕೊಂಡು ಪರೆಯ ಕಣ್ಣಿನಿಂದ ನೋಡಿದಂತೆ. ಸಮಾಜದಲ್ಲಿ ಸ್ಥಿರತೆ ಶಾಶ್ವತತೆಗಳು ಬೇಕು ಎಂದರೆ ಪ್ರತಿಯೊಂದು ಪ್ರಶ್ನೆಗೂ ತಾತ್ಕಾಲಿಕ ಪರಿಹಾರವನ್ನು ಮಾತ್ರವೇ ನೋಡದೆ, ಶಾಶ್ವತವಾದ ಪರಿಹಾರವನ್ನು ನೋಡುವ ದೂರದರ್ಶಿತ್ವ ಬೇಕು. ಒಂದೊಂದೂ ಕೆಲಸದ ದೀರ್ಘ ಪರಿಣಾಮವನ್ನು ಗಮನಿಸಬೇಕು. ಒಬ್ಬ ವ್ಯಕ್ತಿ ಮಾಡಿದ ಒಂದು ವ್ಯಾಪಾರ ಅಲ್ಲಗೇ ಮುಗಿಯುವುದಿಲ್ಲ. ಸಮಾಜದಲ್ಲಿ ಅದರ ಪರಿಣಾಮವು ಪರಂಪರೆಯಾಗಿ ಸಾಗಿಬರುತ್ತದೆ. ಅದನ್ನು ಅರಿತುಕೊಳ್ಳುವ ಬುದ್ಧಿ ನಮಗಿಲ್ಲದಿರಬಹುದು.

ಹಣದ ಅಳತೆಯನ್ನು ಹಿಡಿದರೆ ಉಳಿದೆಲ್ಲ ಬೆಲೆಗಳೂ, ಉಚ್ಚತರ ಮೌಲ್ಯಗಳೂ ಹಿಂದೆ ಸರಿಯುತ್ತವೆ. ಅದರಲ್ಲಿ ಒಬ್ಬನಿಗೆ ಅಲ್ಪ ಲಾಭವಾಗಿ ಕಂಡರೂ ಇನ್ನೊಬ್ಬನಿಗೆ ಪೂರಾ ನಷ್ಟ, ವಿನಾಶ ಕಾದಿದೆ. ಹಣ ಜೀವಾಳವನ್ನೇ ಹಿಂಡಿಬಿಡುತ್ತದೆ, ಆ ಘಳಿಗೆಯಲ್ಲಿ ಅದರಿಂದ ಸಮಾಜಕ್ಕೆ ಆಗುವ ಹಾನಿ ಅರ್ಥವಾಗದು, ೧೯೪೦ರಲ್ಲಿ ಬಂದ ಬಂಗಾಳದ ಬರಕ್ಕೆ ಕಾರಣ ಈ ಹಣದ ಪದ್ಧತಿಯೆ. ಹಳ್ಳಿಗಳಲ್ಲಿ ಹಸಿದು ಬಿದ್ದ ಜನರ ಬಾಯಿಂದ ಪುಷ್ಟಿಕರ ಆಹಾರವನ್ನು ಪೇಟೆಗೆಳೆದು ಕಾಗದದ ಹಣವನ್ನು ಅವರ ಕೈಗೆ ತುರುಕಿತು ಈ ಹಣದ ಪದ್ಧತಿ. ಆ ಕಾಗದದ ಹಣ ಸಿಗುವುದು ಲಂಡನ್ನಿನಲ್ಲಿ, ಭಾರತದಲ್ಲಲ್ಲ. ಇಷ್ಟೆಲ್ಲ ಆ ಬಡಜನಕ್ಕೆ ತಿಳಿಯುವ ಮೊದಲೇ ಸರ್ವನಾಶವಾಗಿ ಕ್ಷಾಮದೇವತೆ ರುದ್ರನಾಟ್ಯವಾಡಿತು.

ಆದುದರಿಂದ ನಾವು ಬಳಸುವ ಅಳತೆ ಒಂದು ಸಂದರ್ಭಕ್ಕೆ ಮಾತ್ರವಲ್ಲ, ಇಡೀ ಆರ್ಥಿಕವಿಧಾನಕ್ಕೇ ಅನ್ವಯಿಸುವಂತಿರಬೇಕು.

ಹಣಕ್ಕಿಂತ ಹೆಚ್ಚಾದ ಹಾಗೂ ಉತ್ತಮವಾದ ಮೌಲ್ಯಗಳು ಲೋಕದಲ್ಲಿವೆ ಎಂಬುದನ್ನು ಅರಿಯೋಣ.

* * *

ಜನಪದ ಸೇವಾ ಟ್ರಸ್ಟ್ ಸಮಾಚಾರ

ಪ್ರತಿವಾರ ನಡೆಯುವ ಹಿರಿಯ ನಾಗರಿಕರ ಸಭೆಯಲ್ಲಿ ಮೈಸೂರಿನಿಂದ ಶ್ರೀಮತಿ ಉಷಾ ರಮೇಶ್‌ರವರು ಬಂದು ನಾಗರಿಕರಿಗೆ ಕೆಲವು ಭಜನೆಗಳನ್ನು ಹೇಳಿಕೊಟ್ಟರು.

ಮೂರು ಜನ ಹಿರಿಯ ನಾಗರಿಕರಿಗೆ ಮಂಜೂರಾಗಿ ಬಂದಿದ್ದ ವೃದ್ಧಾಪ್ಯವೇತನ ಆದೇಶ ಪತ್ರವನ್ನು ನೀಡಲಾಯಿತು.

ಮಂಡ್ಯದಲ್ಲಿ ವಿಜಯಾ ಬ್ಯಾಂಕ್ ಮತ್ತು ಖಾದಿ ಆಯೋಗದ ಸಂಯುಕ್ತಾಶ್ರಯದಲ್ಲಿ ನಡೆದ ಗೃಹ ಕೈಗಾರಿಕೋತ್ಪನ್ನದ ಪ್ರದರ್ಶನ ಮತ್ತು ಮಾರಾಟದ ಉದ್ಘಾಟನೆಯನ್ನು ಟ್ರಸ್ಟಿನ ಅಧ್ಯಕ್ಷರು ನೆರವೇರಿಸಿದರು.

ಬೆಂಗಳೂರಿನಲ್ಲಿರುವ ಕರ್ನಾಟಕ ಸರ್ವೋದಯ ಸಂಘ ಟ್ರಸ್ಟಿನ ಅಧ್ಯಕ್ಷರನ್ನು ಆಹ್ವಾನಿತ ಸದಸ್ಯರನ್ನಾಗಿ ಆಯ್ಕೆ ಮಾಡಿಕೊಂಡಿದೆ .

ನಾಗಮಂಗಲದಲ್ಲಿರುವ ಕರ್ನಾಟಕ ರಾಜ್ಯ ಅಂಧ ಮಕ್ಕಳ ಕೇಂದ್ರದ ಮುಖ್ಯಸ್ಥರು ಮತ್ತು ಕಾರ್ಯಕರ್ತರು ಟ್ರಸ್ಟಿಗೆ ಭೇಟಿಕೊಟ್ಟರು.

ಬೆಂಗಳೂರಿನಲ್ಲಿಯ ಉತ್ತರ ಕರ್ನಾಟಕ ಆಹಾರ ಮರಾಟ ಕೇಂದ್ರದ ಮುಖ್ಯಸ್ಥರಾದ ಶ್ರೀ ಸುರೇಶ್ ಕಲಘಟಗಿ ಮತ್ತು ಅವರ ಕೇಂದ್ರದ ಸುಮಾರು ೨೮ ಕಾರ್ಯಕರ್ತರು ಭೇಟಿಕೊಟ್ಟರು.

'ಈ ಟಿವಿ'ಯ ಕನ್ನಡ ವಿಭಾಗದ ಮುಖ್ಯಸ್ಥರಾದ ಸುರೇಂದ್ರ ಮತ್ತು ಅವರ ಸಹೋದ್ಯೋಗಿ ಸಾರಿಕಾ ಭೇಟಿಕೊಟ್ಟರು.

ವೈರಮುಡಿ ಉತ್ಸವದ ಸಂದರ್ಭದಲ್ಲಿ ಪ್ರತಿವರ್ಷದಂತೆ ಯಾತ್ರಾರ್ಥಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಲಾಯಿತು.

ಕರ್ನಾಟಕ ರಾಜ್ಯ ಖಾದಿ ಗ್ರಾಮೋದ್ಯೋಗ ಮಂಡಳಿಯ ಪ್ರಧಾನ ಕಾರ್ಯನಿರ್ವಹಣಾಧಿಕಾರಿ ಶ್ರೀ ರಮೇಶಪ್ಪ ಮತ್ತು ಮಂಡ್ಯ ಜಿಲ್ಲಾ ಖಾದಿ ಅಧಿಕಾರಿ ವೆಂಕಟೇಶ್ ಮತ್ತು ಸಿಬ್ಬಂದಿ ವರ್ಗದವರು ಟ್ರಸ್ಟಿಗೆ ಭೇಟಿಕೊಟ್ಟರು.


ಟ್ರಸ್ಟಿನ ಖಜಾಂಚಿ ಶ್ರೀ ಪ್ರಭಾಕರ್‌ರವರು ಭೇಟಿಕೊಟ್ಟು ಟ್ರಸ್ಟಿನ ಲೆಕ್ಕಪತ್ರಗಳನ್ನು ಪರಿಶೀಲಿಸಿದರು ಮತ್ತು ಸಿಬ್ಬಂದಿಯವರಿಗೆ ವೇತನದ ವ್ಯವಸ್ಥೆ ಮಾಡಿದರು.

ಮೈಸೂರಿನಲ್ಲಿ ರೈಲ್ವೆ ಇಲಾಖೆಯ ಸಿಬ್ಬಂದಿಯ ಸೇವಾ ಸಂಸ್ಥೆಯು ತಮ್ಮ ಸಂಘದ 'ಮರ್ಸಿ' ಕಾನ್ವೆಂಟ್‌ನಲ್ಲಿ ಏರ್ಪಡಿಸಿದ್ದ ನಾಲ್ಕನೆ ವಾರ್ಷಿಕೋತ್ಸವದಲ್ಲಿ ಟ್ರಸ್ಟಿನ ಅಧ್ಯಕ್ಷರು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

ಮೈಸೂರಿನ ಜೆ.ಎಸ್.ಎಸ್ ವಿದ್ಯಾಸಂಸ್ಥೆಯಲ್ಲಿ ಅಭಿವೃದ್ಧಿ ಮತ್ತು ಸಂವಹನ ವಿಷಯದಲ್ಲಿ ತರಬೇತಿ ಪಡೆಯುತ್ತಿರುವ ಸುಮಾರು ೩೫ ವಿದ್ಯಾರ್ಥಿಗಳು ಹೊಸ ಜೀವನ ದಾರಿ ಕೇಂದ್ರದಲ್ಲಿ ಎರಡು ದಿನದ ಕಾರ್ಯಾಗಾರ ನಡೆಸಿದರು. ಕಾರ್ಯಾಗಾರದ ಮೇಲ್ವಿಚಾರಕರಾಗಿ ಶ್ರೀ ಅಶೋಕರಾವ್ ಮತ್ತು ಶ್ರೀ ಉ.ನಾ.ರವಿಕುಮಾರ್‌ರವರು ಕಾರ್ಯನಿರ್ವಹಿಸಿದರು. ಈ ಕಾರ್ಯಾಗಾರದ ಉದ್ಘಾಟನೆಯನ್ನು ಟ್ರಸ್ಟಿನ ಅಧ್ಯಕ್ಷರು ನೆರವೇರಿಸಿದರು.

ಜನಪದ ನಿಲಯದ ಅಂತರಂಗದಲ್ಲಿ . . . ೫೩

– ಸುರೇಂದ್ರ ಕೌಲಗಿ



ಟ್ರಸ್ಟಿನ ಬೆಳವಣಿಗೆಗೆ ನೈತಿಕ ಶಕ್ತಿಯನ್ನು ಕೊಟ್ಟ ವ್ಯಕ್ತಿಗಳಲ್ಲಿ ಜಿ.ವಿ.ನಾರಾಯಣಮೂರ್ತಿ ಒಬ್ಬರು. ಇವರು ಮೂಲತಃ ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿಯವರು. ಜಿ.ವಿ.ನಾ ಎಂದೇ ಮಿತ್ರ ಸಮೂಹದಲ್ಲಿ ಚಿರಪರಿಚಿತರಾಗಿದ್ದ ನಾರಾಯಣಮೂರ್ತಿ ತಮ್ಮ ಗಾಂಧೀ ವಿಚಾರ ತಜ್ಞತೆಯಿಂದ, [redacted] ಸ್ನೇಹಪರ ವ್ಯವಹಾರದಿಂದ, ಪ್ರಾಮಾಣಿಕ ವಾತ್ಸಲ್ಯದಿಂದ ಅವರ ವ್ಯಕ್ತಿತ್ವ ಲೋಹ ಚುಂಬಕದಂತಿತ್ತು. ಕೃಷ್ಣಕಾಯದ ಹೊಳೆಯುವ ಕಣ್ಣುಗಳ ಅಷ್ಟೇನೂ ಎತ್ತರವಲ್ಲದ ನಾರಾಯಣಮೂರ್ತಿಯವರ ವ್ಯಕ್ತಿತ್ವ ಅವರ ಸಂಪರ್ಕಕ್ಕೆ ಬಂದವರ ಮನಸ್ಸಿನಲ್ಲಿ ದೀರ್ಘಕಾಲ ಉಳಿಯುವಂಥದಾಗಿತ್ತು. ಪೂರ್ಣತಃ ವೈದಿಕ ಸಂಪ್ರದಾಯದಲ್ಲಿ ಅವರು ಬೆಳೆದು ಬಂದವರಾಗಿದ್ದರೂ ಗಾಂಧಿ ವಿಚಾರದ ಮೂಲಕ ವಿಶ್ವಪಥ, ಮನುಜಮತ ಎಂಬುದನ್ನು ತಮ್ಮ ಆಚರಣೆಯಲ್ಲಿ ತಂದುಕೊಂಡವರಾಗಿದ್ದರು. ಗಾಂಧಿ ಗ್ರಂಥಮಾಲೆಯ ಸಂಪಾದಕ ವರ್ಗದವರಲ್ಲಿ ಒಬ್ಬರಾಗಿದ್ದ ನಾರಾಯಣಮೂರ್ತಿಯವರು ಇಂಗ್ಲಿಷ್‌ನಲ್ಲಿದ್ದ ಬಹುಮುಖ್ಯ ಗಾಂಧಿ ವಿಚಾರದ ಭಾಗವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಬಹಳಷ್ಟು ಗಾಂಧಿ ಸಾಹಿತ್ಯವನ್ನು ಕನ್ನಡಿಗರಿಗೆ ಕೊಟ್ಟರು. ಜಿ.ವಿ.ನಾ ರವರು ಕನ್ನಡಕ್ಕೆ ತರ್ಜುಮೆ ಮಾಡಿದ ಗಾಂಧಿ ಸಾಹಿತ್ಯದಲ್ಲಿ ಮುಖ್ಯವಾದುದು 'ಮಹಿಳೆಯರು,' 'ಗಾಂಧೀಜಿಯ ಪತ್ರ ವ್ಯವಹಾರ' ಇತ್ಯಾದಿಗಳು. ಮಿತಭಾಷಿಯಾಗಿದ್ದುದರಿಂದ ಕಾರ್ಯದ ಪ್ರಮಾಣವು ಹೆಚ್ಚಾಗಿತ್ತು. ನಾರಾಯಣಮೂರ್ತಿಯವರು ಜನಪದ ಸೇವಾ ಟ್ರಸ್ಟಿನ ಸಂಪರ್ಕಕ್ಕೆ ಬಂದಾಗಲೆಲ್ಲ ತುಂಬಾ ಹಸನ್ಮುಖಿಯಾಗಿರುತ್ತಿದ್ದರು ಮತ್ತು ಟ್ರಸ್ಟಿನ ಕೆಲಸ ಕಾರ್ಯಗಳ ಬಗ್ಗೆ ಉತ್ಸಾಹದಿಂದ ಮಾತನಾಡುತ್ತಿದ್ದರು. ಅಷ್ಟೇ ಅಲ್ಲ ಟ್ರಸ್ಟಿನ ಕಾರ್ಯಕ್ರಮಗಳ ಬಗ್ಗೆ ತೀಕ್ಷ್ಣವಾದ ಪ್ರಶ್ನೆಗಳನ್ನೊಡ್ಡಿ ವಿಮರ್ಶೆಗೆ ಒಳಪಡಿಸುತ್ತಿದ್ದರು. ಆದ್ದರಿಂದ ನಾರಾಯಣಮೂರ್ತಿಯವರೊಂದಿಗೆ ಮಾತನಾಡುವಾಗ ಟ್ರಸ್ಟಿನ ಮುಂದಿನ ಕೆಲಸಗಳ ಬಗ್ಗೆ ಪ್ರೇರಣೆ ದೊರೆಯುತ್ತಿದುದರ ಜೊತೆಗೆ ಟ್ರಸ್ಟಿನ ಕಾರ್ಯಕಲಾಪಗಳ ಬೆಳವಣಿಗೆಗಳ ಬಗ್ಗೆ ಒಂದು ರೀತಿಯ ಅಧೀರತೆಯೂ ಉಂಟಾಗುತ್ತಿತ್ತು. ಆದರೂ ನಾರಾಯಣಮೂರ್ತಿಯವರೊಂದಿಗೆ ಮಾತನಾಡುವುದೆಂದರೆ ಅದೊಂದು ಬಗೆಯ ಶಿಕ್ಷಣವೇ ಆಗಿತ್ತು. ನಾರಾಯಣಮೂರ್ತಿಯವರು ಸ್ವತಃ ಅಧ್ಯಾಪಕರಾಗಿದ್ದರು ಮತ್ತು ಮಾಯಸಂದ್ರದಲ್ಲಿ ಶಿಕ್ಷಣ ಸಂಸ್ಥೆಯನ್ನು ಸಹ ಪ್ರಾರಂಭಿಸಿದ್ದರು. ಆ ಶಿಕ್ಷಣ ಸಂಸ್ಥೆಯ ಹೆಸರು ನೆಹರೂ ವಿದ್ಯಾಲಯ. ಅದು ಇಂದಿಗೂ ಕೆಲಸ ಮಾಡುತ್ತಿದೆ. ನಾರಾಯಣಮೂರ್ತಿಯವರಲ್ಲಿದ್ದಂಥ ವಿಶೇಷಗುಣವೇನೆಂದರೆ ತಮ್ಮೆಲ್ಲ ಆತ್ಮೀಯ

ಮಿತ್ರರೊಂದಿಗೆ ಮಾಡುತ್ತಿದ್ದ ಪತ್ರವ್ಯವಹಾರ. ಅವರು ಯಾವುದೇ ವಿಷಯದ ಬಗ್ಗೆ ಒಂದು ಅಂಚೆಕಾರ್ಡಿನಲ್ಲಿ ಹಿತಮಿತವಾದ ಶಬ್ದಗಳೊಂದಿಗೆ ಗಹನವಾದ ವಿಚಾರವನ್ನು ವ್ಯಕ್ತಪಡಿಸುತ್ತಿದುದು. ಆ ಪುಟ್ಟ ಅಂಚೆ ಕಾರ್ಡ್‌ನಲ್ಲಿಯೂ ಸಹ ಅಷ್ಟು ವಿಷಯಗಳನ್ನು ಬರೆಯಬೇಕಿದ್ದರೂ ಸಹ ಮಾರ್ಜಿನ್ ಇಲ್ಲದೆ ಬರೆಯುತ್ತಿರಲಿಲ್ಲ. ಸ್ಫುಟವಾದ ಅಕ್ಷರಗಳು ಅರ್ಥವತ್ತಾದ ವಾಕ್ಯಗಳು, ಕೊನೆಯಲ್ಲಿ ಮಾರ್ಮಿಕವಾದ ಮಾತು. ಇದು ಜಿ.ವಿ.ನಾ ರವರ ಪತ್ರ ಬರೆಯುವ ಶೈಲಿ. ಜಿ.ವಿ.ನಾ ಎಂಬ ಹೆಸರಿನಲ್ಲಿ 'ನಾ' ಎಂಬ ಅಹಂವಾಚಕ ಶಬ್ದ ಇತ್ತಾದರೂ ಅವರ ವ್ಯವಹಾರದಲ್ಲೆಲ್ಲ ನೀ, ನೀವು ಎಂಬುದೇ ಪ್ರಧಾನವಾಗಿರುತ್ತಿತ್ತು. ನಾರಾಯಣಮೂರ್ತಿಯವರು ಒಂದೆರಡು ಬಾರಿ ಮಾತ್ರ ಮೇಲುಕೋಟೆಗೆ ಬಂದು ಟ್ರಸ್ಟಿನ ಕಾರ್ಯಕ್ರಮಗಳನ್ನು ನೋಡಿದ್ದರು. ಆಗ ಟ್ರಸ್ಟ್ ತಮ್ಮ ಬೆಳವಣಿಗೆಯ ಪ್ರಕ್ರಿಯೆಯಲ್ಲಿತ್ತು. ಟ್ರಸ್ಟ್ ಗಾಂಧೀ ವಿಚಾರದ ಸಂಸ್ಥೆಯಾಗಿದ್ದುದರಿಂದ ನಾರಾಯಣಮೂರ್ತಿರವರು ಟ್ರಸ್ಟಿಗೆ ಗಾಂಧೀ ವಿಚಾರ ಪ್ರಣೀತ ಕಾರ್ಯದ ನೀಲನಕ್ಷೆಯನ್ನು ಅನೌಪಚಾರಿಕವಾಗಿ ಹಾಕಿಕೊಡುತ್ತಿದ್ದರು. ಅವರ ಆತಿಥ್ಯವನ್ನು ಮರೆಯುವಂತಿಲ್ಲ. ಅವರಿಗೆ ಅಪಾರವಾದ ಶಿಷ್ಯವರ್ಗ ಮತ್ತು ಮಿತ್ರರ ಸಮೂಹವಿತ್ತು. ಯಾವುದೇ ಅಧಿಕಾರದಲ್ಲಿರದಿದ್ದರೂ ತಮ್ಮ ಕರ್ಮಶಕ್ತಿಯ ಬಲದಿಂದ ಚಿಕ್ಕನಾಯಕನಹಳ್ಳಿಯ ಸಾಮಾಜಿಕ ಜೀವನದ ಮೇಲೆ ಬಹಳಷ್ಟು ಪ್ರಭಾವವನ್ನು ಹೊಂದಿದ್ದರು. ಅವರಿಗೆ ೬೦ ವರ್ಷಗಳು ತುಂಬಿದಾಗ ಚಿಕ್ಕನಾಯಕನಹಳ್ಳಿಯಲ್ಲಿ ತುಂಬಾ ಆತ್ಮೀಯವಾದ ಸನ್ಮಾನ ಸಮಾರಂಭ ನಡೆಯಿತು. ಆ ಪ್ರದೇಶದ ಎಲ್ಲ ಅಧಿಕಾರಿಗಳು, ರಾಜಕಾರಣಿಗಳು, ಜನಸಾಮಾನ್ಯರು, ಅಧ್ಯಾಪಕ ವೃಂದದವರು, ವಿದ್ಯಾರ್ಥಿಗಳು ಬಹು ದೊಡ್ಡ ಸಂಖ್ಯೆಯಲ್ಲಿ ಸೇರಿದ್ದರು. ಇಂದು ಜನಪದ ಸೇವಾ ಟ್ರಸ್ಟ್ ವೈಚಾರಿಕ ಬದ್ಧತೆಯನ್ನು, ಕಾರ್ಯನಿಷ್ಠತೆಯನ್ನು ಮತ್ತು ಕಾರ್ಯಕ್ರಮದ ಬಗ್ಗೆ ಮುಂದಾಲೋಚನೆಯನ್ನು ಬೆಳೆಸಿಕೊಂಡಿದ್ದರೆ ಅದಕ್ಕೆ ಕಾರಣ ಟ್ರಸ್ಟಿನೊಂದಿಗೆ ಉಂಟಾದ ಜಿ.ವಿ.ನಾ ರವರ ಚುಂಬಕ ಸ್ಪರ್ಷ.

೨೦೦೮ ಮಾರ್ಚ್ ಮಾಹೆಯ ಟ್ರಸ್ಟಿನ ದಾನಿಗಳು

೧. ಶ್ರೀಮತಿ ಲಲಿತಾ ಎಂ.ಹೆಗಡೆ, ಬೆಂಗಳೂರು
೨. ಶ್ರೀ ಎಚ್.ಎನ್.ವೆಂಕಟೇಶ್, ಬೆಂಗಳೂರು
೩. ಶ್ರೀಮತಿ ಪದ್ಮಿನಿ ರಘುನಂದನ್, ಬೆಂಗಳೂರು
೪. ಶ್ರೀ ಕೆ.ಬಿ.ನಾರಾಯಣ್, ಬೆಂಗಳೂರು
೫. ಶ್ರೀ ಸಿ.ಕೃಷ್ಣ, ರಾಮನಾಥಪುರ
೬. ಶ್ರೀಮತಿ ಟಿ.ನಾಗರತ್ನಮ್ಮ, ಚನ್ನರಾಯಪಟ್ಟಣ
೭. ಶ್ರೀ ದೇಶಪಾಂಡೆ ಎಸ್.ಡಿ.ಇ; ಬಿ.ಎಸ್.ಎನ್.ಎಲ್, ಜಮಖಂಡಿ

ಮತ್ತು

ಸಂಸ್ಥೆಯ ಎಲ್ಲ ಮಾಹೆಯಾನ ದಾನಿಗಳು

ಬಾಂಧವ್ಯ

(ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾ ಸ್ಮರಿಸುತ್ತದೆ)

೧) ಶ್ರೀ ರಮೇಶ್ ಕುಲಾಲ್,	ಮುಂಬೈ
೨) ಶ್ರೀ ಬಿಸಪ್ಪಗೌಡರು,	ಕೋಲಾರ
೩) ಶ್ರೀ ಎಸ್.ಶಂಕರಪ್ಪ,	ಮೈಸೂರು
೪) ಶ್ರೀ ಜಿ.ಎನ್. ಕೃಷ್ಣಶಾಸ್ತ್ರಿಗಳು,	ಮೈಸೂರು
೫) ಶ್ರೀ ಎನ್.ಆರ್.ಸುಬ್ರಹ್ಮಣ್ಯ	ಬೆಂಗಳೂರು
೬) ಶ್ರೀಮತಿ ರಂಗಮಣಿ ಜನಾರ್ಧನ್	ಬೆಂಗಳೂರು
೭) ಶ್ರೀಮತಿ ಚಂಪೂಬಾಯಿ ಸೆಟ್ಲೂರ್	ಬೆಂಗಳೂರು
೮) ಶ್ರೀ ಎಲ್.ಎನ್.ಶಾಸ್ತ್ರಿ	ಮೈಸೂರು
೯) ಶ್ರೀ ಆರ್.ನಾರಾಯಣಮೂರ್ತಿ	ಅರಸಿಕೆರೆ
೧೦) ಶ್ರೀ ಖಾದ್ರಿ ಶ್ರೀನಿವಾಸನ್	ಮೈಸೂರು
೧೧) ಶ್ರೀಮತಿ ಭಾರತಿ. ಬಿ.ಎಂ. ದೇಸಾಯಿ	ಬೆಂಗಳೂರು

ಈ ಬಂಧುಗಳು ತಮ್ಮ ಚಂದಾವನ್ನು ನವೀಕರಿಸಿದ್ದಕ್ಕಾಗಿ ಮತ್ತು ಹೊಸದಾಗಿ ಜನಪದ ವಿಚಾರಕ್ಕೆ ಚಂದಾದಾರರಾದ ಶ್ರೀ ಪ್ರಕಾಶ್.ಸಿ. ಪಾಟಿಲ್, ಮಂಡ್ಯ; ಶ್ರೀ ಸುರೇಶ್ ಕಲಘಟಗಿ, ಬೇಂಗಳೂರು; ಶ್ರೀ ಕೆ.ಆರ್. ವಿಶ್ವನಾಥ್ ವಕೀಲರು, ಮೈಸೂರು; ಶ್ರೀ ಬಿ.ಎಸ್. ಶಾಮಸುಂದರ್, ಬೆಂಗಳೂರು ಇವರಿಗೆ ಕೃತಜ್ಞತೆಗಳು.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ. ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ 15 ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

–ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

(–ಸಂಪಾದಕರು)

ತೆರೆದ-ಅಂಚೆ

KA / SK / MND / 470 / 2006-2008
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

JANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431.
DTP &. Printed at SANKETH MUDRANA, MELKOTE Phone : 08236 – 209016 e-mail : janapada@yahoo.com